# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮಳ್ಳೇಕಟ್ಟೆ

ದಾವಣಗೆರೆ
ಶನಿವಾರ, ನವೆಂಬರ್ 28, 2020

ಸಂಪುಟ : 47 ಸಂಚಿಕೆ : 208 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 3.00 www.janathavani.com janathavani@mac.com



## ಮೊದಲನೇ ವರ್ಷದ ಪುಣ್ಯಸ್ಮರಣೆ



**ದಿ. ದೊಗ್ಗಳ್ಳಿ ಜಯಣ್ಣನವರು**

ನಿಧನ : 28.11.2019

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿರುವ

ಮಕ್ಕಳು, ಅಳಿಯಂದಿರು, ಸೊಸೆ,
ಮೊಮ್ಮಕ್ಕಳು, ಬಂಧು-ಮಿತ್ರರು
ಹಾಗೂ ದೊಗ್ಗಳ್ಳಿ ವಂಶಸ್ಥರು.

ಬಾಪೂಜಿ ವಿದ್ಯಾಸಂಸ್ಥೆ (ರಿ.)

**ಪಿ.ಎಸ್.ಎಸ್.ಇ.ಎಂ.ಆರ್. ಸ್ಕೂಲ್ / ಜ್ಯೂನಿಯರ್ ಕಾಲೇಜ್**

ಶಿವಗಂಗೋತ್ರಿ, ತೋಳಹುಣಸೆ, ದಾವಣಗೆರೆ.

## 13 ನೇ ವರ್ಷದ ಪುಣ್ಯಸ್ಮರಣೆ



"ನಮ್ಮ ಬದುಕಿಗೆ ಧನ್ಯತೆ, ಕ್ರಿಯಾಶೀಲತೆ ಮತ್ತು
ಮಮತೆಯನ್ನು ತುಂಬಿ, ನಿಸರ್ಗದ ಮಡಿಲಲ್ಲಿ
ನಮ್ಮೆಲ್ಲರನ್ನು ಬಿಟ್ಟು, ಸ್ವರ್ಗ ಸೇರಿದ ನಿಮ್ಮ ಆತ್ಮ
ಮತ್ತೊಮ್ಮೆ ಭೂಮಿತಾಯಿಯ ಮೇಲೆ ಪ್ರತಿಬಿಂಬಿಸಲಿ"

**ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ**

ಜನನ : 10 ಆಗಸ್ಟ್ 1934 ಮರಣ : 28 ನವೆಂಬರ್ 2007

ನಿಮ್ಮ ಆದರ್ಶ ಮತ್ತು ಆಶೀರ್ವಾದ
ಶಾಶ್ವತವಾಗಿ ನಮ್ಮ ಮೇಲಿರಲಿ.
ಇಂದು, ನಾಳೆ ಮತ್ತು ಎಂದೆಂದಿಗೂ
ನಿಮ್ಮ ಧ್ಯಾನದಲ್ಲಿರುವ,

ಅಧ್ಯಕ್ಷರು, ನಿರ್ದೇಶಕರು, ಡೀನ್‌ರವರು, ಪ್ರಾಚಾರ್ಯರು, ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು

**ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಆಂಗ್ಲ ಮಾಧ್ಯಮ ವಸತಿಯುತ ಶಾಲೆ**

(ಸಿ.ಬಿ.ಎಸ್.ಇ. ನವದೆಹಲಿಯಿಂದ ಮಾನ್ಯತೆ ಪಡೆದಿದೆ. ಐ.ಎಸ್.ಓ. 9001 :2000)
ಶಿವಗಂಗೋತ್ರಿ, ತೋಳಹುಣಸೆ, ದಾವಣಗೆರೆ.

॥ ಕಲ್ಲೇಶ್ವರ ಪ್ರಸನ್ನ ॥ ॥ ಬಕ್ಕೇಶ್ವರ ಪ್ರಸನ್ನ ॥

## 13 ನೇ ವರ್ಷದ ಪುಣ್ಯಸ್ಮರಣೆ



'ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳು ಒಂದಾಗು ಮಂಕುತಿಮ್ಮ...'
ಎಂಬ ಕವಿವಾಣಿಯಂತೆ
ಎಲ್ಲರೊಳು ಒಂದಾಗಿ ಬದುಕಿ
ನಮ್ಮ ಮನೆ, ಮನಗಳನ್ನು ಬೆಳಗಿದ ನೀವು
ನಮ್ಮನ್ನಗಲಿ ಇಂದಿಗೆ 13 ವರ್ಷಗಳಾದವು.
ವಾತ್ಸಲ್ಯಮಯಿ ತಾಯಿಯಾಗಿ
ಎಲ್ಲರ ಅಕ್ಕರೆಗೂ ಪಾತ್ರರಾಗಿದ್ದ ನೀವು
ನಿತ್ಯ ಸ್ಮರಣೀಯರಾಗಿದ್ದೀರಿ... ಸದಾ ನಿಮ್ಮ ಸ್ಮರಣೆಯಲ್ಲಿರುವ

**ಡಾ. ಶಾಮನೂರು ಶಿವಶಂಕರಪ್ಪ**

ಮತ್ತು ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು
ಹಾಗೂ ಶಾಮನೂರು ಕುಟುಂಬ ವರ್ಗ

**ಶ್ರೀಮತಿ ಪಾರ್ವತಮ್ಮ ಡಾ. ಶಾಮನೂರು ಶಿವಶಂಕರಪ್ಪ**

ಜನನ : 10-8-1934 ಮರಣ : 28-11-2007

**ಭಾವಪೂರ್ಣ ಗೌರವಾಂಜಲಿ ಸಲ್ಲಿಸುವವರು :**

ಶ್ರೀ ಎಸ್.ಎಸ್. ಬಕ್ಕೇಶ್, ಶ್ರೀಮತಿ ಪ್ರೀತಿ ಬಕ್ಕೇಶ್
ಚಿ॥ ಆಶಿಕ್, ಅಕ್ಷತಾ, ಅದಿತ್
ಶ್ರೀ ಎಸ್.ಎಸ್. ಗಣೇಶ್ , ರೇಖಾ ಗಣೇಶ್
ಶ್ರೀಮತಿ ಸ್ವಾತಿ ಅಭಿಜಿತ್,ಆಂಚಲ್ ಪ್ರಶಾಂತ್ ಜೆ.ಶೆಟ್ಟರ್, ಅಖಿಲಾ
ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್, ಪ್ರಭಾ ಮಲ್ಲಿಕಾರ್ಜುನ್
ಚಿ॥ ಸಮರ್ಥ್,ಶ್ರೇಷ್ಠಾ, ಶಿವ
ಶ್ರೀಮತಿ ಡಾ॥ ಮಂಜುಳ, ಡಾ॥ ಶಿವಶಂಕರ್
ಶ್ರೀಮತಿ ಸಂಜನ, ಡಾ॥ ವಿನಯ್, ಸೆಜುತಿ
ಶ್ರೀಮತಿ ಸುಧಾ, ರಾಜೇಂದ್ರ ಪಾಟೀಲ್, ಶ್ರೀಮತಿ ಸುಪ್ರಿಯಾ ಪ್ರತೀಕ್
ಶ್ರೀಮತಿ ಡಾ॥ ಶೈಲಾ, ಡಾ॥ ಅರ್ಪಣ್ ಭಟ್ಟಾಚಾರ್ಯ
ಚಿ॥ ಶ್ರೇಯಸಿ, ಅಮರ್ತ್ಯ

ಶ್ರೀಮತಿ ಮೀನಾ, ಡಾ॥ ಶರಣ್ ಪಾಟೀಲ್
ಚಿ॥ ಶೃಷ್ಟಿ, ಸಂಸ್ಕೃತಿ
ಶ್ರೀಮತಿ ಸುಶೀಲಮ್ಮ, ಲಿಂ॥ ಶಾಮನೂರು ಬಸವರಾಜಪ್ಪ
ಡಾ॥ ಎಸ್.ಬಿ.ಮುರುಗೇಶ್, ಜ್ಯೋತಿ ಮುರುಗೇಶ್
ಶ್ರೀ ಆಕರ್ಷ್, ಶ್ರೀಮತಿ ಸಮತಾ, ಅಲಂಕೃತಾ
ಶ್ರೀಮತಿ ರತ್ನಾ, ಜಿ.ಎಸ್.ಪರಮೇಶ್ವರಗೌಡ್ರು
ಶ್ರೀ ಸಂದೀಪ್, ಶ್ರೀಮತಿ ಶ್ವೇತಾ, ಸ್ವರೂಪ್, ಶ್ರೀಮತಿ ಪ್ರಿಯ
ಶ್ರೀಮತಿ ಉಮಾ, ಡಾ॥ ಧನ್ಯಪ್ರಕಾಶ್, ಚಿ॥ ಸರ್ವೇಶ್
ಶ್ರೀಮತಿ ವೀಣಾ, ಕಿಶೋರ್‌ಗೌಡ, ಚಿ॥ ಸೇಜಲ್
ಶ್ರೀಮತಿ ಅನುಪಮಾ, ಚಂದ್ರಶೇಖರ್, ಚಿ॥ ಸಮೃದ್ಧ್, ಚಿ॥ ಸಂದೀಪ್

**ಹಾಗೂ ಶಾಮನೂರು ಮನೆತನದವರು, ಬಂಧು-ಮಿತ್ರರು**

# ಕೊರೊನಾ ಭಯವಿದ್ದರೂ ದೈವಭಕ್ತಿ ಕಡಿಮೆಯಾಗಿಲ್ಲ

## ಹರಪನಹಳ್ಳಿ ತೆಗ್ಗಿನಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ

ಹರಪನಹಳ್ಳಿ, ನ. 27- ಮಹಾಮಾರಿ ಕೊರೊನಾ ವೈರಸ್‌ನಿಂದ ಇಡೀ ವಿಶ್ವವೇ ಕಂಗಾಲಾಗಿದ್ದರೂ ಕೂಡ, ಜನರಲ್ಲಿ ದೈವಭಕ್ತಿ ಕಡಿಮೆಯಾಗಿಲ್ಲ ಎಂದು ತೆಗ್ಗಿನಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯರು ಹೇಳಿದರು.

ಅವರು, ಪಟ್ಟಣದ ವಾಲ್ಮೀಕಿ ನಗರದ ದೊಡ್ಡಗರಡಿಕೇರಿಯ ಜರ್ಮಲಿ ದುರುಗಮ್ಮ ದೇವಿಯ ಕಳಸಾರೋಹಣ ಹಾಗೂ ಅನ್ನ ಸಂತರ್ಪಣೆ ಕಾರ್ಯಕ್ರಮ ನೆರವೇರಿಸಿ ಮಾತನಾಡಿದರು.

ದೈವಭಕ್ತಿಗೆ ಹೆಸರುವಾಸಿಯಾದ ವಾಲ್ಮೀಕಿ ನಾಯಕ ಸಮಾಜ, ಇಂದು ಸಂಘಟನೆಯತ್ತ ಸಾಗಿದ್ದು, ಸಂಘಟನೆಯ ಜೊತೆಗೆ ಶೈಕ್ಷಣಿಕವಾಗಿ ಮುಖ್ಯವಾಹಿನಿಗೆ ಬರಬೇಕು. ದೇವಸ್ಥಾನ ನಿರ್ಮಾಣದ ಜೊತೆಗೆ ನಿತ್ಯ ಪೂಜೆ, ಸ್ವಚ್ಛತೆ ಕಾಪಾಡಿಕೊಳ್ಳಿ. ಕೊರೊನಾ ವೈರಸ್ ಸಾಂಕ್ರಾಮಿಕ ರೋಗ ಭಾರತವನ್ನಷ್ಟೇ ಅಲ್ಲದೇ, ಇಡೀ ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಕಾಣಿಸಿಕೊಂಡು, ಲೆಕ್ಕವಿಲ್ಲದಷ್ಟು ಜನರು



ಸಾವಿಗೀಡಾಗಿದ್ದಾರೆ.

ಕೊರೊನಾ ವೈರಸ್‌ನ ಪ್ರಮಾಣ ಕಡಿಮೆಯಾಗಿದ್ದರೂ ಕೂಡ ಚಳಿಗಾಲ ಆರಂಭವಾಗಿದ್ದು, ರೋಗದ ಪ್ರಮಾಣ ದ್ವಿಗುಣವಾಗುವ ಸಂಭವ ಜಾಸ್ತಿ ಇದ್ದು, ಜನಸಾಮಾನ್ಯರು ವ್ಯಾಕ್ಸಿನ್ ಬರುವವರೆಗೂ ಸಾಮಾಜಿಕ ಅಂತರ ಕಾಪಾಡಿಕೊಳ್ಳುವ ಮೂಲಕ ಉತ್ತಮ ಆರೋಗ್ಯವಂತರಾಗಿರಿ ಎಂದರು.

ವಾಲ್ಮೀಕಿ ನಗರದ ಶ್ರೀ ಸಣ್ಣ ಹಾಲಸ್ವಾಮೀಜಿ ಮಾತನಾಡಿ, ವಾಲ್ಮೀಕಿ ನಾಯಕ ಸಮಾಜ ಪರಿಶ್ರಮದಿಂದ ದುಡಿಯುವ ಜನಾಂಗವಾಗಿದ್ದು, ನೀವು ದೇವಸ್ಥಾನಗಳ ನಿರ್ಮಾಣಕ್ಕಿಂತ ಶೈಕ್ಷಣಿಕ ಸಂಸ್ಥೆಗಳನ್ನು ತೆರೆದರೆ ನಿಮ್ಮ ಬಾಳು ಹಸನಾಗುತ್ತದೆ ಎಂದರು.

ಕೂಲಹಳ್ಳಿಯ ಶ್ರೀ ಚಿನ್ಮಯ ಸ್ವಾಮೀಜಿ ಮಾತನಾಡಿ, ವೈಜ್ಞಾನಿಕವಾಗಿ ಎಷ್ಟೇ ಮುಂದುವರೆದರೂ ಕೂಡ ಸಂಪ್ರದಾಯ, ದೈವಭಕ್ತಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ವೈರಸ್‌ನ ಭಯವಿಲ್ಲದೆ ಜನರು ಹೊಲಗಳಲ್ಲಿ ದುಡಿದು ಜೀವನ ಸಾಗಿಸುತ್ತಿದ್ದಾರೆ ಎಂದರು.

ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೋರಿ ಶೆಟ್ಟಿ ಉಚ್ಚೆಂಗೆಪ್ಪ, ಪುರಸಭೆ ಉಪಾಧ್ಯಕ್ಷರಾದ ನಿಟ್ಟೂರು ಭೀಮವ್ವ, ಪುರಸಭೆ ಸದಸ್ಯರುಗಳಾದ ಟಿ. ವೆಂಕಟೇಶ, ಎಂ.ವಿ. ಅಂಜಿನಪ್ಪ, ತಾಲ್ಲೂಕು ಬಿಜೆಪಿ ಉಪಾಧ್ಯಕ್ಷ ನಿಟ್ಟೂರು ಸಣ್ಣ ಹಾಲಪ್ಪ, ಪುರಸಭೆ ಮಾಜಿ ಸದಸ್ಯ ಎಂ. ದುರುಗಪ್ಪ, ಮುಖಂಡರಾದ ಬಾಣದ ಅಂಜಿನಪ್ಪ, ರಾಯದುರ್ಗದ ದುರುಗಪ್ಪ, ಎಂ. ಉಚ್ಚೆಂಗೆಪ್ಪ, ಮ್ಯಾಕಿ ದುರುಗಪ್ಪ, ನಿಟ್ಟೂರು ದೊಡ್ಡ ಹಾಲಪ್ಪ, ಕೆ. ಅಂಜಿನಪ್ಪ, ಕಮ್ಮಾರ ಹಾಲಪ್ಪ, ಚಿನ್ನುಡಿಗಿ ನಾಗರಾಜ, ಗಿಡ್ಡಳ್ಳಿ ಬಸವರಾಜ, ಮ್ಯಾಕಿ ಸಣ್ಣ ಹಾಲಪ್ಪ ಸೇರಿದಂತೆ, ಮತ್ತಿತರರು ಉಪಸ್ಥಿತರಿದ್ದರು.

# ಭದ್ರಾ ; ಸರ್ಕಾರದಿಂದ ಹಂಚಿಕೆಯಾದ 2.4 ನೀರನ್ನು ಜಗಳೂರಿಗೆ ಮೀಸಲಿಡಲಿ



**ಕಲ್ಲೇರುದ್ರೇಶ್ ಮನವಿ**

ಜಗಳೂರು, ನ.27- ಭದ್ರಾ ಮೇಲ್ದಂಡೆ ಯೋಜನೆಯಡಿ ನಿಗದಿಯಾಗಿರುವ 2.4 ಟಿಎಂಸಿ ನೀರು ಮೊದಲ ಪ್ರಾಶಸ್ತ್ಯದಲ್ಲಿ ಜಗಳೂರು ತಾಲ್ಲೂಕಿಗೆ ಮೀಸಲಿಟ್ಟು, ತದನಂತರ ಬೇರೆಡೆಗೆ ಹರಿಸಬೇಕು ಎಂದು ಭದ್ರಾ ಮೇಲ್ದಂಡೆ ಹೋರಾಟ ಸಮಿತಿ ಸದಸ್ಯ ಕಲ್ಲೇರುದ್ರೇಶ್ ಮನವಿ ಮಾಡಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕುಮಾರಸ್ವಾಮಿ ಅವಧಿಯಲ್ಲಿ ಅನುಮೋದನೆಯಾಗಿ, ಸಿದ್ದರಾಮಯ್ಯನವರ ಮುಖ್ಯಮಂತ್ರಿ ಅವಧಿಯಲ್ಲಿ ಬಜೆಟ್‌ನಲ್ಲಿ ಘೋಷಿಸಿ 2.4 ಟಿಎಂಸಿ ನೀರು ಹಂಚಿಕೆ ಮಾಡಲು ತಜ್ಞರ ಸಮಿತಿಯೊಂದಿಗೆ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮವನ್ನು ಕೈಗೊಂಡು ವಿಶ್ವೇಶ್ವರ ಜಲನಿಗಮ ನಿಯಮಿತ ಇಂಜಿನಿಯರ್‌ಗಳಿಗೆ ಸೂಚಿಸಲಾಗಿತ್ತು. ಇದೀಗ ನೆರೆಹೊರೆ ತಾಲ್ಲೂಕುಗಳು ಜಗಳೂರಿಗೆ ಹಂಚಿಕೆಯಾಗಿರುವ ನೀರನ್ನು ತಮ್ಮ ಕಡೆ ವರ್ಗಾಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದು, ನಮಗೆ ಅವರ ಬಗ್ಗೆ ವಿರೋಧವಿಲ್ಲ.

ಹಿಂದುಳಿದ ತಾಲ್ಲೂಕಿಗೆ ಸರ್ಕಾರ ನಿಗದಿಪಡಿಸಿರುವಂತೆ 2.4 ಟಿಎಂಸಿ ನೀರು ಮೊದಲು ನಮಗೆ ಬಿಡಲಿ. ನಂತರ ಅವರಿಗೆ ಕೊಡಲಿ ಎಂಬುದು ನಮ್ಮ ಹೋರಾಟವಾಗಿದೆ ಎಂದರು.

ಈ ಸಂದರ್ಭದಲ್ಲಿ ಪ್ರಗತಿಪರ ರೈತ ಮಾಧವರೆಡ್ಡಿ, ಷಂಷುದ್ದೀನ್, ಪಪಂ ಸದಸ್ಯ ಮಹಮ್ಮದ್ ಅಲಿ ಉಪಸ್ಥಿತರಿದ್ದರು.

## ಡಿ. 5ರ ಬಂದ್ ಕುರಿತು ನಾಳೆ ಸಭೆ



ದಾವಣಗೆರೆ, ನ.27 - ರಾಜ್ಯ ಸರ್ಕಾರವು ಮರಾಠ ಅಭಿವೃದ್ಧಿ ನಿಗಮ ಮಾಡಿರುವುದನ್ನು ಖಂಡಿಸಿ ಡಿಸೆಂಬರ್ 5ರಂದು ರಾಜ್ಯದಲ್ಲಿ ಕೆಲವು ಕನ್ನಡಪರ ಸಂಘಟನೆಗಳು ಬಂದ್‌ಗೆ ಬೆಂಬಲ ನೀಡುತ್ತಿದ್ದರೆ ಇನ್ನು ಕೆಲ ಕನ್ನಡ ಪರ ಸಂಘಟನೆಗಳು ಬಂದ್ ಮಾಡುವುದು ಬೇಡ ಎಂದು ಪ್ರತಿಕ್ರಿಯಿಸಿವೆ. ಆದ ಕಾರಣ ಜಿಲ್ಲಾ ಕನ್ನಡ ಪರ ಸಂಘಟನೆಗಳ ಒಕ್ಕೂಟದಿಂದ ನಾಡಿದ್ದು ದಿನಾಂಕ 29 ರ ಭಾನುವಾರ ಬೆಳಿಗ್ಗೆ 11ಕ್ಕೆ ಪ್ರವಾಸಿ ಮಂದಿರದಲ್ಲಿ ಗೌರವಾಧ್ಯಕ್ಷ ಕೆ.ಜಿ. ಯಲ್ಲಪ್ಪ ಅವರ ನೇತೃತ್ವದಲ್ಲಿ ಸಭೆ ನಡೆಸಲು ತೀರ್ಮಾನಿಸಲಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ಎನ್. ಹೆಚ್. ಹಾಲೇಶ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ರಾಜ್ಯೋತ್ಸವ

ವಿಸ್ಮಯ ಚಾರಿಟಬಲ್ ಸೊಸೈಟಿ ಆಶ್ರಯದಲ್ಲಿ 65ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ವನಿತಾ ಮಹಿಳಾ ಸಮಾಜ ಸಭಾಂಗಣದಲ್ಲಿ ಕೊರೊನಾ ವಾರಿಯರ್ಸ್‌ಗಳಿಗೆ ಸನ್ಮಾನ ಸಮಾರಂಭ ಹಾಗೂ ನಗರದ ಕೆಲ ಆಯ್ದ ನಿರ್ಗತಿಕ ಬಡ ಕುಟುಂಬಗಳಿಗೆ ಆಹಾರದ ಕಿಟ್ ವಿತರಣೆಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ವಿತರಿಸಲಾಗುವುದೆಂದು ವಿಸ್ಮಯ ಚಾರಿಟಬಲ್ ಸೊಸೈಟಿ ಸಂಸ್ಥಾಪಕ ಅಧ್ಯಕ್ಷ ಎಂ. ಸೈಫುಲ್ಲಾ, ಕಾರ್ಯದರ್ಶಿ ಕಿಶೋರ್‌ಕುಮಾರ್ ಪಿ.ಎಲ್ ಹಾಗೂ ಕರ್ನಾಟಕ ಜನಶಕ್ತಿ ರಾಜ್ಯ ಕಾರ್ಯಾಧ್ಯಕ್ಷ ಜಿ.ಎನ್. ಪ್ರಭು ತಿಳಿಸಿದ್ದಾರೆ.

# ಭೂ ಸುಧಾರಣೆ, ಎಪಿಎಂಸಿ ಕಾಯ್ದೆಗಳು ರೈತರ ಪರವಾಗಿವೆ

**ಬಿಜೆಪಿ ರೈತ ಮೋರ್ಚಾ ಜಿಲ್ಲಾ ಘಟಕದ ಅಧ್ಯಕ್ಷ ಲೋಕಿಕೆರೆ ನಾಗರಾಜ್**

ಮಾಯಕೊಂಡ, ನ. 27 - 'ಭೂ ಸುಧಾರಣೆ ಮತ್ತು ಎಪಿಎಂಸಿ ಕಾಯ್ದೆಗಳು ರೈತ ಪರವಾಗಿದ್ದು, ಬಿಜೆಪಿಯಿಂದ ರೈತರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ' ಎಂದು ಬಿಜೆಪಿ ರೈತ ಮೋರ್ಚಾ ಜಿಲ್ಲಾ ಘಟಕದ ಅಧ್ಯಕ್ಷ ಲೋಕಿಕೆರೆ ನಾಗರಾಜ್ ತಿಳಿಸಿದರು.

ಸಮೀಪದ ಆನಗೋಡಿನಲ್ಲಿ ಬಿಜೆಪಿ ಆಯೋಜಿಸಿದ್ದ ರೈತ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎಪಿಎಂಸಿ ಮತ್ತು ಭೂ ಸುಧಾರಣಾ ಕಾಯ್ದೆ ಬಗ್ಗೆ ಪ್ರಬಲ ಕಾರಣವಿಲ್ಲದಿದ್ದರೂ ವಿಪಕ್ಷಗಳು ಅಪಪ್ರಚಾರ ನಡೆಸಿವೆ. ಕಾಯ್ದೆಯಿಂದ ರೈತರ ಮೇಲೆ ಎಪಿಎಂಸಿಯ ಸೆಸ್ ಬೀಳುವುದು ತಪ್ಪಿದೆ. ಕಂಪನಿ ಮತ್ತು ರೈತರ ಮಧ್ಯ ಸೌಹಾರ್ದ ಒಪ್ಪಂದವಿದ್ದರೆ ಮಾತ್ರ ಕಾಂಟ್ರ್ಯಾಕ್ಟ್ ಫಾರ್ಮಿಂಗ್‌ನಲ್ಲಿ ಬೆಳೆಯಲಾಗುತ್ತದೆ.

ಕಾಯ್ದೆಯಿಂದ ರೈತರಿಗೆ ಮೋಸವಾಗುವುದು ತಪ್ಪಿ, ಅನುಕೂಲವಾಗಿದೆ. ಹೈನುಗಾರಿಕೆ, ಮೀನುಗಾರಿಕೆಯಂತಹ ಕೃಷಿ ಆಧಾರಿತ ಉದ್ದಿಮೆಗಳಿಗೆ ಅವಕಾಶ ಕಲ್ಪಿಸಲು ಭೂಮಿ ಬೇಕೆ ಬೇಕು. ಬಹುಪಯೋಗಿ ಕಾಯ್ದೆ ತಂದ ಪ್ರಧಾನಿ ಮತ್ತು ಮುಖ್ಯಮಂತ್ರಿಗೆ ರೈತರು ಅಭಿನಂದನಾ ಪತ್ರ ಬರೆಯಲಿದ್ದಾರೆ ಎಂದರು.

ಶಾಸಕ ಪ್ರೊ. ಲಿಂಗಣ್ಣ ಮಾತನಾಡಿ,



ಎಪಿಎಂಸಿ ಕಾಯ್ದೆ ಮತ್ತು ಭೂ ಸುಧಾರಣಾ ಕಾಯ್ದೆಗಳಿಂದ ರೈತರಿಗೆ ಅನುಕೂಲವಿದ್ದರೂ ವಿಪಕ್ಷಗಳು ವಿನಾಕಾರಣ ತಪ್ಪು ಭಾವನೆ ಮೂಡಿಸುತ್ತಿವೆ. ಜನರ ಆತಂಕಕ್ಕೆ ಉತ್ತರ ನೀಡಲು ಬಿಜೆಪಿ ಮುಂದಾಗಿದೆ. ರೈತ ಮೋರ್ಚಾ ಪಕ್ಷದ ಪ್ರಮುಖ ಅಂಗವಾಗಿದ್ದು ಜವಾಬ್ದಾರಿ, ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದರು.

ರೈತ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವಪ್ರಸಾದ್, ಬಿಜೆಪಿ ಕಾರ್ಯಕರ್ತರು ಕಾಯ್ದೆ ಬಗ್ಗೆ ಮೊದಲು ಅರಿವು ಹೊಂದಿ, ರೈತರಿಗೆ ಮಾಹಿತಿ ನೀಡಬೇಕು. ಶೇ 80 ರಷ್ಟು ರೈತರು ಬೆಳೆ ಸಮೀಕ್ಷಾ ಆ್ಯಪ್ ಬಳಸಿದ್ದಾರೆ. ಕಾಯಿದೆಯಿಂದ ರೈತರು ರಾಜ್ಯಗಳ ಗಡಿ ದಾಟಿ ಮಾರಲು ಇದ್ದ ಸಮಸ್ಯೆ ನೀಗಲಾಗಿದೆ. ಭೂ ಸುಧಾರಣಾ ಕಾಯ್ದೆಯಡಿ ಹೆಚ್ಚೆಂದರೆ 118 ಎಕರೆ ಖರೀದಿಗೆ ಮಾತ್ರ ಅವಕಾಶವಿದೆ. ದೇವರಾಜ ಅರಸು ಅವಧಿಯಲ್ಲಿ ಭೂ ಖರೀದಿಗೆ ಆದಾಯದ ಮಿತಿ ರೂ. 2 ಲಕ್ಷ ಇದ್ದುದನ್ನು ರೂ. 20 ಲಕ್ಷಕ್ಕೆ ಏರಿಸಿದ್ದು ಸಿದ್ದರಾಮಯ್ಯ ಸರ್ಕಾರ. ಉಪ ಚುನಾವಣೆಯಲ್ಲಿ ಜನ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಿದರೂ, ಜನರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದರು.

ಮಾಯಕೊಂಡ ರೈತ ಮೋರ್ಚಾ ಅಧ್ಯಕ್ಷ ಗೋಪನಾಳ್ ಅಶೋಕ್, ಅಣಜಿ ಗುಡ್ಡೇಶ್ ಮಾತನಾಡಿದರು.

ರೈತ ಮೋರ್ಚಾ ಕಾರ್ಯದರ್ಶಿ ಮಹೇಂದ್ರ, ತಾಲ್ಲೂಕು ಪಂಚಾಯಿತಿ ಸದಸ್ಯ ಆಲೂರು ನಿಂಗರಾಜ್, ಪದಾಧಿಕಾರಿಗಳಾದ ಅಣಜಿ ಗುಡ್ಡೇಶ್, ಮುಖಂಡರಾದ ಮಹಾಬಲೇಶ್ವರ, ಕರಿಲಕ್ಕೇನಹಳ್ಳಿ ಓಂಕಾರಪ್ಪ, ಗುಮ್ಮನೂರು ಮುರುಗೇಶ್, ಪರಶುರಾಂಪುರ ಮರುಳುಸಿದ್ದಪ್ಪ, ಮಂಜಾನಾಯ್ಕ, ಅಣಬೇರು ಶಿವಪ್ರಕಾಶ್, ಗುಮ್ಮನೂರು ನಟರಾಜ್, ವಸಂತಕುಮಾರ್ ಇದ್ದರು.

## ವಿದ್ಯಾರ್ಥಿಗಳ ವೃತ್ತಿಪರ ಕೋರ್ಸ್‌ಗೆ ಟರ್ನಿಂಗ್ ಪಾಯಿಂಟ್ ಆ್ಯಪ್

ದಾವಣಗೆರೆ, ನ.27 - ಆರ್.ಆರ್. ಇನ್‌ಸ್ಟಿಟ್ಯೂಟ್‌ನಿಂದ ಪಿ.ಯು. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪರೀಕ್ಷೆ ಮಾಹಿತಿ ಒಳಗೊಂಡ 'ಟರ್ನಿಂಗ್ ಪಾಯಿಂಟ್ ಆಂಡ್ರಾಯ್ಡ್ ಆ್ಯಪ್' ಸಿದ್ಧಪಡಿಸಲಾಗಿದೆ ಎಂದು ಸಂಸ್ಥೆಯ ಫಾರ್ಮಸಿ ವಿಭಾಗದ ಮುಖ್ಯಸ್ಥ ಪ್ರೊ. ರವೀಂದ್ರ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಿಯು ವಿದ್ಯಾರ್ಥಿಗಳಿಗಾಗಿ ಕಾಲೇಜಿನ ಪ್ರಾಧ್ಯಾಪಕರು ಸೇರಿ ಆ್ಯಪ್ ಸಿದ್ಧಪಡಿಸಿದ್ದಾರೆ. ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪರೀಕ್ಷೆಗೆ ಅನುಕೂಲವಾಗುವಂತೆ ಹಿಂದಿನ ವರ್ಷಗಳ ಪ್ರಶ್ನೆ ಪತ್ರಿಕೆಗೆ ಉತ್ತರ ಸಹಿತ ವಿವರ ನೀಡಲಾಗಿದೆ. ಸಿಇಟಿ, ನೀಟ್, ಜೆಇಇ, ಕಾಮೆಡ್ - ಕೆ ಸೇರಿದಂತೆ ಹಲವು ಸಾಮಾನ್ಯ ಪ್ರವೇಶ ಪರೀಕ್ಷೆಗೆ ಅನುಕೂಲವಾಗಲಿದೆ ಎಂದವರು ವಿವರಿಸಿದ್ದಾರೆ.


ಆ್ಯಪ್ ಕುರಿತ ಮಾಹಿತಿಗೆ ಹೆಲ್ಪ್‌ಲೈನ್–8880001111 ಹಾಗೂ 9972181999ಗೆ ಕರೆ ಮಾಡಬಹುದು. 8050202020ಗೆ ವಾಟ್ಸಾಪ್ ಮೂಲಕ ಸಂಪರ್ಕಿಸಬಹುದು.

## ಅಪಘಾತಕ್ಕೀಡಾದ ವ್ಯಕ್ತಿಯ ಚಿಕಿತ್ಸೆಗೆ ಮುಂದಾದ ಶಾಸಕ ಎಂಪಿಆರ್

ಹೊನ್ನಾಳಿ, ನ.27 - ಬೈಕ್ ಅಪಘಾತದಲ್ಲಿ ಇಂದು ಮಧ್ಯಾಹ್ನ ರಸ್ತೆ ಕೆಳಗೆ ಬಿದ್ದಿದ್ದ ವ್ಯಕ್ತಿಯನ್ನು ಅದೇ ಮಾರ್ಗ ಮಧ್ಯ ಸಂಚರಿಸುತ್ತಿದ್ದ ಶಾಸಕ ರೇಣುಕಾಚಾರ್ಯ ಅವರು ಸರಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟು, ಚಿಕಿತ್ಸೆ ನೀಡುವಂತೆ ವೈದ್ಯರಿಗೆ ಸೂಚಿಸಿದ ಘಟನೆ ನಡೆದಿದೆ.

ತಾಲ್ಲೂಕಿನ ಮಾರಿಕೊಪ್ಪ ಗ್ರಾಮದಿಂದ ಸ್ವಗ್ರಾಮ ಹರಿಹರ ತಾಲ್ಲೂಕು ಭಾನುವಳ್ಳಿಗೆ ತೆರಳುತ್ತಿದ್ದ ಅಶೋಕ್, ಗೊಲ್ಲರಹಳ್ಳಿ ಬಳಿ ಅಪಘಾತಗೊಂಡು ಗಂಭೀರವಾಗಿ ಗಾಯಗೊಂಡಿದ್ದ ಎನ್ನಲಾಗಿದೆ.

## ಶ್ರೀ ಬಿಂದು ಮಾಧವ ಸ್ವಾಮೀಜಿ ನಿಧನಕ್ಕೆ ಸಾಣೇಹಳ್ಳಿ ಶ್ರೀ ಸಂತಾಪ



ಸಾಣೇಹಳ್ಳಿ, ನ.27- ಹೊಸದುರ್ಗ ತಾಲ್ಲೂಕು ಬೆಲಗೂರಿನ ಶ್ರೀ ಬಿಂದು ಮಾಧವ ಸ್ವಾಮೀಜಿಗಳ ನಿಧನಕ್ಕೆ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ಸಂತಾಪ ಸೂಚಿಸಿದ್ದಾರೆ.


ಬೆಲಗೂರಿನ ಆಂಜನೇಯ ಸ್ವಾಮಿ ಪರಮಭಕ್ತರಾಗಿದ್ದ ಬಿಂದು ಮಾಧವ ಶರ್ಮ ಅವರು ನಿಧನರಾದ ವಿಚಾರ ತಿಳಿದು ವ್ಯಥೆಯಾಗಿದೆ. ಅವರು ಯಾವಾಗಲೂ ಜನರ ಮಧ್ಯದಲ್ಲಿ ಇದ್ದು ಜನರ ನೋವು, ನಲಿವುಗಳಿಗೆ ಸ್ಪಂದಿಸುತ್ತಿದ್ದರು. ಕೆಲವರು ಅವರನ್ನು ಅವಧೂತರೆಂದು ಭಾವಿಸಿದ್ದರು. ಹಾಗಾಗಿ ಅವರಿಗೆ ಬೇಡವೆಂದರೂ ಸಂಪತ್ತು ಬಂದು ಬೀಳುತ್ತಿತ್ತು. ಆದರೆ ಅವರೆಂದೂ ನಾನು ಅವಧೂತ ಎಂದು ಹೇಳಿದಂತಹವರಲ್ಲ.

ಇತ್ತೀಚೆಗೆ ಸಾಣೇಹಳ್ಳಿಯ ನಾಟಕೋತ್ಸವದಲ್ಲಿ ಭಾಗವಹಿಸಿ ಮಾತನಾಡಿ - ನನ್ನನ್ನು ಇಲ್ಲಿಯವರೆಗೂ ಹಿಡಿದು ಕಟ್ಟಿದವರು ಯಾರೂ ಇರಲಿಲ್ಲ. ನಾನೂ ಒಂದು ರೀತಿ ಆಂಜನೇಯ. ಆದರೆ, ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ಎರಡು ಗಂಟೆಗಳ ಕಾಲ ಹಿಡಿದು ಕೂರಿಸಿದ್ದಾರೆ. ಇವರ ಸಾಧನೆಯ ಮುಂದೆ ನಾನು ಶರಣಾಗಿದ್ದೇನೆ ಎಂದು ಅತ್ಯಂತ ಗೌರವದ ಮಾತುಗಳನ್ನು ಹೇಳಿದ್ದರು ಎಂದು ಪಂಡಿತಾರಾಧ್ಯ ಸ್ವಾಮೀಜಿ ಸ್ಮರಿಸಿದ್ದಾರೆ.

## ಹೊನ್ನಾಳಿ ತಾಲ್ಲೂಕಿಗೆ ಎಸಿಬಿ ಭೇಟಿ

ಹೊನ್ನಾಳಿ, ನ.27- ಎಸಿಬಿ ಅಧಿಕಾರಿಗಳು ಇದೇ ದಿನಾಂಕ 30 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆವರೆಗೆ ಹೊನ್ನಾಳಿ ತಾಲ್ಲೂಕಿನ ಪ್ರವಾಸಿ ಮಂದಿರಕ್ಕೆ ಭೇಟಿ ನೀಡಿ ಸಾರ್ವಜನಿಕರಿಂದ ಕುಂದು-ಕೊರತೆಗಳ ಅರ್ಜಿಗಳನ್ನು ಸ್ವೀಕರಿಸುವರು. ವಿವರಕ್ಕೆ ಸಂಪರ್ಕಿಸಿ : 08192-236600, 94808-06284.

### ಹುಚ್ಚವ್ವನಹಳ್ಳಿ ಗಂಗಮ್ಮ ನಿಧನ



ದಾವಣಗೆರೆ ತಾಲ್ಲೂಕು ಹುಚ್ಚವ್ವನಹಳ್ಳಿ ಗ್ರಾಮದ ವಾಸಿ ದಿ.ಅಂಗಡಿ ಚನ್ನಬಸಪ್ಪ ಅವರ ಧರ್ಮಪತ್ನಿ ಶ್ರೀಮತಿ ಗಂಗಮ್ಮ (92) ಅವರು ದಿನಾಂಕ 27.11.2020ರಂದು ಶುಕ್ರವಾರ ಸಂಜೆ 5 ಗಂಟೆಗೆ ನಿಧನರಾಗಿದ್ದಾರೆ. ಇಬ್ಬರು ಪುತ್ರರು, ಐವರು ಪುತ್ರಿಯರು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು, ಗಿರಿ ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 28.11.2020 ರಂದು ಶನಿವಾರ ಮಧ್ಯಾಹ್ನ 2 ಗಂಟೆಗೆ ಹುಚ್ಚವ್ವನಹಳ್ಳಿ ಗ್ರಾಮದಲ್ಲಿ ನಡೆಯಲಿದೆ.

### ಚಿರಸ್ಮರಣೆ



ಜೆ.ಎಂ. ಮಂಜುನಾಥಯ್ಯ A.S.I.

ವಿದ್ಯಾನಗರ ಪೋಲೀಸ್ ಠಾಣೆ, ದಾವಣಗೆರೆ.

ಜನನ : 1-3-1954, ನಿಧನ : 28-11-2007

ನೀವು ನಮ್ಮನ್ನಗಲಿ ಇಂದಿಗೆ 13 ವರ್ಷಗಳು ಕಳೆದವು. ನಿಮ್ಮ ಸ್ನೇಹಶೀಲತೆ, ಸಂಪ್ರೀತಿ, ಸಹಬಾಳ್ವೆ, ಆದರ್ಶ ಜೀವನ ನಮ್ಮೆಲ್ಲರ ಬಾಳಿನ ದಾರಿದೀಪ. ಹಚ್ಚ ಹಸಿರಾದ ನಿಮ್ಮ ನೆನಪು ಎಂದೆಂದಿಗೂ ಮರೆಯಲಾಗದು. ಸದಾ ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ,

ಪತ್ನಿ : ಪುಷ್ಪಾವತಿ, ಮಕ್ಕಳು : ಸವಿತಾ, ಮಂಜುಶ್ರೀ

ಕೆ.ಎಂ. ಹಿರೇಮಠ, Ph: 9743886940

### 13ನೇ ವರ್ಷದ ಪುಣ್ಯ ಸ್ಮರಣೆ



**ದಿ|| ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪನವರು**

ನೀವು ನಮ್ಮನ್ನಗಲಿ ಇಂದಿಗೆ ಹದಿಮೂರು ವರ್ಷಗಳಾದವು. ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ. ನೀವು ಹೇಳಿಕೊಟ್ಟ ಆದರ್ಶಗಳು, ನಡೆ-ನುಡಿಗಳು, ನಯ-ವಿನಯಗಳೇ ನಮ್ಮ ಜೀವನದ ದಾರಿ ದೀಪವಾಗಿವೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

**ಬಸವರಾಜ ಎಂ. ಉತ್ತಂಗಿ,** ಬಿ.ಕಾಂ., ಎಲ್.ಎಲ್.ಬಿ., ಎಂ.ಕಾಂ., ಎಂ.ಎ. (ಆಡಳಿತ), ಎಂ.ಬಿ.ಎ. (ಫೈನಾನ್ಸ್), ಡಿಪ್ಲೋಮಾ ಇನ್ ಯುಸಿಬಿಎಂ,

**ಶ್ರೀಮತಿ ಜ್ಯೋತಿಶ್ರೀ ಹೆಚ್.ಸಿ.,** ಎಂ.ಕಾಂ.,

ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ.

**ಕು|| ಅಖಿಲಾ ಬಿ. ಉತ್ತಂಗಿ**

# 'ಸಕಾಲ' : ಕಾಲಮಿತಿಯೊಳಗೆ ಸೇವೆ ಪಡೆಯುವ ಅಧಿಕಾರ



**ಹರಿಹರ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ**

ಮಲೇಬೆನ್ನೂರು, ನ.27- ನಾಗರಿಕರಿಗೆ ನಿಗದಿತ ಕಾಲಮಿತಿಯೊಳಗೆ ಅಗತ್ಯ ಸೇವೆಗಳನ್ನು ಪಡೆಯುವ ಅಧಿಕಾರ 'ಸಕಾಲ'ದಲ್ಲಿದ್ದು, ನಾಗರಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಹೇಳಿದರು.

ಅವರು ಶುಕ್ರವಾರ ಇಲ್ಲಿನ ಪುರಸಭೆಯ ಕೌನ್ಸಿಲ್ ಸಭಾಂಗಣದಲ್ಲಿ ಸಕಾಲ ಸಪ್ತಾಹದ ಅಂಗವಾಗಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಇದೇ ದಿನಾಂಕ 30 ರಿಂದ ಡಿಸೆಂಬರ್ 5ರವರೆಗೆ ಸಕಾಲ ಸಪ್ತಾಹ ಆಚರಣೆ ಇದ್ದು, ಈ ವೇಳೆ ಜನರಿಗೆ ಸ ಕಾಲದ ಬಗ್ಗೆ ಜಾಥಾ ಮೂಲಕ ಮಾಹಿತಿ ನೀಡಲಾಗುವುದು.

98 ಇಲಾಖೆಗಳ 1025 ಸೇವೆಗಳು ಸಕಾಲದಲ್ಲಿ ನಾಗರಿಕರಿಗೆ ಲಭ್ಯವಿರುತ್ತವೆ. ಸೇವಾ ವಿತರಣೆಯಲ್ಲಿ ವಿಳಂಬ ಅಥವಾ ಸಮರ್ಥನೀಯವಲ್ಲದ ತಿರಸ್ಕೃತ ಸಂದರ್ಭದಲ್ಲಿ ಅರ್ಜಿದಾರರು ಮೇಲ್ಮನವಿ ಸಲ್ಲಿಸಬಹುದೆಂದು ತಹಶೀಲ್ದಾರ್ ರಾಮಚಂದ್ರಪ್ಪ ತಿಳಿಸಿದರು. ಸಕಾಲದಲ್ಲಿ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಇಂದು-ನಾಳೆ ಎಂಬ ನೆಪ ಹೇಳದೆ ಹೇಳಿದ ದಿನವೇ ಸೌಲಭ್ಯ ದೊರಕಿಸಿಕೊಡಲಾಗುವುದೆಂದರು.

ಪುರಸಭೆ ಮುಖ್ಯಾಧಿಕಾರಿ ಧರಣೇಂದ್ರಕುಮಾರ್ ಮಾತನಾಡಿ, ಪುರಸಭೆ ವ್ಯಾಪ್ತಿಯಲ್ಲಿ ನಾಗರಿಕರು ಜನನ-ಮರಣ ಪತ್ರಗಳು ಮತ್ತು ಕಟ್ಟಡ ಪರವಾನಗಿಯನ್ನೂ ಸಕಾಲದಲ್ಲಿ ಪಡೆಯಬಹುದೆಂದು ಹೇಳಿದರು.

ಉಪತಹಶೀಲ್ದಾರ್ ಆರ್. ರವಿ ಮಾತನಾಡಿ, 'ಸಕಾಲ'ದಿಂದ ಜನರಿಗೆ ತುಂಬಾ ಅನುಕೂಲವಾಗಲಿದೆ. ಜನರು ಇದರ ಬಗ್ಗೆ ತಿಳಿದುಕೊಂಡು ಅರ್ಜಿ ಸಲ್ಲಿಸಬೇಕೆಂದು ಮನವಿ ಮಾಡಿದರು.

ಕಂದಾಯ ನಿರೀಕ್ಷಕ ಸಮೀರ್, ಪುರಸಭೆ ಸದಸ್ಯ ಮಾಸಣಗಿ ಶೇಖರಪ್ಪ, ಗ್ರಾಮಲೆಕ್ಕಾಧಿಕಾರಿಗಳಾದ ಕೊಟ್ರೇಶ್, ಶ್ರೀಧರಮೂರ್ತಿ, ಸೌಮ್ಯ, ಮಂಜುಳಾ ಬೋರಯ್ಯ, ರಾಮಕೃಷ್ಣ, ಪುರಸಭೆ ಅಧಿಕಾರಿಗಳಾದ ಉಮೇಶ್, ಗುರುಪ್ರಸಾದ್, ನವೀನ್, ಇಬ್ರಾನ್, ಚಿತ್ತಪ್ಪ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

## ಬಿಜೆಪಿ ಉತ್ತರ ವಿಧಾನಸಭಾ ಕ್ಷೇತ್ರದ ಎಸ್ಸಿ ಮೋರ್ಚಾದಿಂದ ಇಂದು 'ಸಂವಿಧಾನದ ದಿನ' ಆಚರಣೆ

ಬಿಜೆಪಿ ಎಸ್ಸಿ ಮೋರ್ಚಾ ರಾಜ್ಯಾಧ್ಯಕ್ಷ ಚಲುವಾದಿ ನಾರಾಯಣಸ್ವಾಮಿಯವರ ಸೂಚನೆ ಮೇರೆಗೆ ಇಂದು ಸಂಜೆ 4.30ಕ್ಕೆ ನಗರದ ಹಳೇ ಚಿಕ್ಕನಹಳ್ಳಿ (ಎ.ಪಿ.ಎಂ.ಸಿ. ಹಿಂಭಾಗ), ದುರ್ಗಾಂಬಿಕಾ ದೇವಸ್ಥಾನದ ಹತ್ತಿರ ಸಂವಿಧಾನ ದಿನ ಆಚರಣೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಎಸ್ಸಿ ಮೋರ್ಚಾದ ಉತ್ತರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ರವಿ ನಾಯ್ಕ ಎಂ. ಅಧ್ಯಕ್ಷತೆಯಲ್ಲಿ 'ಸಂವಿಧಾನದ ದಿನ'ವನ್ನು ಆಚರಿಸಲಾಗುವುದು.

ಶಾಸಕ ಎಸ್.ಎ. ರವೀಂದ್ರನಾಥ್, ಸಂಸದ ಜಿ.ಎಂ. ಸಿದ್ಧೇಶ್ವರ, ಮಾಜಿ ಎಂ.ಎಲ್.ಸಿ. ಡಾ. ಎ.ಹೆಚ್.ಶಿವಯೋಗಿ ಸ್ವಾಮಿ, ವೀರೇಶ್ ಹನಗವಾಡಿ, ಪ್ರಧಾನ ಕಾರ್ಯದರ್ಶಿಗಳಾದ ಬಿ.ಎಸ್.ಜಗದೀಶ್, ಶಾಂತರಾಜ್ ಪಾಟೀಲ್, ಪಾಲಿಕೆ ಮಹಾಪೌರ ಅಜಯಕುಮಾರ್, ಮಹಾನಗರ ಪಾಲಿಕೆ ಸದಸ್ಯರಾದ ಎಸ್.ಟಿ.ವೀರೇಶ್, ಪ್ರಸನ್ನಕುಮಾರ್, ಜಯ್ಯಮ್ಮ ಗೋಪಿನಾಯ್ಕ, ಎಲ್.ಟಿ.ಗೋಣೆಪ್ಪ, ಮಂಜಾನಾಯ್ಕ, ಜಿಲ್ಲಾ ಉಪಾಧ್ಯಕ್ಷ ಜಿ. ಮಂಜಾನಾಯ್ಕ, ಮಂಡಲದ ಅಧ್ಯಕ್ಷ ಸಂಗನಗೌಡ್ರು, ಪ್ರಧಾನ ಕಾರ್ಯದರ್ಶಿ ಹನುಮಂತಪ್ಪ ವಕೀಲರು, ಬಸವರಾಜಯ್ಯ, ಆಶ್ರಯ ಕಮಿಟಿ ಸದಸ್ಯರಾದ ರಾಜಪ್ಪ ಎಂ. ಶಾಮನೂರು, ಚಿದಾನಂದ್ ಹಾಗೂ ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಹನುಮಂತನಾಯ್ಕ, ಪ್ರಧಾನ ಕಾರ್ಯದರ್ಶಿಗಳಾದ ಗಂಗಾಧರ್, ಆಂಜನೇಯ ಮತ್ತಿತರರು ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಉತ್ತರ ಮಂಡಲದ ಎಸ್ಸಿ ಮೋರ್ಚಾ ಅಧ್ಯಕ್ಷ ರವಿನಾಯ್ಕ ಎಂ. ತಿಳಿಸಿದ್ದಾರೆ.

## ಹರಿಹರದಲ್ಲಿ ಇಂದು ಶ್ರೀ ವೈನತೇಯ ಯಾಗ

ಶ್ರೀ ತ್ರಿದಂಡಿ ಶ್ರೀಮನ್ನಾರಾಯಣ ರಾಮಾನುಜ ಚಿನ್ನಜಿಯ್ಯರ್ ಸ್ವಾಮಿಗಳಿಂದ ತುಂಗಭದ್ರಾ ಪುಷ್ಕರ ಲೋಕ ಕಲ್ಯಾಣಾರ್ಥ ಕೋವಿಡ್ 19 (ಕೊರೊನಾ ಸೋಂಕು) ಸಂಪೂರ್ಣ ನಿವಾರಣೆಗಾಗಿ ಹರಿಹರದ ತುಂಗಭದ್ರಾ ನದಿ ದಡದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಹಮ್ಮಿಕೊಂಡಿರುವ ಬ್ರಹ್ಮಯಜ್ಞ ಕಾರ್ಯಕ್ರಮದಲ್ಲಿ ಇಂದು ಬೆಳಿಗ್ಗೆ 8 ಗಂಟೆಗೆ ಗೋ ಪೂಜೆ, ಅರ್ಚನೆ, ಸೇವಾಕಾಲ, ವೇದ ಪಾರಾಯಣ ನಡೆಯುವುದು. ನಂತರ 9 ಗಂಟೆಗೆ ಸರ್ಪದೋಷ ನಿವಾರಣೆಗಾಗಿ ಶ್ರೀ ವೈನತೇಯ ಯಾಗ ನಡೆಯಲಿದೆ.

# ಜಾನಪದ ಕೆಳಹಂತದ ಹಳ್ಳಿ ಜನರ ವಿಶ್ವಕೋಶ : ಡಾ. ವಿಶ್ವನಾಥ್



ದಾವಣಗೆರೆ, ನ.27- ಜನಪದರ ಮೌಖಿಕ ಭಾಷೆ ಜಾನಪದ. ಓದು ಬರಹವನ್ನರಿಯದ ನಾಗರಿಕತೆಯ ಕೆಳಹಂತದ ಹಳ್ಳಿಯ ಜನತೆಯ ವಿಶ್ವಕೋಶ ಜಾನಪದ. ಜನ ಜೀವನದಲ್ಲಿ ಹಾಸುಹೊಕ್ಕಾಗಿರುವ ಹಾಸ್ಯವು ಜಾನಪದದಲ್ಲಿ ಹುಟ್ಟಿಕೊಳ್ಳುತ್ತದೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಸಹ ಪ್ರಾಧ್ಯಾಪಕ ಡಾ. ಎಚ್. ವಿಶ್ವನಾಥ್ ತಿಳಿಸಿದರು.

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಂತರ್ಜಾಲದ ಮೂಲಕ ಹಮ್ಮಿಕೊಂಡಿರುವ ಕನ್ನಡ ನುಡಿಹಬ್ಬದ 26ನೇ ದಿನದ ಉಪನ್ಯಾಸದಲ್ಲಿ 'ಜನಪದರ ಹಾಸ್ಯಪ್ರವೃತ್ತಿ' ಎನ್ನುವ ವಿಷಯ ಕುರಿತು ಅವರು ಮಾತನಾಡಿದರು.

ಜನಪದವು ಜನರ ಜೀವನಕ್ಕೆ ಬೇಕಾದಂತಹ ಬಹುಮುಖ್ಯ ವಿಚಾರಗಳನ್ನು ಜಾನಪದ ಕಥೆಗಳ ಮೂಲಕ, ಹಾಡುಗಳ ಮೂಲಕ, ಲಾವಣಿಗಳ ಮೂಲಕ, ಜಾನಪದ ನಾಟಕಗಳ ಮೂಲಕ ಕಟ್ಟಿಕೊಟ್ಟಿದೆ. ಜನಪದ ಸಾಹಿತ್ಯದ ಆಳದಲ್ಲೂ ಹಾಸ್ಯವನ್ನು ಕಾಣಬಹುದಾಗಿದೆ. ಅಂದರೆ ಗರತಿಯರ ಹಾಡಿನಲ್ಲಿ, ಬೆಡಗು ಗಳಲ್ಲಿ, ಒಗಟುಗಳಲ್ಲಿ, ಗಾದೆಗಳಲ್ಲಿ ಹಾಸ್ಯ ಹಾಸು ಹೊಕ್ಕಾಗಿದೆ.

ಜನಪದರು ಕಂಡುಕೊಂಡ ಮುಖ್ಯವಾದ ಸತ್ಯವೆಂದರೆ ಹಾಸ್ಯಗಳ ಜೊತೆಗೆ ನೀತಿಸಾರಗಳನ್ನು ಹೊರಹಾಕಲಾಗಿದೆ. ಹಾಸ್ಯದ ಮೂಲಕ ಸಮಾಜದಲ್ಲಿರುವ ಅಂಕು-ಡೊಂಕುಗಳನ್ನು, ಆಚರಣೆಗಳನ್ನು, ಆಚಾರ-ವಿಚಾರಗಳನ್ನು, ಪದ್ಧತಿಗಳನ್ನು ಹೀಗೆ ವಿವಿಧ ಮುಖಗಳನ್ನು ಹಾಸ್ಯದ ಮೂಲಕ ಜನರಿಗೆ ಜನಪದರು ತಲುಪಿಸುತ್ತಿದ್ದರು. ನಾಟಕಗಳಲ್ಲಿ, ಬಯಲಾಟಗಳಲ್ಲಿ ನಿತ್ಯಜೀವನದ ಸನ್ನಿವೇಶಗಳನ್ನು ಎದುರಿಸುತ್ತಲೇ ವಿಭಿನ್ನ ಹಾಸ್ಯ ಪಾತ್ರಗಳ ಮೂಲಕ ಜನರಿಗೆ ಮನರಂಜನೆಯನ್ನು ಜನಪದರು ನೀಡುತ್ತಿದ್ದರು ಎಂದು ವಿಶ್ವನಾಥ್ ತಮ್ಮ ಉಪನ್ಯಾಸದಲ್ಲಿ ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, 'ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ ಎಳ್ಳು ಜೀರಿಗೆ ಬೆಳೆವಂತ, ಎಳ್ಳು ಜೀರಿಗೆ ಬೆಳೆವಂತ ಭೂಮಿತಾಯ ಎದ್ದೊಂದು ಗಳಿಗೆ ನೆನೆದೇನಾ' ಎನ್ನುವ ಜಾನಪದ ಹಾಡಿನ ಸೊಗಡು ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಮದುವೆ ಮನೆ, ಹೊಲ ಮನೆ ಕೆಲಸದ ಸಂದರ್ಭಗಳಲ್ಲಿ ಹಾಸ್ಯ ಚಟಾಕಿಗಳ ಮೂಲಕ ಜೀವನ ಕಳೆಯುತ್ತಿದ್ದ ಕಾಲ ಅಂದಿನದಾಗಿತ್ತು. ಇಂದಿನ ಆಧುನಿಕ ಯುಗದಲ್ಲಿ ಸಮಾಜದಲ್ಲಿ ಜನಪದರ ಇಂತಹ ಸೊಗಡು ಮಾಯವಾಗುತ್ತಿದೆ. ಇವತ್ತು ಸಾಹಿತ್ಯಕ್ಕೆ ಜನಪದ ಹಾಡುಗಳು, ಒಗಟುಗಳು, ಸಂಭಾಷಣೆಗಳು ಮೂಲಾಧಾರಗಳಾಗಿ ಇಂದು ಈ ಮಟ್ಟದಲ್ಲಿ ಸಾಹಿತ್ಯ ಬೆಳೆಯಲಿಕ್ಕೆ ಸಾಧ್ಯವಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ ಎಂದು ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ ನುಡಿದರು.

ಕರ್ನಾಟಕ ರಾಜ್ಯ ಪ್ರೌಢ ಶಾಲಾ ಸಹಶಿಕ್ಷಕರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ ಸ್ವಾಗತಿಸಿದರು.

ಇಂದಿನ ಸುಗಮ ಸಂಗೀತ ಕಾರ್ಯಕ್ರಮದಲ್ಲಿ ನಾಡಗೀತೆ ಹಾಗೂ ಕನ್ನಡ ಗೀತೆಗಳನ್ನು ದಾವಣಗೆರೆಯ ಕದಳಿ ಮಹಿಳಾ ವೇದಿಕೆಯ ಝೇಂಕಾರ ತಂಡದವರು ಹಾಡುವುದರೊಂದಿಗೆ ಕಾರ್ಯಕ್ರಮಕ್ಕೆ ಮೆರಗು ತಂದುಕೊಟ್ಟರು.

ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ನವೆಂಬರ್ 28, 2020

# ವಿಜಯನಗರ ಜಿಲ್ಲೆ ರಚನೆ ಘೋಷಣೆ

## ಗೃಹ ಮಂಡಳಿಯಿಂದ 98 ಕಡೆ ಬಡಾವಣೆ

ಬೆಂಗಳೂರು, ನ. 27 - ಬಳ್ಳಾರಿ ಜಿಲ್ಲೆಯನ್ನು ವಿಭಜಿಸಿ ಹೊಸದಾಗಿ ವಿಜಯನಗರ ಜಿಲ್ಲೆ ರಚಿಸಿ ರಾಜ್ಯ ಸರ್ಕಾರ ಇಂದಿಲ್ಲಿ ಘೋಷಣೆ ಮಾಡಿದೆ ಅಲ್ಲದೆ, ರಾಜ್ಯದಲ್ಲಿ ಸೂರಿಲ್ಲದವರಿಗೆ ಶಾಶ್ವತ ವಸತಿ ಕಲ್ಪಿಸಲು ಕರ್ನಾಟಕ ಗೃಹ ನಿರ್ಮಾಣ ಮಂಡಳಿ ವತಿಯಿಂದ 98 ಸ್ಥಳಗಳಲ್ಲಿ 7,275.75 ಕೋಟಿ ರೂ. ವೆಚ್ಚದಲ್ಲಿ ಬಡಾವಣೆಗಳನ್ನು ನಿರ್ಮಿಸುವ ಮಹತ್ವದ ತೀರ್ಮಾನ ಕೈಗೊಂಡಿದೆ.

ಸಚಿವ ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ಹೊಸಪೇಟೆಯನ್ನು ಕೇಂದ್ರವಾಗಿರಿಸಿ ಆರು ತಾಲ್ಲೂಕು ಒಳಗೊಂಡಂತೆ ಹೊಸ ಜಿಲ್ಲೆ ರಚನೆಗೆ ಅನುಮತಿ ನೀಡಲಾಗಿದೆ ಎಂದರು.

ನೂತನವಾಗಿ ರಚನೆಯಾಗಲಿರುವ ವಿಜಯನಗರ ಜಿಲ್ಲೆಗೆ ಹೊಸಪೇಟೆ, ಹರಪನಹಳ್ಳಿ, ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ, ಕೊಟ್ಟೂರು ಹಾಗೂ ಕೂಡ್ಲಿಗಿ ತಾಲ್ಲೂಕುಗಳು ಬರಲಿವೆ.

ಆಡಳಿತ ದೃಷ್ಟಿಯಿಂದ ಸರ್ಕಾರ, ಬಳ್ಳಾರಿಯನ್ನು ವಿಭಜಿಸುವ ನಿರ್ಧಾರ ಕೈಗೊಂಡಿದೆ, ಇದರೊಂದಿಗೆ ರಾಜ್ಯದಲ್ಲಿ ಜಿಲ್ಲೆಗಳ ಸಂಖ್ಯೆ 31ಕ್ಕೆ ಏರಿಕೆಯಾದಂತಾಗಿದೆ.

ಗೃಹ ನಿರ್ಮಾಣ ಮಂಡಳಿಯು ಪ್ರಸಕ್ತ ಸಾಲಿನಲ್ಲಿ ವಸತಿ ಸಮುಚ್ಚಯ ಅಲ್ಲದೆ, ಸ್ಥಳೀಯ ಬೇಡಿಕೆಗಳಿಗೆ ಅನುಗುಣವಾಗಿ ಹೊಸ ಬಡಾವಣೆ ನಿರ್ಮಿಸಲು ಮಂಡಳಿಗೆ ಅನುಮತಿ ದೊರಕಿಸಲಾಗಿದೆ ಎಂದರು.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಸಂಬಂಧ ಸಚಿವ ಸಂಪುಟದ ಉಪಸಮಿತಿ ರಚಿಸಲಾಗಿದೆ.

ನೈಸ್ ಯೋಜನೆಯಡಿ ಬರುವ ಜಮೀನುಗಳ ವ್ಯಾಜ್ಯಗಳ ಕುರಿತು ಪರಿಶೀಲಿಸಿ, ಸೂಕ್ತ ಶಿಫಾರಸ್ಸು ಮಾಡಲು ರಚಿಸಲಾಗಿರುವ ಸಚಿವ ಸಂಪುಟದ ಉಪಸಮಿತಿಯನ್ನು ಪುನರ್ ರಚಿಸಲು ಸಭೆ ನಿರ್ಧರಿಸಿದೆ ಎಂದರು.

ಕೃಷಿ ಮಾರಾಟ ಇಲಾಖೆಗೆ ಡಬ್ಲ್ಯೂಐಎಫ್ ಯೋಜನೆಯಡಿ 39.36 ಕೋಟಿ ರೂ. ವೆಚ್ಚದಲ್ಲಿ ಎರಡು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅನುಮತಿಸಲಾಗಿದೆ ಎಂದರು.

### ಹೊನ್ನಾಳಿ ಪಟ್ಟಣ ಪಂಚಾಯ್ತಿಯನ್ನು ಪುರಸಭೆಯಾಗಿ ಮೇಲ್ದರ್ಜೆಗೇರಿಸಲು ರಾಜ್ಯ ಸಂಪುಟದ ತೀರ್ಮಾನ

ದಾವಣಗೆರೆಯ ಹೊನ್ನಾಳಿ ಪಟ್ಟಣ ಪಂಚಾಯತಿ ಅನ್ನು ಪುರಸಭೆಯಾಗಿ ಮೇಲ್ದರ್ಜೆಗೆ ಏರಿಸಲು ತೀರ್ಮಾನ ಕೈಗೊಳ್ಳಲಾಯಿತು. ಅದೇ ರೀತಿ ಕೋಲಾರ, ಚಿಕ್ಕಬಳ್ಳಾಪುರ, ರಾಯಚೂರು ಜಿಲ್ಲೆಯ ಕೆಲವು ಪಂಚಾಯ್ತಿಗಳನ್ನು ಪಟ್ಟಣ ಪಂಚಾಯ್ತಿಗಳಾಗಿ ಮೇಲ್ದರ್ಜೆಗೇರಿಸಲು ನಿರ್ಧಾರ ಕೈಗೊಳ್ಳಲಾಗಿದೆ ಎಂದರು. (5ನೇ ಪುಟಕ್ಕೆ)

# ಹಿಂದುಳಿದ ವರ್ಗಕ್ಕೆ 'ಲಿಂಗಾಯತ' ಯತ್ನ

## ವರಿಷ್ಠರ ಮಧ್ಯ ಪ್ರವೇಶದಿಂದ ಕೊನೆ ಗಳಿಗೆಯಲ್ಲಿ ಹಿಂದೆ ಸರಿದ ಸಿಎಂ

ಬೆಂಗಳೂರು, ನ. 2 7- ವೀರಶೈವ-ಲಿಂಗಾಯತ ಸಮುದಾಯವನ್ನು ಹಿಂದುಳಿದ ವರ್ಗಕ್ಕೆ ಸೇರ್ಪಡೆ ಮಾಡುವ ಪ್ರಸ್ತಾಪವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕೊನೆ ಗಳಿಗೆಯಲ್ಲಿ ಕೈಬಿಟ್ಟಿದ್ದಾರೆ.

ನಾಯಕತ್ವ ಬದಲಾವಣೆ ಸೂಚನೆ ಬೆನ್ನಲ್ಲೇ ಸಮಾಜದ ಬೆಂಬಲ ಉಳಿಸಿಕೊಳ್ಳಲು ಚಾಣಾಕ್ಷತನದಿಂದ ಮುಖ್ಯಮಂತ್ರಿ ಹಾಕಿದ್ದ ದಾಳಕ್ಕೆ ಕೇಂದ್ರ ಸರ್ಕಾರ ಮಧ್ಯ ಪ್ರವೇಶ ಮಾಡಿ ಅದನ್ನು ತಟಸ್ಥಗೊಳಿಸಿದೆ ಎನ್ನಲಾಗಿದೆ.

ತಮ್ಮ ಸಹೋದ್ಯೋಗಿಗಳಿಗೂ ಮುನ್ಸೂಚನೆ ನೀಡದೆ, ಕೊನೆ ಗಳಿಗೆಯಲ್ಲಿ ಸಚಿವ ಸಂಪುಟದ ಕಾರ್ಯಸೂಚಿಗೆ ವೀರಶೈವ-ಲಿಂಗಾಯತ ಸಮಾಜವನ್ನು ಹಿಂದುಳಿದ ವರ್ಗಕ್ಕೆ ಸೇರ್ಪಡೆ ಮಾಡಿಸಿ, ಮಂತ್ರಿಮಂಡಲದ ಅನುಮೋದನೆ ಪಡೆಯಲು ಮುಂದಾಗಿದ್ದರು.

ಇದರ ಸುಳಿವು ಅರಿಯುತ್ತಿದ್ದಂತೆ, ಕೆಲವು ಹಿರಿಯ ಸಚಿವರು ತರಾತುರಿಯಾಗಿ ಈ ನಿರ್ಧಾರ ಕೈಗೊಳ್ಳಬೇಡಿ ಎಂದು ಮುಖ್ಯಮಂತ್ರಿ ಅವರಿಗೆ ಮನವಿ ಮಾಡಿದರು, ಆದರೆ ಅದಕ್ಕೆ ಅವರು ಮನ್ನಣೆ ನೀಡಿರಲಿಲ್ಲ.

ಇಂತಹ ನಿರ್ಧಾರದಲ್ಲಿ ಪಾಲ್ಗೊಂಡು ವರಿಷ್ಠರ ಕೆಂಗಣ್ಣಿಗೆ ಗುರಿಯಾಗಬಾರದೆಂದು ಇಬ್ಬರು ಉಪಮುಖ್ಯಮಂತ್ರಿಗಳೂ ಸೇರಿದಂತೆ, 10ಕ್ಕೂ ಹೆಚ್ಚು ಸಚಿವರು ಸಬೂಬು ಹೇಳಿ ಸಭೆಯಿಂದ ದೂರ ಉಳಿದರು. ಮುಖ್ಯಮಂತ್ರಿ ಅವರ ಈ ನಿರ್ಧಾರ ಬಿಜೆಪಿ ಮತ್ತು ಕೇಂದ್ರ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುತ್ತದೆ ಎಂಬ ಮಾಹಿತಿ ತಲುಪುತ್ತಿದ್ದಂತೆ, ರಾಜ್ಯ ಆರ್.ಎಸ್.ಎಸ್.ನ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಅವರ ಗಮನಕ್ಕೆ ತರಲಾಯಿತು.

ಎಚ್ಚೆತ್ತ ಅವರು, ಗೃಹ ಸಚಿವ ಅಮಿತ್ ಷಾ ಅವರನ್ನು ಸಂಪರ್ಕಿಸಿ ಯಡಿಯೂರಪ್ಪ ಅವರು ಪಕ್ಷ ಮತ್ತು ಕೇಂದ್ರ ಸರ್ಕಾರದ ಜೊತೆ ಸಮಾಲೋಚಿಸದೆ ಮಹತ್ವದ ನಿರ್ಧಾರ ಕೈಗೊಳ್ಳಲು ಹೊರಟಿದ್ದಾರೆ, ಇದರಿಂದ ನಾವು ಇಕ್ಕಟ್ಟಿಗೆ ಸಿಲುಕುತ್ತೇವೆ ಎಂದು ಮನವರಿಕೆ ಮಾಡಿಕೊಟ್ಟರು.

ಈ ಮೊದಲು ಯಡಿಯೂರಪ್ಪ ಅವರಿಗೆ ಭೇಟಿಗಾಗಿ ಅವಕಾಶವನ್ನೇ ನೀಡದ ಅಮಿತ್ ಷಾ, ಸಂಪುಟ ಸಭೆ ಆರಂಭಕ್ಕೂ ಒಂದು ಗಂಟೆ ಮುನ್ನ ಮುಖ್ಯಮಂತ್ರಿ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ವೀರಶೈವ-ಲಿಂಗಾಯತ ಸಮುದಾಯವನ್ನು ಹಿಂದುಳಿದ ವರ್ಗಕ್ಕೆ ಸೇರ್ಪಡೆ ಮಾಡುವ ಶಿಫಾರಸ್ಸನ್ನು ಕೈಬಿಡಿ ಎಂದು ಸಲಹೆ ನೀಡಿದರು.

ಈ ನಿರ್ಧಾರಕ್ಕೆ ನಮ್ಮ ವಿರೋಧವಿಲ್ಲ, ಇದು ಕರ್ನಾಟಕಕ್ಕೆ ಸೀಮಿತವಾಗಿಲ್ಲ, ಬೇರೆ ರಾಜ್ಯಗಳಿಂದಲೂ ಸ್ಥಳೀಯ ಪ್ರಮುಖ ಸಮುದಾಯಗಳಿಂದ ಬೇಡಿಕೆಗಳಿವೆ, ನೀವು ಇಂತಹ ತೀರ್ಮಾನವನ್ನು ವೈಯಕ್ತಿಕವಾಗಿ ತೆಗೆದುಕೊಳ್ಳುವುದು ಸರಿಯಲ್ಲ ಎಂದು ತಿಳಿಸಿದ್ದಾರೆ.

ರಾಜ್ಯ ಸರ್ಕಾರದ ಮಟ್ಟದಲ್ಲಿ ಇಂತಹ ತೀರ್ಮಾನ ಕೈಗೊಳ್ಳುವ ಮುನ್ನ ಪಕ್ಷದ ವೇದಿಕೆಯಲ್ಲಿ ಚರ್ಚಿಸಬೇಕು, ಒಂದು ವೇಳೆ ನೀವು ನಿರ್ಧಾರ ಕೈಗೊಂಡು ಕೇಂದ್ರಕ್ಕೆ ಶಿಫಾರಸು ಕಳುಹಿಸಿದಾಗ, ಕೇಂದ್ರ ಇದರ ಪರವಾಗಿ ನಿರ್ಧಾರ ಕೈಗೊಳ್ಳದಿದ್ದರೆ, ಪಕ್ಷ ಮತ್ತು ಸರ್ಕಾರದ (6ನೇ ಪುಟಕ್ಕೆ)

### ಕಾನೂನು ತಜ್ಞರ ಸಲಹೆಯಂತೆ ನಿರ್ಧಾರ ಮುಂದೂಡಿದ್ದೇವೆ : ಮಾಧುಸ್ವಾಮಿ

ವೀರಶೈವ - ಲಿಂಗಾಯತ ಸಮುದಾಯವನ್ನು ಹಿಂದುಳಿದ ವರ್ಗಕ್ಕೆ ಸೇರಿಸುವ ವಿಷಯ ತರಾತುರಿಯಲ್ಲಿ ಆಗದು ಎಂದಿರುವ ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ, ತಜ್ಞರ ಸಲಹೆಯಂತೆ ಈ ಕುರಿತು ನಿರ್ಧಾರ ಮುಂದೂಡಿರುವುದಾಗಿ ಹೇಳಿದ್ದಾರೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ವಿಷಯವನ್ನು ತೇಲಿಸಿದರು.

ಕರ್ನಾಟಕದಲ್ಲಿನ 2ಎ ನಲ್ಲಿ ಮೀಸಲಾತಿ ಕೇಳಲು ನಾವು ಮುಂದಾಗಿರಲಿಲ್ಲ, ವೀರಶೈವ-ಲಿಂಗಾಯತ ರಾಜ್ಯದಲ್ಲಿ ದೊಡ್ಡ ಸಮುದಾಯ, ಈ ಸಮಾಜವನ್ನು ಹಿಂದುಳಿದ ವರ್ಗಕ್ಕೆ ಸೇರಿಸಬೇಕೆಂದು 1994 ರಿಂದಲೂ ಬೇಡಿಕೆ ಇದೆ. ಕೇಂದ್ರ ಸರ್ಕಾರ ಸಮಾಜದ 16 ಉಪಜಾತಿಗಳನ್ನು ಮಾತ್ರ ಪಟ್ಟಿಗೆ ಸೇರಿಸಿ ಉಳಿದವನ್ನು ಕೈಬಿಡಲಾಗಿತ್ತು ಎಂದು ಹೇಳಿದರು.

ತದನಂತರ ಉಳಿದ ಉಪಜಾತಿಗಳು ತಮ್ಮನ್ನೂ ಹಿಂದುಳಿದ ವರ್ಗಕ್ಕೆ ಸೇರಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮೇಲೆ ಒತ್ತಡ (7ನೇ ಪುಟಕ್ಕೆ)

## ಬೆಲಗೂರಿನ ಬಿಂದು ಮಾಧವ ಸ್ವಾಮೀಜಿ ನಿಧನ



ಚಿತ್ರದುರ್ಗ, ನ. 27 - ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಬೆಲಗೂರು ಗ್ರಾಮದ ಆಂಜನೇಯ ದೇಗುಲದ ಅವಧೂತ ಎಂದು ಕರೆಸಿಕೊಂಡಿದ್ದ ಬಿಂದು ಮಾಧವ ಶರ್ಮಾ ಸ್ವಾಮೀಜಿ ಇಂದು ವಿಧಿವಶರಾಗಿದ್ದಾರೆ.

ಸ್ವಾಮೀಜಿಗೆ ಸುಮಾರು 75 ವರ್ಷ ವಯಸ್ಸಾಗಿತ್ತು. ಅನಾರೋಗ್ಯದಿಂದಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಸ್ವಾಮೀಜಿ ಚಿಕಿತ್ಸೆ ಪಡೆಯುತ್ತಿದ್ದರು. ದೇವಸ್ಥಾನಗಳನ್ನು ಕಟ್ಟುವ ಮೂಲಕ ಶ್ರೀಗಳು ಜನಪ್ರಿಯತೆ ಗಳಿಸಿದ್ದರು. ಬೆಂಗಳೂರು ಮೂಲದ ಶ್ರೀಗಳು, ಆಂಜನೇಯನ ಆರಾಧಕರು. ರಾಜ್ಯದ ಹಲವೆಡೆ ಸಾವಿರಾರು ಭಕ್ತರನ್ನು ಹೊಂದಿದ್ದರು.


## ರಸ್ತೆ ಕಾಮಗಾರಿಗೆ ಎಸ್ಸೆಸ್ ಚಾಲನೆ

ದಾವಣಗೆರೆ, ನ. 27- ದಕ್ಷಿಣ ವಿಧಾನ ಸಭಾ ಕ್ಷೇತ್ರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಡಿ ಪಾಲಿಕೆಯ 7ನೇ ವಾರ್ಡ್‌ನ ಜಾಲಿನಗರದ 2ನೇ ಮುಖ್ಯರಸ್ತೆಯ 5ನೇ ಅಡ್ಡರಸ್ತೆಯಲ್ಲಿ 9.17 ಲಕ್ಷ ರೂ. ವೆಚ್ಚದ ಸಿ.ಸಿ.ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಭೂಮಿ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎಸ್ಸೆಸ್, ಈಗಾಗಲೇ ಜಾಲಿನಗರದ ಎಲ್ಲಾ ನಿವಾಸಿಗಳಿಗೆ ಹಕ್ಕುಪತ್ರಗಳನ್ನು ವಿತರಿಸಲಾಗಿದೆ. ಬಹುತೇಕ ಎಲ್ಲಾ ರಸ್ತೆಗಳನ್ನು ಸಿ.ಸಿ.ರಸ್ತೆಗಳನ್ನಾಗಿ ಮಾಡಲಾಗಿದೆ.ಇನ್ನುಳಿದ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಈ ಹಿಂದೆ ಜಾಲಿನಗರ ಸೇರಿದಂತೆ 7ನೇ ವಾರ್ಡ್‌ನ ದೇವರಾಜ ಅರಸು ಬಡಾವಣೆಯ ರಸ್ತೆಗಳನ್ನು ಸಹ ಅಭಿವೃದ್ಧಿ ಪಡಿಸಲಾಗಿತ್ತು. ಬಾಕಿಯಿರುವ ರಸ್ತೆಗಳನ್ನು ಶೀಘ್ರದಲ್ಲೇ ಕಾಂಕ್ರೀಟ್ ರಸ್ತೆಗಳನ್ನಾಗಿ ಮಾಡಲಾಗುವುದು ಎಂದರು.

ಪಾಲಿಕೆ ಸದಸ್ಯ ವಿನಾಯಕ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲಿಕೆ ವಿಪಕ್ಷ ನಾಯಕ (6ನೇ ಪುಟಕ್ಕೆ)



## ಜನವರಿಯಲ್ಲಿ ಮನೆ-ಮನೆಗೆ ಪೈಪ್ ಮೂಲಕ ಅಡುಗೆ ಅನಿಲ ಸಂಪರ್ಕ ಕಾಮಗಾರಿಗೆ ಚಾಲನೆ



ದಾವಣಗೆರೆ, ನ.27- ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮತ್ತು ನ್ಯಾಚುರಲ್ ಗ್ಯಾಸ್ ರೆಗ್ಯುಲೇಟರಿ ಬೋರ್ಡ್ ವತಿಯಿಂದ ದಾವಣಗೆರೆ ಮತ್ತು ಚಿತ್ರದುರ್ಗ ನಗರಗಳಲ್ಲಿರುವ ಎಲ್ಲಾ ಮನೆಗಳಿಗೂ ಪೈಪ್ ಮೂಲಕ ಅಡುಗೆ ಅನಿಲ ಸಂಪರ್ಕ ಕಲ್ಪಿಸುವ ಮಹತ್ವಾಕಾಂಕ್ಷೆ ಯೋಜನೆಯ ಕುರಿತು ಸಂಸದ ಜಿ.ಎಂ.ಸಿದ್ಧೇಶ್ವರ ಅವರು ಇಂದು ಯೂನಿಸಾನ್ ಕಂಪನಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಈ ಯೋಜನೆಗೆ 2018 ರಲ್ಲಿ ಭೂಮಿ ಪೂಜೆ ನೆರವೇರಿಸಲಾಗಿತ್ತು. ಕೇಂದ್ರ ಸರ್ಕಾರದ ಪೆಟ್ರೋಲಿಯಂ ಸಚಿವಾಲಯ ನಡೆಸಿದ ಹರಾಜು ಪ್ರಕ್ರಿಯೆಯಲ್ಲಿ ದೇಶದ ಒಟ್ಟು 86 ಭೌಗೋಳಿಕ ಪ್ರದೇಶಗಳನ್ನು ವಿವಿಧ ಕಂಪನಿಗಳಿಗೆ ಹಂಚಿಕೆ ಮಾಡಲಾಗಿದೆ. ಅದರಂತೆ ಮೆ. ಯೂನಿಸಾನ್ ಎನ್ವಿಯಾರ್ನ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಚಿತ್ರದುರ್ಗ ಮತ್ತು ದಾವಣಗೆರೆ ಭೌಗೋಳಿಕ ಪ್ರದೇಶಗಳನ್ನು ಹಂಚಿಕೆ ಮಾಡಲಾಗಿದೆ. ಮುಂಬರುವ ಏಳೆಂಟು ವರ್ಷಗಳಲ್ಲಿ ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಸುಮಾರು ಒಂದು ಲಕ್ಷದ ಹತ್ತು ಸಾವಿರದಷ್ಟು ಮನೆಗಳಿಗೆ ಪೈಪ್ ಗ್ಯಾಸ್ ಸಂಪರ್ಕ ಕಲ್ಪಿಸುವ ಉದ್ದೇಶವಿದೆ ಎಂದು ಯೂನಿಸಾನ್ ಕಂಪನಿಯ ಅಡಿಷನಲ್ ಮ್ಯಾನೇಜರ್ ಸುದೀಪ್ ಶರ್ಮಾ ಮಾಹಿತಿ ಒದಗಿಸಿದರು.

ಯೂನಿಸಾನ್ ಕಂಪನಿಯವರು ಈಗಾಗಲೇ ಚಿತ್ರದುರ್ಗ ನಗರದಲ್ಲಿ ಮನೆ ಮನೆಗೆ ಅಡುಗೆ ಅನಿಲ ಸಂಪರ್ಕ ಕಲ್ಪಿಸುವ ಕಾಮಗಾರಿಯನ್ನು ಪ್ರಾರಂಭಿಸಿದ್ದು, ಈಗ ದಾವಣಗೆರೆ ನಗರದ ಎಸ್.ಎಸ್.ಬಡಾವಣೆ ಮತ್ತು ವಿನಾಯಕ ಬಡಾವಣೆ ಈ ಎರಡು ಬಡಾವಣೆಗಳಲ್ಲಿ ಜನವರಿ ತಿಂಗಳಲ್ಲಿ ಕಾಮಗಾರಿ ಪ್ರಾರಂಭ ಮಾಡಲಿದ್ದಾರೆ. ಈ ಎರಡು ಬಡಾವಣೆಗಳಲ್ಲಿ ಯೂನಿಸಾನ್ ಕಂಪನಿಯವರು ಈಗಾಗಲೇ ಸರ್ವೆ ಕಾರ್ಯ ನಡೆಸಿದ್ದು, ಸುಮಾರು 16 ಕಿ.ಮೀ ನಷ್ಟು ಪೈಪ್ ಲೈನ್ ಕಾಮಗಾರಿ ಕೈಗೊಳ್ಳುವ ಉದ್ದೇಶ ಹೊಂದಿದ್ದಾರೆ. ಈ ಎರಡೂ ಬಡಾವಣೆಗಳಲ್ಲಿ ಕೈಗೊಳ್ಳಲಿರುವ ಕಾಮಗಾರಿಯ ಸಂಪೂರ್ಣ ವಿವರವನ್ನು ದಾವಣಗೆರೆ ಮಹಾನಗರ ಪಾಲಿಕೆಗೆ ಸಲ್ಲಿಸಲಾಗಿದ್ದು, ಪೈಪ್ ಲೈನ್ ಅಳವಡಿಸಿದ ನಂತರ ರಸ್ತೆ ದುರಸ್ತಿ ಸೇರಿದಂತೆ (7ನೇ ಪುಟಕ್ಕೆ)

## ಕೊಟ್ಟೂರಿನಲ್ಲಿ 11.24 ಕೋ.ರೂ.ಗಳ ಅಭಿವೃದ್ಧಿ ಯೋಜನೆ

ಕೊಟ್ಟೂರು, ನ.27 - ಪಟ್ಟಣದ ಅಭಿವೃದ್ಧಿಗೆ 11.24 ಕೋಟಿ ರೂ.ಗಳ ಅನುದಾನವನ್ನು ಕೊಟ್ಟೂರು ಜನತೆಗೆ ನೀಡಿರುವುದಾಗಿ ಶಾಸಕ ಎಸ್.ಭೀಮಾನಾಯ್ಕ ತಿಳಿಸಿದ್ದಾರೆ.

ಪಟ್ಟಣದ ಕಾಂಗ್ರೆಸ್ ಮುಖಂಡ ಪಿ. ಸುಧಾಕರ ಗೌಡ ನಿವಾಸದಲ್ಲಿ ಇಂದು ಸುದ್ದಿಗೋಷ್ಠಿ ನಡೆಸಿದ ಅವರು, ಪಟ್ಟಣದ ಅರಬಾವಿ-ಚಳ್ಳಕೆರೆ ರಾಜ್ಯ ಹೆದ್ದಾರಿ ರಸ್ತೆಯ ನಿರ್ಮಾಣಕ್ಕೆ 3 ಕೋಟಿ ರೂ., ಎಕ್ಕುಂಬಿ-ಮೊಳಕಾಲ್ಮೂರು ಹೆದ್ದಾರಿಯನ್ನು ಅಭಿವೃದ್ಧಿ ಪಡಿಸಲು 3.43 ಕೋಟಿ ರೂ., 21 ಲಕ್ಷ ರೂ ವೆಚ್ಚದಲ್ಲಿ ಪಶು ಆಸ್ಪತ್ರೆ ನಿರ್ಮಾಣ, 50 ಲಕ್ಷ ರೂ ವೆಚ್ಚದ ಯಾತ್ರಿ ನಿವಾಸ ಮತ್ತಿತರ ಕಾಮಗಾರಿಗಳಿಗೆ ಭೂಮಿ ಪೂಜೆಯ ಮೂಲಕ ಚಾಲನೆ ನೀಡಿರುವುದಾಗಿ ಹೇಳಿದರು.

ಸಂಸದ ವೈ.ದೇವೇಂದ್ರಪ್ಪ ಯಾವುದೇ ಅನುದಾನವನ್ನು ಜಿಲ್ಲಾಭಿವೃದ್ಧಿಗೆ ತರದೇ ಕೇವಲ ಶಾಸಕರುಗಳ ಅನುದಾನಡಿ ನಿರ್ಮಾಣಗೊಂಡ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿ ಹಸ್ತಕ್ಷೇಪ ಮಾಡುತ್ತಿದ್ದಾರೆ. (7ನೇ ಪುಟಕ್ಕೆ)

## ಸ್ಪೆಷಾಲಿಟಿ ವೈದ್ಯಕೀಯ ಕೋರ್ಸ್‌ಗೆ ಮೀಸಲಾತಿ ಇಲ್ಲ : ಸುಪ್ರೀಂ ಕೋರ್ಟ್

ನವದೆಹಲಿ, ನ. 27 – 2020 -21ರ ಶೈಕ್ಷಣಿಕ ವರ್ಷದ ಸೂಪರ್ ಸ್ಪೆಷಾಲಿಟಿ ವೈದ್ಯಕೀಯ ಕೋರ್ಸ್‌ಗಳಲ್ಲಿ ವೈದ್ಯರಿಗೆ ಮೀಸಲಾತಿ ಕಲ್ಪಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಸೇವೆಯಲ್ಲಿರುವ ವೈದ್ಯರಿಗೆ ಶೇ.50ರಷ್ಟು ಮೀಸಲಾತಿ ಕಲ್ಪಿಸಲು ತಮಿಳುನಾಡು ಸರ್ಕಾರ ಹೊರಡಿಸಿರುವ ಆದೇಶ ಅರ್ಹತೆ ಹೊಂದಿದ ವೈದ್ಯರ ಹಿತಕ್ಕೆ ವಿರುದ್ಧವಾಗಿದೆ (4ನೇ ಪುಟಕ್ಕೆ)

## ವಿತ್ತೀಯ ಕೊರತೆ ಬಜೆಟ್ ಗುರಿಯ ಶೇ.120

ನವದೆಹಲಿ, ನ. 27 – ಪ್ರಸಕ್ತ ಹಣಕಾಸು ವರ್ಷದಲ್ಲಿ ಈಗಾಗಲೇ ವಿತ್ತೀಯ ಕೊರತೆಯ 9.53 ಲಕ್ಷ ಕೋಟಿ ರೂ.ಗಳಿಗೆ ತಲುಪಿದ್ದು, ಇದು ಬಜೆಟ್ ಅಂದಾಜಿಗಿಂತ ಸುಮಾರು ಶೇ.120ರಷ್ಟು ಹೆಚ್ಚಾಗಿದೆ.

ಆದಾಯ ಸಂಗ್ರಹಣೆಯ ಕುಸಿತ ವಿತ್ತೀಯ ಕೊರತೆ ಹೆಚ್ಚಾಗಲು ಪ್ರಮುಖ ಕಾರಣವಾಗಿದೆ. ಲಾಕ್‌ಡೌನ್ ಕಾರಣದಿಂದ ದೇಶದ ಆರ್ಥಿಕ ಚಟುವಟಿಕೆಗಳಿಗೆ ತೀವ್ರ ಹಿನ್ನಡೆಯಾಗಿತ್ತು. ಸೆಪ್ಟೆಂಬರ್ ಅಂತ್ಯದ ವೇಳೆಗೆ ವಿತ್ತೀಯ ಕೊರತೆಯು ಬಜೆಟ್ ಅಂದಾಜಿನ (6ನೇ ಪುಟಕ್ಕೆ)

## ನಿರೀಕ್ಷೆಗೂ ಮೀರಿದ ಆರ್ಥಿಕ ಚೇತರಿಕೆ

### ಉತ್ಪಾದನಾ ವಲಯದ ಬೆಳವಣಿಗೆಯಿಂದ ತಾಂತ್ರಿಕ ಆರ್ಥಿಕ ಹಿಂಜರಿತದ ನಡುವೆಯೂ ಚಿಗುರಿದ ಆಶಾಭಾವ

ನವದೆಹಲಿ, ನ. 27 – ದೇಶದ ಆರ್ಥಿಕ ವ್ಯವಸ್ಥೆ ಸೆಪ್ಟೆಂಬರ್ ಚತುರ್ಥದಲ್ಲಿ ನಿರೀಕ್ಷೆಗೂ ಮೀರಿದ ವೇಗ ಪಡೆದುಕೊಂಡಿದೆ. ಉತ್ಪಾದನಾ ವಲಯದಲ್ಲಿ ಗಣನೀಯ ಹೆಚ್ಚಳವಾಗಿರುವುದರಿಂದ, ಕೊರೊನಾ ಹಾಗೂ ಲಾಕ್‌ಡೌನ್ ನಡುವೆಯೂ ಕುಸಿತದ ಪ್ರಮಾಣ ಕಡಿಮೆಯಾಗಿದೆ.

ಪ್ರಸಕ್ತ ವರ್ಷದ ಮೊದಲ ಚತುರ್ಥದಲ್ಲಿ ಶೇ.23.9ರಷ್ಟು ಕುಸಿತವಾಗಿತ್ತು. ಆದರೆ, ಎರಡನೇ ಚತುರ್ಥದ ಕುಸಿತ ಕೇವಲ ಶೇ.7.5 ಆಗಿದೆ. ಇದು ಮುಂಬರುವ ದಿನಗಳಲ್ಲಿ ಗ್ರಾಹಕರಿಂದ ಬೇಡಿಕೆ ಹೆಚ್ಚಾಗುವ ಆಶಾಭಾವನೆಯನ್ನೂ ಮೂಡಿಸಿದೆ.

ಸತತ ಎರಡು ಚತುರ್ಥಗಳಲ್ಲಿ ಭಾರತ ಆರ್ಥಿಕ ಕುಸಿತ ಕಂಡಿರುವುದರಿಂದ, ದೇಶ ತಾಂತ್ರಿಕವಾಗಿ ಹಿಂಜರಿತಕ್ಕೆ ಸಿಲುಕಿದಂತಾಗಿದೆ. ಕಳೆದ ವರ್ಷ ಎರಡನೇ ಚತುರ್ಥದಲ್ಲಿ ಶೇ.4.4ರ ಆರ್ಥಿಕ ಬೆಳವಣಿಗೆಯಾಗಿತ್ತು.

ಜೂನ್ ತಿಂಗಳ ನಂತರ ಹಂತ ಹಂತವಾಗಿ ಆರ್ಥಿಕತೆಯನ್ನು ಮುಕ್ತಗೊಳಿಸಲಾಗಿತ್ತು. ಇದರಿಂದಾಗಿ ಆರ್ಥಿಕ ಚೇತರಿಕೆಯಾಗುತ್ತಿದೆ. (4ನೇ ಪುಟಕ್ಕೆ)

## ಕಾರಿಗನೂರು- ಕೂಡಲ ಸಂಗಮ ಮಹಿಮಾ ಪಾದಯಾತ್ರೆ ಆರಂಭ



ದಾವಣಗೆರೆ, ನ. 27- ಗ್ರಾಮ ಸ್ವರಾಜ್ಯದ ಬಗ್ಗೆ ಜಾಗೃತಿ ಮೂಡಿಸಲು ಮಾಜಿ ಶಾಸಕ ಹಾಗೂ ಜೆಡಿಯು ಮುಖಂಡ ಮಹಿಮಾ ಪಟೇಲ್ ಅವರ ಪಾದಯಾತ್ರೆಯ ಎರಡನೇ ಹಂತವಾಗಿ ಕಾರಿಗನೂರು ಗ್ರಾಮದಿಂದ ಕೂಡಲ ಸಂಗಮಕ್ಕೆ ಪ್ರಯಾಣ ಬೆಳೆಸಿದರು.

ಶುಕ್ರವಾರ ಕಾರಿಗನೂರಿನ ಜೆ.ಹೆಚ್. ಪಟೇಲ್ ಅವರ ಸಮಾಧಿಗೆ ಪೂಜೆ ಸಲ್ಲಿಸಿ ಪಾದಯಾತ್ರೆಗೆ ಚಾಲನೆ ನೀಡಲಾಯಿತು. ಯಾತ್ರೆಯು ಮಾಜಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಪುಣ್ಯಸ್ಮರಣೆಯ ದಿನವಾದ ಡಿಸೆಂಬರ್ 12ರಂದು ಕೂಡಲಸಂಗಮ ತಲುಪಲಿದೆ.

ಒಟ್ಟು 2,000 ಕಿ.ಮೀ. ಪಾದಯಾತ್ರೆಯನ್ನು ಕೈಗೊಳ್ಳುತ್ತಿರುವ ಪಟೇಲ್, ಮೊದಲ ಹಂತದಲ್ಲಿ ಬೆಂಗಳೂರಿನಿಂದ ಕಾರಿಗನೂರಿಗೆ ಪಾದಯಾತ್ರೆ ಮೂಲಕ 350 ಕಿ.ಮೀ. ಕ್ರಮಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯ್ತಿ ಸದಸ್ಯ ತೇಜಸ್ವಿ ಪಟೇಲ್, ಚನ್ನಗಿರಿ ಕೇದಾರ ಲಿಂಗ ಶಿವ ಶಾಂತವೀರ ಮಹಾಸ್ವಾಮೀಜಿ, ಅಣ್ಣಪ್ಪ ಕೆ.ಎಸ್. ಇತರರು ಉಪಸ್ಥಿತರಿದ್ದರು.

## ಕೂಡ್ಲಿಗಿ ವಿಜಯನಗರ ಜಿಲ್ಲೆಗೆ ಸೇರ್ಪಡೆ : ಸಂಭ್ರಮಾಚರಣೆ



ಕೂಡ್ಲಿಗಿ, ನ.27 - ನೂತನ ವಿಜಯನಗರ ಜಿಲ್ಲೆಗೆ ಕೂಡ್ಲಿಗಿ ತಾಲ್ಲೂಕು ಸೇರ್ಪಡೆ ಮಾಡಿ ಸಚಿವ ಸಂಪುಟದಲ್ಲಿ ನಿರ್ಧಾರವಾಗುತ್ತಿದ್ದಂತೆ ಇತ್ತ ಕೂಡ್ಲಿಗಿ ಪಟ್ಟಣ ಸೇರಿದಂತೆ ತಾಲ್ಲೂಕಿನ ಹಲವು ಭಾಗಗಳಲ್ಲಿ ಯುವಕರು, ಜನಪ್ರತಿನಿಧಿಗಳು, ಜನತೆ ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಿದರು.

ಪಟ್ಟಣದ ಮದಕರಿನಾಯಕ ವೃತ್ತದಲ್ಲಿ ಶುಕ್ರವಾರ ಮಧ್ಯಾಹ್ನ ಯುವಕರು, ನೌಕರರು, ವ್ಯಾಪಾರಿಗಳು, ವಿವಿಧ ಪಕ್ಷಗಳ ಮುಖಂಡರು ಹಾಗೂ ಸಾಮಾನ್ಯ ಜನತೆ ಸೇರಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಬಂಗಾರು ಹನುಮಂತು ಮಾತನಾಡಿ ಕೂಡ್ಲಿಗಿ ತಾಲ್ಲೂಕಿನಿಂದ ಹೊಸಪೇಟೆ ಕೇವಲ 43 ಕಿ.ಮೀ. ದೂರವಷ್ಟೇ ಇದ್ದು ರಾಷ್ಟ್ರೀಯ ಹೆದ್ದಾರಿ ಎರಡೂ ಪಟ್ಟಣಗಳಿಗೆ ಹೊಂದಿಕೊಂಡಂತೆ ಇರುವುದರಿಂದ ಗಂಟೆಯೊಳಗೆ ಜನತೆ ಜಿಲ್ಲಾ ಕೇಂದ್ರವನ್ನು ತಲುಪಿ ತಮ್ಮ ಕೆಲಸ ಮುಗಿಸಿಕೊಂಡು ಸಂಜೆಯೊಳಗೆ ತಮ್ಮ ಊರುಗಳಿಗೆ ಮರಳಲು ಸಾಧ್ಯವಾಗುತ್ತದೆ. ಹೀಗಾಗಿ ಎಲ್ಲಾ ವರ್ಗಗಳ ಜನತೆಗೆ ವಿಜಯನಗರ ಜಿಲ್ಲೆ ಆಗಿರುವುದರಿಂದ ಸಂತಸವಾಗಿದೆ, ಕೂಡ್ಲಿಗಿ ಸೇರ್ಪಡೆಗೆ ತಾಲ್ಲೂಕಿನಲ್ಲಿ ಪಕ್ಷಭೇಧ ಮರೆತು ಹೋರಾಟವಾಗಿದ್ದು ಇದಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ, ಸಚಿವ ಆನಂದ್ ಸಿಂಗ್, ಕೂಡ್ಲಿಗಿ ಶಾಸಕ ಎನ್.ವೈ. ಗೋಪಾಲಕೃಷ್ಣ ಅವರು (7ನೇ ಪುಟಕ್ಕೆ)

# ಡಾ. ಟಿ.ಬಿ. ಸೊಲಬಕ್ಕನವರ ಸಾಂಸ್ಕೃತಿಕ ರಾಯಭಾರಿಯಾಗಿದ್ದರು : ಬಾಮ ಕಂಬನಿ



ದಾವಣಗೆರೆ, ನ.27- ಕಲಾವಿದರಾಗಿ, ಸಾಂಸ್ಕೃತಿಕ ರಾಯಭಾರಿಯಾಗಿ, ಜನಪರ ಮತ್ತು ಜೀವಪರ ಕಾಳಜಿಯ ಹೋರಾಟಗಾರರಾಗಿದ್ದ ಬಯಲಾಟ ಅಕಾಡೆಮಿ ಅಧ್ಯಕ್ಷ, ನಿವೃತ್ತ ಕಲಾ ಪ್ರಾಧ್ಯಾಪಕ ಡಾ. ಟಿ.ಬಿ. ಸೊಲಬಕ್ಕನವರ ನಿಧನ ರಾಷ್ಟ್ರಕ್ಕೆ ತುಂಬಲಾಗದ ನಷ್ಟವಾಗಿದೆ ಎಂದು ಹಿರಿಯ ಸಾಹಿತಿ ಮತ್ತು ಸೊಲಬಕ್ಕನವರ ಒಡನಾಡಿ ಬಾ.ಮ. ಬಸವರಾಜಯ್ಯ ಹೇಳಿದರು.

ನಗರದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಮೊನ್ನೆ ಏರ್ಪಡಿಸಿದ್ದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸೊಲಬಕ್ಕನವರದು ಅಪರೂಪದ ವ್ಯಕ್ತಿತ್ವ. ಜನಹಿತದ ಕಾರ್ಯಗಳಿಗೆ ಸದಾ ತುಡಿಯುತ್ತಿದ್ದ ಅವರ ಮನಸ್ಸು, ಅನ್ಯಾಯ-ಅಕ್ರಮಗಳನ್ನು ಎಂದಿಗೂ ಸಹಿಸುತ್ತಿರಲಿಲ್ಲ. ನೇರ ನಿಷ್ಠೂರವಾದಿ. ಆದರೆ ಮನಸ್ಸು ಮೃದು. ಯಾವುದೇ ಸಮಸ್ಯೆಗೆ ಸ್ಪಂದಿಸಿ, ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದರು ಎಂದು ಸ್ಮರಿಸಿದರು.

ಕಲೆ, ಕಲಾವಿದರು, ಪರಿಸರದ ಜೊತೆ ಬಯಲಾಟ ಅವರ ಆಸಕ್ತಿಯ ಕ್ಷೇತ್ರ. ಅದನ್ನು ಅವರು ಉಸಿರಾಗಿಸಿಕೊಂಡಿದ್ದರು ಎಂದು ತಿಳಿಸಿದರು.

ನಿವೃತ್ತ ಪ್ರಾಧ್ಯಾಪಕ ಪ್ರೊ. ಎ. ಮಹಾಲಿಂಗಪ್ಪ ಮಾತನಾಡಿ, ನಡೆ-ನುಡಿ ಒಂದಾಗಿಸಿಕೊಂಡು ವೃತ್ತಿ ನಿರ್ವಹಿಸಿದ ಸೊಲಬಕ್ಕನವರ ಆತ್ಮೀಯ ಭಾವದ ಸ್ನೇಹಜೀವಿ. ಮೇಲು-ಕೀಳುಗಳ ಭೇದಭಾವ ತೋರದೆ ಎಲ್ಲರನ್ನೂ ಒಪ್ಪಿಕೊಳ್ಳುತ್ತಿದ್ದರು ಎಂದರು.

ನಿವೃತ್ತ ಪ್ರಾಧ್ಯಾಪಕ ಬಿ.ಆರ್. ಕೊರ್ತಿ ಮಾತನಾಡಿ, ಡಾ. ಸೊಲಬಕ್ಕನವರ ಜೊತೆ ಸಹಪಾಠಿಯಾಗಿ, ಸ್ನೇಹಿತನಾಗಿ ಕೆಲಸ ಮಾಡಿದ್ದೇ ವಿಶೇಷ ಅನುಭವ. ಅವರೊಬ್ಬ ಸ್ಫೂರ್ತಿಯ ಚೇತನವಾಗಿದ್ದರು ಎಂದು ನುಡಿದರು.

ನಾಟಕ ಅಕಾಡೆಮಿ ಸದಸ್ಯ ರವೀಂದ್ರ ಅರಳಗುಪ್ಪಿ, ಯುವ ಪ್ರತಿಭೆಗಳು ಕ್ರಿಯಾಶೀಲರಾಗಿ ಕೆಲಸ ಮಾಡುವ ಯಾರೇ ಆಗಿದ್ದರೂ ಹುಡುಕಿ ಪ್ರೋತ್ಸಾಹಿಸುತ್ತಿದ್ದರು. ಸದಾ ಅವರ ಬೆನ್ನೆಲುಬಾಗಿ ನಿಂತು ಸಹಾಯ ಹಸ್ತ ಚಾಚುತ್ತಿದ್ದರು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ದಾವಿವಿ ಕುಲಸಚಿವ ಪ್ರೊ. ಬಸವರಾಜ ಬಣಕಾರ ಮಾತನಾಡಿ, ಸೊಲಬಕ್ಕನವರ ಕೇವಲ ವ್ಯಕ್ತಿಯಾಗಿರದೆ, ಬಹು ದೊಡ್ಡ ಶಕ್ತಿಯಾಗಿದ್ದರು. ಅವರು ನಡೆ, ನುಡಿ, ವ್ಯಕ್ತಿತ್ವ ಎಲ್ಲರಿಗೂ ಮಾದರಿಯಾಗಿದೆ. ಅವರಿಗೆ ಗೌರವ ನೀಡುವ ಕೆಲಸವನ್ನು ವಿಶ್ವವಿದ್ಯಾನಿಲಯ ಮಾಡಲಿದೆ ಎಂದರು.

ಪ್ರಾಚಾರ್ಯ ಡಾ. ರವೀಂದ್ರ ಕಮ್ಮಾರ ಸ್ವಾಗತಿಸಿ, ಅವರ ಜೊತೆಗಿನ ಒಡನಾಟ ಸ್ಮರಿಸಿದರು.

# ಹುತಾತ್ಮರಿಗೆ ಹಿಂಜಾವೇ ಗೌರವಪೂರ್ವಕ ನಮನ



**ಮುಂಬೈ ದಾಳಿಗೆ ಇಂದು 12 ವರ್ಷ**

ದಾವಣಗೆರೆ, ನ.27- ಮುಂಬೈ ದಾಳಿಗೆ ಇಂದಿಗೆ 12 ವರ್ಷವಾಗಿದ್ದು, ಭಯೋತ್ಪಾದಕ ದಾಳಿಯಲ್ಲಿ ಹುತಾತ್ಮರಾದ ಭಾರತೀಯ ವೀರ ಯೋಧರಿಗೆ ಹಿಂದೂ ಜಾಗರಣ ವೇದಿಕೆ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಗರದ ಜಯದೇವ ವೃತ್ತದಲ್ಲಿ ನಿನ್ನೆ ಸಂಜೆ ಜಮಾಯಿಸಿದ್ದ ವೇದಿಕೆಯ ಪದಾಧಿಕಾರಿಗಳು, ಮುಂಬೈ ದಾಳಿಯಲ್ಲಿ ಹುತಾತ್ಮರಾದ ಯೋಧರು, ಪೊಲೀಸರು, ಸಾರ್ವಜನಿಕರ ತ್ಯಾಗ-ಬಲಿದಾನಗಳನ್ನು ನೆನೆಯುತ್ತಾ, ಗೌರವ ಪೂರ್ವಕ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ವೇದಿಕೆಯ ವಿಭಾಗದ ಪ್ರಮುಖ್ ಸತೀಶ ಪೂಜಾರಿ, ಗಣೇಶ, ಮಂಜುನಾಥ, ಮಂಜಾನಾಯ್ಕ್, ಯೋಗೇಶ, ಪ್ರಕಾಶ, ಮೃತ್ಯುಂಜಯ, ತಿಮ್ಮೇಶ್, ಸಂತೋಷ್, ಕಲ್ಲೇಶ, ಕಿಟ್ಟಿ, ನಾಗರಾಜ್, ಚೇತನ್ ಸೇರಿದಂತೆ ಇತರರಿದ್ದರು.

## ನಗರದಲ್ಲಿಂದು ವಿದ್ಯುತ್ ಇಲ್ಲ

ಮಂಡಿಪೇಟೆ, ಅಶೋಕ ಟಾಕೀಸ್, ಬಿನ್ನಿ ಕಂಪನಿ ರಸ್ತೆ, ಮಹಾವೀರ ರಸ್ತೆ, ಕೆ.ಆರ್. ರಸ್ತೆ, ಗಡಿಯಾರ ಕಂಬ, ಬಿಟಿ ಗಲ್ಲಿ, ಬೆಳ್ಳೂಡಿ ಗಲ್ಲಿ, ಇಸ್ಲಾಂ ಪೇಟೆ, ಹೆರಿಗೆ ಆಸ್ಪತ್ರೆ, ಪೋಸ್ಟ್ ಆಫೀಸ್, ರೈಲ್ವೇ ಸ್ಟೇಷನ್, ವಿಜಯಲಕ್ಷ್ಮೀ ರಸ್ತೆ ಸ್ವಲ್ಪಭಾಗ, ವಸಂತ ಟಾಕೀಸ್ ಸುತ್ತಮುತ್ತ ಬೆಳಿಗ್ಗೆ 10 ರಿಂದ 4 ರವರೆಗೆ ವಿದ್ಯುತ್ ಇರುವುದಿಲ್ಲ.

## ವೀರೇಶ್ವರ ಪುಣ್ಯಾಶ್ರಮದಲ್ಲಿ ಸಭೆ


ದಾವಣಗೆರೆ, ನ.27- ಬಾಡಾ ಕ್ರಾಸ್ ಬಳಿ ಇರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ನಾಡಿದ್ದು ದಿನಾಂಕ 29 ರಂದು ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ ಎಂದು ಆಶ್ರಮದ ಪ್ರಧಾನ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿಸ್ವಾಮಿ ತಿಳಿಸಿದ್ದಾರೆ.

ಆವರಗೊಳ್ಳದ ಶ್ರೀ ಓಂಕಾರ ಸ್ವಾಮೀಜಿ ಸಭೆಯ ನೇತೃತ್ವ ವಹಿಸುವರು. 2021ರ ಫೆಬ್ರವರಿ 25 ರಿಂದ ಮಾರ್ಚ್ 3 ರವರೆಗೆ ನಡೆಯಲಿರುವ ಸಂಗೀತ ಸಪ್ತಾಹ ಕಾರ್ಯಕ್ರಮದ ಬಗ್ಗೆ ಪೂರ್ವಭಾವಿ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಹೇಳಿದ್ದಾರೆ.

## ನೀವೇನಂತೀರಿ ??

ಶರವೇಗದ ಬಿರುಗಾಳಿಯಾರ್ಭಟಕೆ
ಓಲಾಡುತ ನೆಲ ಕಚ್ಚಿವೆ ಮರಮಂಡಿ !
ರಣಚಂಡಿಯಾದ ಚಂಡ ಮಾರುತಕೆ
ನೆಲಸಮವಾಗಿದೆ ಬದುಕಿನಾ ಬಂಡಿ ?
'ಮುನಿದರೆ ನಿಸರ್ಗ; ಕನಸದೋ ಸ್ವರ್ಗ'
ಅಂತಾನೆ ಕೊಂಕುತಿಮ್ಮ!?

-ಮಹಾಂತೇಶ್ ನಿಟ್ಟೂರ್, ದಾವಣಗೆರೆ.

## 'ಹರೀಶ್ ನ್ಯೂರೋ ಕ್ಲಿನಿಕ್' (Brain & Nerve Clinic)

94802 25635

**ನ್ಯೂರೋಪತಿ - ಪಾದಗಳ ಉರಿ (ಅಂಗಾಲು ಜುಂ.ಜುಂ. ಅನುಭವ) ಸಂಕ್ಷಿಪ್ತ ಮಾಹಿತಿ**

ಕೆಲವರಲ್ಲಿ ಕಾಲು, ಕೈಗಳಲ್ಲಿ ಸೂಜಿಯಿಂದ ಚುಚ್ಚಿದಂತಹ ಅಥವಾ ಬೆಂಕಿಯಿಂದ ಸುಡುವಂತಹ, ಮರಗಟ್ಟುವುದು, ಘನೀಕರಿಸಿದಂತಹ ಅನುಭವ ಸಾಮಾನ್ಯ. ನರ ರೋಗ ತಜ್ಞರಾದ ಡಾ. ಹರೀಶ್ ಎ.ಹೆಚ್. ರವರು ಸಂಕ್ಷಿಪ್ತ ಮಾಹಿತಿ ನೀಡಿದ್ದಾರೆ.

**ಕಾರಣಗಳು :** * ಮಧುಮೇಹ (DSPN-Diabetic Sensory Poly neuro Pathy)
* ಆಹಾರದಲ್ಲಿ Vitamin B. Complex (B1, B2, B3, B5, B6, B9 B12) ಕೊರತೆ ಸಸ್ಯಹಾರಿಗಳಲ್ಲಿ ಸಾಮಾನ್ಯ.
* Toxic ನ್ಯೂರೋಪತಿ (ಆಲ್ಕೋಹಾಲ್ ಸೇವನೆ) ಕೆಲವು ಔಷಧಿಗಳಿಂದ (ಕ್ಯಾನ್ಸರ್ ಕೀಮೋ ಥೆರಪಿ, ಆ್ಯಂಟಿಬಯಾಟಿಕ್ಸ್ (ಬಯಾ)
* Vasculitic ನ್ಯೂರೋಪತಿ, SLE/RA ಇತರೆ CID ಕಾಯಿಲೆಗಳಲ್ಲಿ
* ಸಾಮಾನ್ಯವಾಗಿ ಅಂಗಾಲುಗಳಿಂದ ಶುರುವಾದ ತೊಂದರೆ ರೋಗಿಯ ಮೊಣಕಾಲುಗಳವರೆಗೆ ಬರುವುದಕ್ಕಿಂತ ಮುನ್ನ ಕೈಗಳಲ್ಲಿ ಅದೇ ರೀತಿಯ ಲಕ್ಷಣಗಳು ಕಂಡು ಬರುತ್ತದೆ. (Length Dependent Neuropathy)
* Entrapment Neuropathy - CTS - CARPAL TUNNEL Syndrome ಥೈರಾಯ್ಡ್ ಸಮಸ್ಯೆ ಇರುವವರಲ್ಲಿ ಮುಂಜಾನೆ ಅಥವಾ ಮಧ್ಯರಾತ್ರಿಯ ವೇಳೆ ಕೈಗಳಲ್ಲಿ ನ್ಯೂರೋಪತಿ ಲಕ್ಷಣಗಳು ಕಂಡು ಬರುತ್ತವೆ.

**ನ್ಯೂರೋಪತಿ ವಿಧಗಳು**
* SFN - Small Fibre Neuropathy
* LFN - Large Fibre Neuropathy
* Autonomic Neuropathy

ಯಾವ ರೀತಿಯ ನರಗಳ ತೊಂದರೆ (Axonal, Demyelinating) ಎಂದು ನಿಖರವಾಗಿ ಪತ್ತೆ ಹಚ್ಚಿ ಸೂಕ್ತವಾದ ಚಿಕಿತ್ಸೆ ನಿರ್ಧರಿಸಲಾಗುತ್ತದೆ.

**– ಡಾ।। ಹರೀಶ್ A.H.**
**MBBS., M.D. (Medicine), D.M. (Neuro), (Mumbai)**
**ಮೆದುಳು, ಬೆನ್ನುಹುರಿ ಮತ್ತು ನರರೋಗ ತಜ್ಞರು, ದಾವಣಗೆರೆ.**
**ವಾರಕ್ಕೆ 2 ಬಾರಿ**
ಭಾನುವಾರ (ಬೆಳಗ್ಗೆ 8 ರಿಂದ ಮಧ್ಯಾಹ್ನ 1ರವರೆಗೆ) ಮತ್ತು ಮಂಗಳವಾರ (ಬೆಳಗ್ಗೆ 10 ರಿಂದ ಸಂಜೆ 6ರವರೆಗೆ ಲಭ್ಯವಿರುತ್ತಾರೆ)
**ಫೋ. : 94802 25635**
ವಿಳಾಸ : ವಿಶ್ವಾಸ್ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್, 1ನೇ ಮುಖ್ಯ ರಸ್ತೆ, ಲಕ್ಷ್ಮೀ ಫ್ಲೋರ್ ಮಿಲ್ ಹತ್ತಿರ, ನಿಜಲಿಂಗಪ್ಪ ಲೇ-ಔಟ್, ದಾವಣಗೆರೆ.

**ಮೆದುಳು ಮತ್ತು ನರ ಸಂಬಂಧ ರೋಗ ಲಕ್ಷಣಗಳು :**
* ತಲೆನೋವು-ಮೈಗ್ರೇನ್ *ಟೆನ್ಷನ್ * ತಲೆನೋವು
* ತಲೆಸುತ್ತು, ಕತ್ತು ಮತ್ತು ಸೊಂಟದ ನರ ಸೆಳೆತ * ಸ್ಟ್ರೋಕ್ (ಲಕ್ವ-ಪಾರ್ಶ್ವವಾಯು) * ಫಿಟ್ಸ್ (ಎಪಿಲೆಪ್ಸಿ- ಮೂರ್ಛೆ ರೋಗ) * ಪ್ರಜ್ಞೆ ತಪ್ಪುವುದು
* ದೃಷ್ಟಿಯಲ್ಲಿ ತೊಂದರೆ * ಮಾತು ತೊದಲುವುದು
* ನಿದ್ರಾಹೀನತೆ *ಕೈಕಾಲು ನಡುಕ/ಸ್ವಾಧೀನ ಇಲ್ಲದಿರುವುದು
* ಪಾರ್ಕಿನ್‌ಸನ್ ಕಾಯಿಲೆ ಮತ್ತು ಇತರೆ ಮೂಮೆಂಟ್ ಡಿಸಾರ್ಡರ್ * ಸ್ನಾಯು ಮತ್ತು ನರದೌರ್ಬಲ್ಯ
* ಡಿಮೆಂಶಿಯಾ (ಮರೆವಿನ ಕಾಯಿಲೆ) ಮೆದುಳು ಜ್ವರ.
* ನ್ಯೂರೋಪಥಿ, ಮಯೋಪಥಿ
Multiple Selerosis, NMOSD


# ಜಗಳೂರು : ಕಾರ್ಮಿಕರ ಪ್ರತಿಭಟನೆ




ಜಗಳೂರು, ನ.27- ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಖಿಲ ಭಾರತ ಕಾರ್ಮಿಕ ಮುಷ್ಕರಕ್ಕೆ ಬೆಂಬಲಿಸಿ ಜೆಸಿಟಿಯು ನೇತೃತ್ವದಲ್ಲಿ ಸಂಘಟನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿ ತಹಶೀಲ್ದಾರ್ ಡಾ. ನಾಗವೇಣಿ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಪಟ್ಟಣದ ತಾಲ್ಲೂಕು ಕಛೇರಿ ಮುಂಭಾಗ ಜಮಾಯಿಸಿದ ಎಐಟಿಯುಸಿ, ಸಿಐಟಿಯು, ಎಐಯುಟಿಯುಸಿ ಹಾಗೂ ಎಸ್‌ಎಫ್‌ಐ, ಎಐಎಸ್‌ಎಫ್ ನರೇಗಾ ಸಂಘಟನೆ ಮುಖಂಡರುಗಳು ಸರ್ಕಾರದ ವಿರುದ್ಧ ಘೋಷಣೆ ಹಾಕಿದರು.

ಈ ಸಂದರ್ಭದಲ್ಲಿ ಜೆಸಿಟಿಯು ಸಂಘಟನೆಗಳ ಮುಖಂಡರಾದ ಆರ್. ಓಬಳೇಶ್, ಮಹಮ್ಮದ್ ಭಾಷಾ, ವೀರಣ್ಣ, ಮಾದಿಹಳ್ಳಿ ಕೆ. ಮಂಜಪ್ಪ, ಮಧು ತೊಗಲೇರಿ, ಅನಂತರಾಜ್, ಅಂಜಿನಪ್ಪ, ನೀಲಾ, ಶಿಲ್ಪಾ ಸತೀಶ್, ಎಂ. ರಾಜಪ್ಪ, ಸತ್ಯಮೂರ್ತಿ, ಸತೀಶ್, ಮಹಾಂತೇಶ್, ನರೇಗಾ ಸಂಘಟನೆಯ ಸುಧಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ನಿಸರ್ಗದ ಮಡಿಲು

ಸಪ್ತ ಋಷಿಗಳ ಸೃಷ್ಟಿ
ಮಹಾದೇವನ ಕನಸು
ಹರಿ ಬ್ರಹ್ಮನ ಆಶೀರ್ವಾದ
ಈ ಪರಿಸರದ ಮಡಿಲು..

ಸದಾ ಪಾರದರ್ಶಕ ಗಾಳಿ
ನೀಡುವ ಗಿಡ ಮರ
ಸೂರ್ಯ ಏನ ಕೇಳದೆ
ಸದಾ ನೀಡುವ
ಕಾಮಧೇನುಗಳಲ್ಲವೇ!?

ಜಾತಿ ಮೇಲು ಕೀಳು
ಮಲಿನವಿಲ್ಲದೆ ನೀಡುವ
ನಿತ್ಯ ಶುಭ್ರ ಸಸ್ಯವರ್ಣದ
ಪರಿಸರ ದೇವರುಗಳೇ !

ದೇವನ ಸೃಷ್ಟಿ ತಂದೆತಾಯಿ
ಕಾರಣರಾದರು ಒಡಲಿಗೆ
ಹಾಕಿಕೊಂಡು ಬೆಳೆಸುವ
ನಿಸರ್ಗ ದೇವರಿಗೆ ನಮೋ.

ಅನ್ನ ಆಹಾರದಲ್ಲಿ ಶಕ್ತಿ
ಇಟ್ಟು ಕಾಪಾಡಿದ ನಿನಗೆ
ಕೊಡಲಿ ಏಟು ನೀಡಿದ
ನಾವು ಅಪಕೃತರಲ್ಲವೆ ?

- ರೇವಣ್ಣ ಬಳ್ಳಾರಿ,
ದಾವಣಗೆರೆ

# ಭಾನುವಳ್ಳಿಯಲ್ಲಿ ಸಂವಿಧಾನ ದಿನಾಚರಣೆ




ಮಲೇಬೆನ್ನೂರು, ನ.27- ಭಾನುವಳ್ಳಿ ಗ್ರಾಮದಲ್ಲಿ 'ಸಂವಿಧಾನ ದಿನ'ವನ್ನು ಹರಿಹರ ತಾಲ್ಲೂಕು ಬಿಜೆಪಿ ಎಸ್ಸಿ ಮೋರ್ಚಾ ವತಿಯಿಂದ ಆಚರಿಸಲಾಯಿತು.

ಮಾಜಿ ಶಾಸಕ ಬಿ.ಪಿ.ಹರೀಶ್ ಮಾತನಾಡಿ, ಅಂಬೇಡ್ಕರ್ ಅವರು ನೀಡಿದ ಸಂವಿಧಾನ ಪ್ರಪಂಚಕ್ಕೆ ಮಾದರಿಯಾಗಿದೆ. ಸಂವಿಧಾನದಿಂದಾಗಿ ದೇಶದಲ್ಲಿ ಸಮಾನತೆ, ಸಾಮರಸ್ಯದಿಂದ ನಾವೆಲ್ಲರೂ ಜೀವನ ನಡೆಸುತ್ತಿದ್ದೇವೆ. ಪ್ರತಿಯೊಬ್ಬರೂ ಸಂವಿಧಾನವನ್ನು ಗೌರವಿಸುವ ಕೆಲಸ ಮಾಡಬೇಕೆಂದು ಹರೀಶ್ ಮನವಿ ಮಾಡಿದರು.

ಬಿಜೆಪಿ ಗ್ರಾಮಾಂತರ ಘಟಕದ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್, ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಹುಗ್ಗಿ ಮಹಾಂತೇಶ್, ಆದಾಪುರದ ವೀರೇಶ್, ಎಸ್ಸಿ ಮೋರ್ಚಾ ಅಧ್ಯಕ್ಷ ನಾಗರಾಜ್, ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ಮತ್ತು ಗ್ರಾಮದ ಮಂಜಪ್ಪ ಬಾರ್ಕಿ, ಎ. ಕೆ.ಮಂಜಪ್ಪ ಮತ್ತಿತರರು ಭಾಗವಹಿಸಿದ್ದರು.

## ಕ್ರೀಡಾಪಟು ಮಂಜಪ್ಪಗೆ ರಾಜ್ಯೋತ್ಸವ ಪ್ರಶಸ್ತಿ



ದಾವಣಗೆರೆ, ನ.27 - ಅಂತರ ರಾಷ್ಟ್ರೀಯ ಪವರ್ ಲಿಫ್ಟಿಂಗ್ ಕ್ರೀಡಾಪಟು ನಗರ ಪಾಲಿಕೆ ವಾಹನ ಚಾಲಕ ಮಂಜಪ್ಪ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಜಿಲ್ಲಾಡಳಿತ ಗೌರವಿಸಿದೆ.

# ಹರಿಹರದಲ್ಲಿ ಸಕಾಲ ಸಪ್ತಾಹ ಜಾಥಾಗೆ ಚಾಲನೆ




ಹರಿಹರ, ನ.27- ಸಕಾಲ ಸಪ್ತಾಹ ಜಾಥಾಗೆ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಸಮಸ್ತ ನಾಗರಿಕರಿಗೆ ಸರ್ಕಾರದ ಯಾವುದೇ ಸೌಲಭ್ಯಗಳು 7 ದಿನಗಳ ಒಳಗೆ ತ್ವರಿತವಾಗಿ ವಿಲೇವಾರಿ ಮಾಡುವ ಉದ್ದೇಶದಿಂದ ಸರ್ಕಾರ ಸಕಾಲ ಸಪ್ತಾಹವನ್ನು ಮಾಡುತ್ತಿದ್ದು, ಹೆಲ್ಪ್ ಡೆಸ್ಕ್ ಸಹ ತೆರೆಯುವ ಮೂಲಕ ನಾಗರಿಕರಿಗೆ ಉತ್ತಮವಾದ ಸೇವೆಯನ್ನು ಒದಗಿಸಲಾಗುತ್ತಿದೆ. ನಗರಸಭೆ, ಕಂದಾಯ, ಪೊಲೀಸ್, ತಾಪಂ ಇಲಾಖೆಗಳು ಸೇರಿದಂತೆ ತಾಲ್ಲೂಕಿನ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಹ ಸಕಾಲ ಸಪ್ತಾಹ ಜಾಥಾವನ್ನು ಮಾಡುವ ಮೂಲಕ ನಾಗರಿಕರಿಗೆ ಅರಿವು ಮೂಡಿಸುವ ಕಾರ್ಯ ಮಾಡಲಾಗುತ್ತದೆ ಎಂದರು.

ನಗರಸಭೆ ಪೌರಾಯುಕ್ತ ಉದಯಕುಮಾರ್, ಆರೋಗ್ಯ ಇಲಾಖೆ ಉಮ್ಮಣ್ಣ, ಪ್ರಕಾಶ್, ಉಮೇಶ್, ಆನಂದ್, ಹೇಮಂತ್, ಕಿರಣ್, ಸಂತೋಷ್, ಭೀಮೇಶ್, ಭಾರತಿ, ಸಂಗೀತಾ, ಕರಿಬಸಮ್ಮ, ಪುಷ್ಪ, ಎಲಿಜೆಬತ್ ರಾಣಿ, ನೇತ್ರಾವತಿ, ನರಸಮ್ಮ, ಲಕ್ಷ್ಮೀ ವೀಣಾ, ಸುವರ್ಣ, ಸೌಮ್ಯ, ಮಂಜುಳಾ ಇನ್ನಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ರಾಷ್ಟ್ರಮಟ್ಟದ ಗಣರಾಜ್ಯೋತ್ಸವ ಪಥ ಸಂಚಲನ ಶಿಬಿರಕ್ಕೆ ಎ.ಡಿ.ಬಿ. ಕಾಲೇಜಿನ ಸಂಗೀತಾ ಆಯ್ಕೆ





ಹರಪನಹಳ್ಳಿ, ನ.27- ಪಟ್ಟಣದ ಅಂಬ್ಲಿ ದೊಡ್ಡ ಭರ್ಮಪ್ಪ ಪ್ರಥಮ ದರ್ಜೆ ಮಹಾವಿದ್ಯಾಲಯದ ವಿದ್ಯಾರ್ಥಿನಿ ಎಂ.ಬಿ.ಸಂಗೀತಾ ರಾಷ್ಟ್ರ ಮಟ್ಟದ ಗಣರಾಜ್ಯೋತ್ಸವ ಪಥ ಸಂಚಲನ ಶಿಬಿರಕ್ಕೆ ಆಯ್ಕೆಯಾಗುವ ಮೂಲಕ ಕಾಲೇಜಿಗೆ ಹಾಗೂ ತಾಲ್ಲೂಕಿಗೆ ಕೀರ್ತಿ ತಂದಿದ್ದಾಳೆ.

ತಮಿಳುನಾಡು ರಾಜ್ಯದ ಕೊಯಮತ್ತೂರಿನ ತಿರುಚ್ಚಿಪರಹಳ್ಳಿಯ ನ್ಯಾಷನಲ್ ಕಾಲೇಜು ಆವರಣದಲ್ಲಿ ಇಂದಿನಿಂದ ಬರುವ ಡಿಸೆಂಬರ್ 7ರ ವರೆಗೂ ನಡೆಯುವ ಸೌತ್‌ಜೋನ್ ವಲಯ ಮಟ್ಟದ ಶಿಬಿರಕ್ಕೆ ಕರ್ನಾಟಕ ರಾಜ್ಯದ ಎನ್‌ಎಸ್‌ಎಸ್ ಶಿಬಿರಾರ್ಥಿಯಾಗಿ ಪ್ರತಿನಿಧಿಸುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿನಿ ಸಂಗೀತಾಳಿಗೆ ಮಹಾವಿದ್ಯಾಲಯದ ಎನ್‌ಎಸ್‌ಎಸ್ ಘಟಕದ ವತಿಯಿಂದ ಆಯ್ಕೆ ಪತ್ರವನ್ನು ನೀಡಲಾಯಿತು.

ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಅಕ್ಕಿ ಶಿವಕುಮಾರ್, ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಶಿವಕುಮಾರ್ ಬಾಗಳಿ, ಕಾಲೇಜಿನ ಪ್ರಾಚಾರ್ಯ ಡಾ. ಮಲ್ಲಿಕಾರ್ಜುನ್ ಅವರುಗಳು ಮಾತನಾಡಿದರು.

ಎನ್‌ಎಸ್‌ಎಸ್ ಅಧಿಕಾರಿ ಎಸ್.ಆನಂದ್ ಹಿರಿಯ ಪ್ರಾಧ್ಯಾಪಕರುಗಳಾದ ಜಿ.ಬಿ.ನಾಗನಗೌಡ, ಡಿ.ತಿಪ್ಪೇಸ್ವಾಮಿ, ಕೆ.ಮಂಜಣ್ಣ, ಜಿ.ಉಮೇಶ್, ಸಿದ್ದಲಿಂಗ ಮೂರ್ತಿ, ಎ.ಎಂ.ರಾಜಶೇಖರಯ್ಯ ಉಪಸ್ಥಿತರಿದ್ದರು.


## ಅಭಿನಂದನೆಗಳು



ಬ್ಯಾಂಕಿನ ಹಿರಿಯ ನಿರ್ದೇಶಕರೂ,
ಅಂಗವಿಕಲರ ಆಶಾಕಿರಣ ಟ್ರಸ್ಟ್‌ನ ಅಧ್ಯಕ್ಷರೂ,
ಪ್ರಾಣಿ ದಯಾ ಸಂಘ - ಗೋ ಶಾಲೆಯ
ಗೌರವ ಅಧ್ಯಕ್ಷರೂ, ಕಲಾ ಪ್ರಕಾಶ ವೃಂದ
ಸಹಕಾರ ಸಮುದಾಯ ಭವನದ ಉಪಾಧ್ಯಕ್ಷರೂ,
ಜೈನ್ ಸಮಾಜದ ಅಧ್ಯಕ್ಷರೂ ಆದ

**ಶ್ರೀ ರಮಣ್‌ಲಾಲ್ ಪಿ. ಸಂಘವಿ**

ಇವರ ಸಾಮಾಜಿಕ ಸೇವೆಯನ್ನು ಗುರುತಿಸಿ,
ದಾವಣಗೆರೆ ಜಿಲ್ಲಾಡಳಿತದಿಂದ ಆಚರಿಸಲ್ಪಡುವ
ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ 'ಕರ್ನಾಟಕ ರಾಜ್ಯೋತ್ಸವ' ಗೌರವಕ್ಕೆ ಭಾಜನರಾಗಿರುವ ಶ್ರೀಯುತರಿಗೆ ನಮ್ಮೆಲ್ಲರ ಹಾರ್ದಿಕ ಅಭಿನಂದನೆಗಳು.

**ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳು, ಕಾರ್ಯದರ್ಶಿ ಮತ್ತು ಸಿಬ್ಬಂದಿ ವರ್ಗ ಹಾಗೂ ಪಿಗ್ಮಿ ಏಜೆಂಟರುಗಳು**

**ಸಂಚಿತ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ., ದಾವಣಗೆರೆ.**
ಮುರುಘರಾಜೇಂದ್ರ ಕಾಂಪ್ಲೆಕ್ಸ್, ನಿಟುವಳ್ಳಿ ರಸ್ತೆ, ದಾವಣಗೆರೆ. ಫೋ : 275317


# ದೇಶದ ಎಲ್ಲರಿಗೂ ಕೋವಿಡ್ ಲಸಿಕೆ ನೀಡುವುದು ಸುಲಭವಲ್ಲ, ಸವಾಲು

**ಪತ್ರಕರ್ತ ಎಚ್.ಬಿ. ಮಂಜುನಾಥ್**

ದಾವಣಗೆರೆ, ನ.27- 'ಕೋವಿಡ್-19' ನಿರೋಧಕ ಲಸಿಕೆ ಸದ್ಯದಲ್ಲೇ ಬಂದರೂ ಅದನ್ನು ನಮ್ಮ ದೇಶದ ಸುಮಾರು 132 ಕೋಟಿಗೂ ಅಧಿಕ ಜನಸಂಖ್ಯೆಗೆ ನೀಡುವುದೂ ದೊಡ್ಡ ಸವಾಲಾಗಿದ್ದು, ಈ ಕಾರ್ಯದಲ್ಲಿ ನಗರ, ಪಟ್ಟಣ ಮತ್ತು ಗ್ರಾಮಾಂತರ ಸಹಕಾರ ಸಂಸ್ಥಾಪನೆಗಳ ಸಹಕಾರವೂ ಬೇಕಾಗಬಹುದೆಂದು ಹಿರಿಯ ಪತ್ರಕರ್ತ ಎಚ್.ಬಿ. ಮಂಜುನಾಥ್ ಅಭಿಪ್ರಾಯಪಟ್ಟರು.

ಅಖಿಲ ಭಾರತ 67ನೇ ಸಹಕಾರ ಸಪ್ತಾಹದ ಅಂಗವಾಗಿ ಚನ್ನಗಿರಿಯಲ್ಲಿ ಏರ್ಪಾಡಾಗಿದ್ದ ಕಾರ್ಯಕ್ರಮದ ಉಪನ್ಯಾಸಕರಾಗಿ 'ಕೊರೊನೋತ್ತರ, ಸಹಕಾರ ಸಂಸ್ಥೆಗಳ ಜವಾಬ್ದಾರಿ ಮತ್ತು ಪಾತ್ರ' ಎಂಬ ವಿಷಯವಾಗಿ ಅವರು ಮಾತನಾಡಿದರು.

ಕಾಲವನ್ನು 'ಕ್ರಿಸ್ತಪೂರ್ವ', 'ಕ್ರಿಸ್ತೋತ್ತರ' ಅಂದರೆ 'ಕ್ರಿಸ್ತಶಕ' ಎಂದು ವಿಶ್ವಾದ್ಯಂತ ಹೇಳುವುದು ರೂಢಿಯಲ್ಲಿದೆ. ಭಾರತದಲ್ಲಿ 'ಸ್ವಾತಂತ್ರ್ಯ ಪೂರ್ವ' ಮತ್ತು ಸ್ವಾತಂತ್ರ್ಯೋತ್ತರ' ಅಂದರೆ 'ಸ್ವಾತಂತ್ರ್ಯಾ ನಂತರ' ಎಂದೂ ವಿಂಗಡಿಸಿ ಹೇಳುವುದು ಚಾಲ್ತಿಯಲ್ಲಿದೆ, ಆದರೆ ಈಗ ಜಗತ್ತಿನಾದ್ಯಂತ ಸ್ಥಿತಿಯನ್ನು 'ಕೊರೊನಾ ಪೂರ್ವ' ಮತ್ತು 'ಕೊರೊನೋತ್ತರ' ಅಂದರೆ 'ಕೊರೊನಾ ನಂತರ' ಎಂದು ಹೇಳುವಂತಾಗಿರುವುದು ವಿಧಿ ವಿಪರ್ಯಾಸದಂತಾ ಗಿದ್ದರೂ ಪ್ರಸ್ತುತವಾಗಿ ಸಂಘ, ಸಂಸ್ಥೆ, ಸಂಸ್ಥಾಪನೆಗಳೆಲ್ಲಾ ತಮ್ಮ ತಮ್ಮ ವಾರ್ಷಿಕ ಸಾಮಾನ್ಯ ಸಭೆಯನ್ನು 'ವೀಡಿಯೋ ಕಾನ್ಫರೆನ್ಸ್' ವಿಧಾನದಲ್ಲಿ ನಡೆಸುವ ಅನಿವಾರ್ಯತೆ ಉಂಟಾಗಿದೆ.

ಚನ್ನಗಿರಿಯ ಮೌದ್ಗಲ್ ಆಂಜನೇಯ ದೇವಸ್ಥಾನದ ಸಭಾ ಭವನದಲ್ಲಿ ಏರ್ಪಾಡಾಗಿದ್ದ ಕಾರ್ಯಕ್ರಮವನ್ನು ಶಾಸಕ ಹಾಗೂ ಕೆ.ಎಸ್.ಡಿ.ಎಲ್ ಅಧ್ಯಕ್ಷ ಮಾಡಾಳು ವಿರೂಪಾಕ್ಷಪ್ಪ ಉದ್ಘಾಟಿಸಿದರು.

ರಾಜ್ಯ ಸಹಕಾರ ಮಹಾಮಂಡಳ, ಜಿಲ್ಲಾ ಸಹಕಾರ ಯೂನಿಯನ್, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಸಹಕಾರಿ ಹಾಲು ಒಕ್ಕೂಟ, ತುಮ್‌ಕೋಸ್, ಟಿ.ಎ.ಪಿ. ಎಂ.ಎಸ್, ಪಿಕಾರ್ಡ್ ಬ್ಯಾಂಕ್ ಹಾಗೂ ವಿವಿಧ ಸಹಕಾರ ಸಂಘಗಳ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ಏರ್ಪಾಡಾಗಿತ್ತು.

ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷ ಡಾ. ಜೆ.ಆರ್. ಷಣ್ಮುಖಪ್ಪ, ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಎನ್.ಎ. ಮುರುಗೇಶ್, ಉಪಾಧ್ಯಕ್ಷ ಎಚ್. ಬಸವರಾಜಪ್ಪ, ಎಸ್.ಬಿ. ಶಿವಕುಮಾರ್, ಜಿ.ಎನ್. ಸ್ವಾಮಿ, ಕೆ.ಜಿ. ಉಮೇಶ್, ತೇಜಸ್ವಿ ಪಟೇಲ್, ಕೆಂಗಲಹಳ್ಳಿ ಷಣ್ಮುಖಪ್ಪ, ಕೆ.ಎಂ. ಜಗದೀಶ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.


## ದಿ ದಾವಣಗೆರೆ ಅರ್ಬನ್ ಕೋ-ಆಪ್ ಬ್ಯಾಂಕ್ ಲಿ., ದಾವಣಗೆರೆ.

**59ನೇ ವಾರ್ಷಿಕ ಮಹಾಸಭೆಯ ನೋಟೀಸು**

ಬ್ಯಾಂಕಿನ 2019-20ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ : 12.12.2020ನೇ ಶನಿವಾರದಂದು ಬೆಳಿಗ್ಗೆ 11.30 ಘಂಟೆಗೆ ಕರೆಯಲಾಗಿದೆ. ಮಾನ್ಯ ಸದಸ್ಯರು ಬ್ಯಾಂಕಿನಲ್ಲಿ ನೋಂದಾಯಿಸಿರುವ ತಮ್ಮ ಮೊಬೈಲ್ ಸಂಖ್ಯೆಗೆ ಬ್ಯಾಂಕಿನಿಂದ ಕಳುಹಿಸಿರುವ ಲಿಂಕ್‌ನ್ನು ಸಕಾಲಕ್ಕೆ ಬಳಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ವರ್ಚ್ಯುವಲ್ ಸಭೆಯನ್ನು ಯಶಸ್ವಿಗೊಳಿಸಲು ಕೋರಲಾಗಿದೆ.

**ಸಭೆಯ ಕಾರ್ಯಸೂಚಿ :**

ಪ್ರಾರ್ಥನೆ

1) ದಿನಾಂಕ 14.09.2019 ರಂದು ನಡೆದ 58ನೇ ವಾರ್ಷಿಕ ಮಹಾಸಭೆಯ ನಿರ್ಣಯಗಳನ್ನು ಓದಿ ದೃಢೀಕರಿಸುವುದು.
2) ಕಾರ್ಯನಿರ್ವಾಹಕ ಮಂಡಳಿಯವರು ತಯಾರಿಸಿರುವ 59ನೇ ವಾರ್ಷಿಕ ವರದಿಯನ್ನು (2019-20) ಪರಿಶೀಲಿಸುವುದು.
3) ದಿನಾಂಕ : 31.03.2020ಕ್ಕೆ ಅಂತ್ಯವಾಗುವ ವರ್ಷದ ಲಾಭ-ನಷ್ಟ ಮತ್ತು ಅಢಾವೆ ಪತ್ರಿಕೆ ಪರಿಶೀಲನೆ ಮತ್ತು 2019-20ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಗೆ ಕಾರ್ಯನಿರ್ವಾಹಕ ಮಂಡಳಿಯು ತಯಾರಿಸಿದ ಅನುಪಾಲನಾ ವರದಿಯ ಪರಿಗಣನೆ.
4) 2019-20ನೇ ಸಾಲಿನ ಆಯವ್ಯಯದ ಅಂದಾಜಿಗಿಂತ ಹೆಚ್ಚುವರಿ ಆದ ಖರ್ಚುಗಳನ್ನು ಒಪ್ಪುವುದು ಮತ್ತು 2020-21ನೇ ಸಾಲಿಗೆ ಆಯವ್ಯಯ ಮಂಜೂರು ಮಾಡುವುದು.
5) 2019-20ನೇ ಸಾಲಿನ ಲಾಭ ವಿಲೇವಾರಿ ಮಾಡುವುದು.
6) ನಿರ್ದೇಶಕ ಮಂಡಳಿಯು 2020-21ನೇ ಸಾಲಿಗೆ ರೂಪಿಸಿದ ಕಾರ್ಯ ಚಟುವಟಿಕೆಗಳನ್ನು ಅನುಮೋದಿಸುವುದು.
7) 2020-21ನೇ ಸಾಲಿಗೆ ಬ್ಯಾಂಕಿನ ಶಾಸನ ಬದ್ಧ ಲೆಕ್ಕ ಪರಿಶೋಧಕರ ನೇಮಕಾತಿ ಅನುಮೋದನೆ.
8) 2020-21ನೇ ಸಾಲಿಗೆ ಬಾಹ್ಯ ಮೂಲಗಳಿಂದ ಪಡೆಯಬಹುದಾದ ಸಾಲಗಳ ಗರಿಷ್ಠ ಮಿತಿಯನ್ನು ನಿಗದಿಪಡಿಸುವುದು.
9) ಬ್ಯಾಂಕಿನ ಉಪನಿಯಮಗಳ ತಿದ್ದುಪಡಿಯನ್ನು ಅನುಮೋದಿಸುವುದು.
10) ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.

ದಿನಾಂಕ : 25.11.2020

ಕಾರ್ಯನಿರ್ವಾಹಕ ಮಂಡಳಿ ಪರವಾಗಿ
(ಡಿ.ವಿ. ಆರಾಧ್ಯಮಠ್), ಪ್ರಧಾನ ವ್ಯವಸ್ಥಾಪಕರು

**ಸೂಚನೆ :** ಪ್ರಕಟಿತ ಆಸ್ತಿ-ಜವಾಬ್ದಾರಿ ತಃಖ್ತೆ ಅಥವಾ ಅದಕ್ಕೆ ಸಂಬಂಧಪಟ್ಟ ತಃಖ್ತೆಗಳ ಬಗ್ಗೆ ಅಥವಾ ಇತರೆ ಯಾವುದೇ ವಿಷಯದ ಬಗ್ಗೆ ಸುಸ್ತಿದಾರರಲ್ಲದ ಸದಸ್ಯರು ಸ್ಪಷ್ಟೀಕರಣ ಬಯಸಿದಲ್ಲಿ ಸಭೆಯು ನಡೆಯುವುದಕ್ಕೆ 3 ದಿವಸ ಮುಂಚಿತವಾಗಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು. ಅಧ್ಯಕ್ಷರ ಅನುಮತಿ ಮೇರೆಗೆ ಬಂದ ವಿಷಯಗಳನ್ನು ದೃಶ್ಯಮಾಧ್ಯಮದ ಸಭೆಯಲ್ಲಿ ಚರ್ಚಿಸಬಹುದಾಗಿದೆ. ನಂತರ ಬಂದ ವಿಷಯವನ್ನು ಪ್ರಸ್ತಾಪಿಸಲು ಅವಕಾಶವಿರುವುದಿಲ್ಲ.



ಕರ್ನಾಟಕ ಸರ್ಕಾರ

## ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ದಾವಣಗೆರೆ.

E-Mail: eezpedve@yahoo.com Ph: 08192-250156

ಸಂ:ಕಾಪಾಇಂ/ಪಂರಾಇಂ/ವಿ/ದಾ/ಕಿ.ಇಂ/ಟೆಂಡರ್/2020–21/1992 ದಿ:26–11–2020

**("ಇ–ಪ್ರೊಕ್ಯೂರ್‌ಮೆಂಟ್" ಮೂಲಕ)**

ಈ ವಿಭಾಗ ವ್ಯಾಪ್ತಿಯ ದಾವಣಗೆರೆ ಜಿಲ್ಲೆ, ದಾವಣಗೆರೆ ಜಿಲ್ಲೆಯ 2018–19 ಮತ್ತು 2019–20ನೇ ಸಾಲಿನ ಚನ್ನಗಿರಿ ತಾಲ್ಲೂಕಿನ ಪ್ರಧಾನಮಂತ್ರಿ ಆದರ್ಶ ಗ್ರಾಮ ಯೋಜನೆ, 2016–17ನೇ ಸಾಲಿನ ಹರಿಹರ ತಾಲ್ಲೂಕಿನ ಮುಜರಾಯಿ ಇಲಾಖೆ ಅನುದಾನ ಮತ್ತು 2017–18ನೇ ಸಾಲಿನ ಹೊನ್ನಾಳಿ ತಾಲ್ಲೂಕಿನ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಅನುಮೋದನೆಯಾದ ಕಾಮಗಾರಿಗಳ ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ & ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗಳನ್ನು ಭರ್ತಿ ಮಾಡಿ ಸಲ್ಲಿಸಲು ಕೊನೆಯ **ದಿನಾಂಕ:14–12–2020 ಸಂಜೆ 5.00** ಗಂಟೆಯವರೆಗೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ: 08192–250156 ಅಥವಾ www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರು,
ಪಂ.ರಾ.ಇಂ. ವಿಭಾಗ, ದಾವಣಗೆರೆ.

ವಾಸಾಸಂಇ/ಎಸ್‌ಎಸ್‌ಸಿ/487/2020–21

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ದಾವಣಗೆರೆ ವಿಭಾಗ, ದಾವಣಗೆರೆ

ಸಂಖ್ಯೆ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/1459/2020–21 ದಿನಾಂಕ: 26.11.2020

**"ಸಂಧಾನ ಪ್ರಕಟಣೆ ಸಂಖ್ಯೆ: 03/2020–21"**

(ಬಸ್ ನಿಲ್ದಾಣಗಳ ಹೊರ ಮತ್ತು ಒಳ ಆವರಣದ ಜಾಹೀರಾತುಗಳಿಗೆ ಪ್ಯಾಕೇಜ್ ಮಾದರಿಯಲ್ಲಿ) (ಮಾತುಕತೆಯ ಮೂಲಕ)

ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗದ ವ್ಯಾಪಿಯಲ್ಲಿ ಇರುವ, ಜಗಳೂರು, ಹರಿಹರ ಮತ್ತು ಮಲೆಬೆನ್ನೂರು ಬಸ್ ನಿಲ್ದಾಣಗಳ, ಹೊರಭಾಗದಲ್ಲಿ ಯೂನಿಪೋಲ್ಸ್, ಹೋರ್ಡಿಂಗ್ಸ್ ಮತ್ತು ಆರ್ಚ್‌ಗಳಿಗೆ ಹಾಗೂ ಒಳ ಆವರಣದಲ್ಲಿ ಸಿ.ಸಿ.ಟಿವಿ, ವಿಡಿಯೋ ವಾಲ್, ನಿಯಾನ್ ಸೈನ್ಸ್, ಗ್ಲೋಸೈನ್, ಪಿಲ್ಲರ್ ಬೋರ್ಡ್, ಪ್ಲಾಟ್‌ಫಾರಂ ಬೋರ್ಡ್‌ಗಳು ಖಾಲಿ ಇದ್ದು, ಸದರಿ ಬಸ್ ನಿಲ್ದಾಣಗಳ ಒಳ ಮತ್ತು ಹೊರ ಭಾಗದ ಸ್ಥಳಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಮಾತುಕತೆಯ ಮೂಲಕ ಸಂಧಾನ ಕರೆಯಲಾಗಿರುತ್ತದೆ, ಸದರಿ ಸಂಧಾನ ದಸ್ತಾವೇಜುಗಳನ್ನು ನಿಗಮದ ವೆಬ್‌ಸೈಟ್: **www.ksrtc.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ–577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗೀಯ ಸಂಚಾರ ಅಧಿಕಾರಿ: 7760990452, ಸಹಾಯಕ ಸಂಚಾರ ವ್ಯವಸ್ಥಾಪಕರು: 7760990461.

ಸಹಿ/–, ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ. ಸಾರಿಗೆ ನಿಗಮ, ದಾವಣಗೆರೆ

ವಾಸಾಸಂಇ/ಉನಿನ/ಎಲ್‌ಸಿ/1877/2020–21

ಕುಟುಂಬದಲ್ಲಿ ಸೋಂಕಿತ ವ್ಯಕ್ತಿ ಇದ್ದು, ಮನೆ ಆರೈಕೆ ಆಯ್ಕೆ ಮಾಡಿಕೊಂಡಿದ್ದಲ್ಲಿ, ವೈದ್ಯರ ಸಲಹೆ ತಪ್ಪದೇ ಪಾಲಿಸಿ, ಪ್ರತ್ಯೇಕವಾಗಿ ಇರಿಸಿ, ಆರೈಕೆಯ ಸಂದರ್ಭದಲ್ಲಿ ಕಡ್ಡಾಯವಾಗಿ ಮಾಸ್ಕ್ ಮತ್ತು ಗ್ಲೋವ್ಸ್ ಬಳಸಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

## ಕಲರವ



ಹೇ... ಕರುಣಾಕರ
ನೀನೆಂಥ ವರ್ಣರಂಜಿನ ಕಲಾಕಾರ
ನಿನ್ನ ಕಲ್ಪನೆ ಅದೆಷ್ಟು ಸೊಗಸು
ಅಷ್ಟೇ ಅಂದ ನೀ ಸೃಷ್ಟಿಸಿದ
ಸೊಗಸು.

ನವಿಲಿನ ಅಂದ
ನೋಡಿದಾಗಲೇ ಚಂದ
ಕೊರಳ ನೀಲಿ
ಕಡುಕಪ್ಪು ಕಣ್ಣ ಅಲಿ
ತಲೆಯ ಮೇಲಿಟ್ಟಿರುವ ಕಿರೀಟವಂತೆ
ನೋಡಿದಷ್ಟು ಬಣ್ಣಬಣ್ಣ ಕಣಿಗೆ
ಹಬ್ಬದಂತೆ
ಗರಿಗಳೆಷ್ಟು ಸೊಗಸು ನೀಲಿ ಹಸಿರಿನ
ಹೃದಯದಾಕಾರದಿ ಸುತ್ತ
ಬಂಗಾರದ ಲೇಪನ.

ಗರಿಗಳ ಹರಡಿ ಕುಣಿವ ನವಿಲಿನ
ಮಯೂರ ನರ್ತನ
ಆ ಅಂದಕೆ ಆ ಬಣ್ಣಕ್ಕೆ ಆ ನರ್ತನಕ್ಕೆ
ನವಿಲಿಗೆ ನವಿಲೇ ಸರಿಸಾಟಿ
ಆ ಚಿತ್ರಕಲೆಗೆ ನೀನೇ ಸರಿಸಾಟಿ.

- ಸುಕನ್ಯ ತ್ಯಾವಣಿಗೆ

# ಮಕ್ಕಳು ಹೆತ್ತವರ, ಶಿಕ್ಷಕರ ಮಾರ್ಗದರ್ಶನದಲ್ಲಿ ಮುನ್ನಡೆಯಲಿ



ದಾವಣಗೆರೆ, ನ. 27 - ಮನೆ ಗೆದ್ದು , ಮಾರು ಗೆಲ್ಲಬೇಕು, ಮನೆಯಲ್ಲಿರುವ ಹಿರಿಯರನ್ನು ಗೌರವಿಸಬೇಕು, ಹೆತ್ತವರ ಮನಸ್ಸು ಗೆದ್ದು , ಸಮಾಜದಲ್ಲಿಯೂ ಒಳ್ಳೆಯ ಹೆಸರು ಗಳಿಸಬೇಕು ಎಂದು ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ನಗರದ ಶ್ರೀ ಸಿದ್ದಗಂಗಾ ವಿದ್ಯಾ ಸಂಸ್ಥೆ ಆವರಣದಲ್ಲಿ ಸಮಾನ ಮನಸ್ಕರ ಸೇವಾ ಸಮಿತಿಯ ಪ್ರಥಮ ವಾರ್ಷಿಕೋತ್ಸವದ ಅಂಗವಾಗಿ ಕನ್ನಡ ರಾಜ್ಯೋತ್ಸವ, ಮಕ್ಕಳ ದಿನಾಚರಣೆ ಹಾಗೂ ಎಸ್.ಎಸ್.ಎಲ್.ಸಿ.ಪರೀಕ್ಷೆಯಲ್ಲಿ ಕನ್ನಡದಲ್ಲಿ 125 ಕ್ಕೆ 125 ಅಂಕಗಳನ್ನು ಪಡೆದ ಮಕ್ಕಳಿಗೆ 'ಕನ್ನಡ ಕೀರ್ತಿ ಕಳಸ' ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಶ್ರೀಗಳು ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಗುರಿ ಯನ್ನು ಹೊಂದಿದಾಗ ಮಾತ್ರ ಯಶಸ್ಸು ಗಳಿ ಸಲು ಸಾಧ್ಯ ಎಂದು ಪ್ರತಿಪಾದಿಸಿದರು. ಶ್ರದ್ಧೆ, ಪರಿಶ್ರಮ, ಛಲ, ಬದ್ಧತೆಯನ್ನು ಮೈಗೂಡಿಸಿ ಕೊಳ್ಳಬೇಕು, ಗುರು- ಹಿರಿಯರು, ಶಿಕ್ಷಕರು ಹೇಳಿದಂತೆ ನಡೆಯಬೇಕು ಎಂದು ಆಶಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಹಿರಿಯ ಪತ್ರಕರ್ತ ಹಳೇಬೀಡು ರಾಮ ಪ್ರಸಾದ್ ಅವರು, ಅಂಕ ಗಳಿಕೆಯೇ ಇಂದು ವಿದ್ಯಾರ್ಥಿಗಳಿಗೆ ಅನಿವಾರ್ಯವಾಗಿದ್ದು, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಹೆಚ್ಚು ಅಂಕಗಳನ್ನು ಗಳಿಸುವುದೇ ಪ್ರಾಮುಖ್ಯತೆಯಾಗಿದೆ ಎಂದರು.

ಕನ್ನಡ ಚಳುವಳಿಯ ಹಿರಿಯ ಮುಖಂಡ ಬಸವರಾಜ ಐರಣಿ ಅವರು, ವಿದ್ಯಾರ್ಥಿಗಳು ತಮ್ಮ ಪಠ್ಯಗಳ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿ ಕೊಳ್ಳ ಬೇಕೆಂದು ಕರೆ ನೀಡಿದರು.

ಶ್ರೀ ಸಿದ್ದಗಂಗಾ ಶಾಲೆಯ ಮುಖ್ಯಸ್ಥರಾದ ಜಸ್ಟಿನ್ ಡಿಸೌಜಾ ಅವರು, ಇಂದು ಮಕ್ಕಳಿಗೆ ಆನ್ ಲೈನ್ ಬೋಧನೆ ನೋಡಲು ಮೊಬೈಲ್ ಬಳಕೆಯಿಂದ ಕಣ್ಣಿಗೆ ತೊಂದರೆಯಾಗುತ್ತದೆ ಎಂಬ ಮಾತು ಕೇಳಿ ಬರುತ್ತಿದೆ ಎಂದರು.

ಐಸಿರಿ ಪ್ರಾರ್ಥಿಸಿದರು. ಸಮಾನ ಮನಸ್ಕರ ಸೇವಾ ಸಮಿತಿಯ ಖಜಾಂಚಿ ಅಜ್ಜೇಶಿ ಸ್ವಾಗತಿಸಿದರು ಸಮಿತಿಯ ಗೌರವಾಧ್ಯಕ್ಷ ಬಕ್ಕೇಶ್ ನಾಗನೂರು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಿತಿಯ ಪ್ರಧಾನ ಕಾರ್ಯದರ್ಶಿ ಗಣೇಶ ಶೆಣೈ ನಿರೂಪಿಸಿದರು. ಸಮಿತಿಯ ಸಹ ಕಾರ್ಯದರ್ಶಿ ಲೋಕೇಶ್ ವಂದಿಸಿದರು.

ಈ ಕಾರ್ಯಕ್ರಮವನ್ನು ಕಲಾಕುಂಚ ಮತ್ತು ಸಿದ್ದಗಂಗಾ ವಿದ್ಯಾ ಸಂಸ್ಥೆ ಸಹಯೋಗದಲ್ಲಿ ಏರ್ಪಡಿಸಲಾಗಿತ್ತು. ಸಮಾರಂಭದ ಅಧ್ಯಕ್ಷತೆಯನ್ನು ಸಮಿತಿಯ ಅಧ್ಯಕ್ಷ ಅಬ್ದುಲ್ ಸತ್ತಾರ್ ಸಾಹೇಬ್ ವಹಿಸಿದ್ದರು. ಕಲಾಕುಂಚ ಸಂಸ್ಥೆಯ ಅಧ್ಯಕ್ಷ ಕೆ.ಹೆಚ್. ಮಂಜುನಾಥ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಮಾನ ಮನಸ್ಕರ ಸೇವಾ ಸಮಿತಿಯ ಪದಾಧಿಕಾರಿಗಳಾದ ಬಂಕಾಪುರದ ಚೆನ್ನಬಸಪ್ಪ, ವಿಜಯಕುಮಾರ ಶೆಟ್ಟಿ, ಎಂ ಪಿ ಕುಮಾರ್, ಶ್ರೀಮತಿ ಶೈಲಾ ವಿಜಯಕುಮಾರ್, ಶ್ರೀಮತಿ ನಿರ್ಮಲಾ ಮೃತ್ಯುಂಜಯ, ಶ್ರೀಮತಿ ಕೆ.ಎಂ. ಚಂದ್ರಮ್ಮ, ಶ್ರೀಮತಿ ಜಿ ಜಯಮ್ಮ ಮತ್ತಿತರರು ಭಾಗವಹಿಸಿದ್ದರು.

## ಸವಿಗಾನ

ಗಾನದ ಕೊರಳಲಿ ಸ್ವರಗಳ ನರ್ತನ
ಭಾವ ತರಂಗದ ನಲಿವಿನ ಸಿಂಚನ
ಉಸಿರುಸಿರಿನಲಿ ತುಂಬಿದ ರಾಗವು
ತನು ಮನದಲ್ಲಿ ಸಂಚರಿಸಿದ ಭಾವವು!!

ಸ್ವರ ಸ್ವರದಲಿ ಪದ ಪದದೇರಿಳಿತ
ಇಂಪಲಿ ತುಂಬಿದ ಸವಿಗಾನದ ಮಿಳಿತ
ಮಧುರ ಗಾನದಲಿ ತೇಲಿದ ಮನವು
ಇಹ ಪರವನೇ ತಾ ಮರೆತಿಹ ತನುವು.

ಪದಪದದಲಿ ತುಂಬಿದ ಮುತ್ತಿನ ಮಣಿಯು
ರಾಗಭಾವ ಬೆಸೆದ ಹೊನ್ನಿನ ಗಣಿಯು
ಸಾಹಿತ್ಯ ಸಂಗೀತ ಭಾವ ಬೆಸುಗೆಯಲಿ
ಇಂಪಿನ ಕಂಪದು ಭವ ಸಾಗರದಲಿ!!

ಸಪ್ತ ಸ್ವರದಲಿ ಹೊಮ್ಮಿದ ರಾಗಭಾವವು
ತಾಳ ಮೇಳದಲಿ ಸ್ವರ ಸಂಗಮವು
ಮಧುರ ಭಾವವು ನವ ಬೆರಗಿನಲಿ
ಸಾಹಿತ್ಯ ಸಂಗೀತ ನವ ನಾವೀನ್ಯತೆ ಯಲಿ.!

- ವೀಣಾ ಕೃಷ್ಣಮೂರ್ತಿ, ದಾವಣಗೆರೆ.

## ಕೊರತೆ ಬಜೆಟ್ ಗುರಿಯ ಶೇ.120

(3ನೇ ಪುಟದಿಂದ) ಶೇ.114.8ಕ್ಕೆ ತಲುಪಿತ್ತು. ನಂತರ ಡಿಸೆಂಬರ್ ವೇಳೆಗೆ ಬಜೆಟ್ ಅಂದಾಜಿನ ಶೇ.119.7ಕ್ಕೆ ಏರಿಕೆಯಾಗಿದೆ. ಅಕ್ಟೋಬರ್‌ವರೆಗೆ ಸರ್ಕಾರಕ್ಕೆ 7.08 ಲಕ್ಷ ಕೋಟಿ ರೂ.ಗಳ ಆದಾಯ ದೊರೆತಿದೆ. ಇದು ಬಜೆಟ್ ಅಂದಾಜಿನ ಶೇ.31.54ರಷ್ಟು ಮಾತ್ರವಾಗಿದೆ.

## ದಿನದ ಚುಟುಕು

ಹಿಂತಿರುಗಿ ಹರಿಯದ ನದಿ
ಬದುಕು ಕಟ್ಟಿಕೊಡುವ ಬದಿ
ಹಿಂದಿರುಗಿ ಬರದ "ಕಾಲ"
ಕಾಣದ ಬೆನ್ನ ಮಾಯಾಜಾಲ!

- ಶ್ರೀಮತಿ ವೀಕೆಎಂ

## 'ಲಿಂಗಾಯತ' ಯತ್ನ

(3ನೇ ಪುಟದಿಂದ) ವರ್ಚಸ್ಸಿಗೆ ಧಕ್ಕೆಯಾಗುತ್ತದೆ. ದೆಹಲಿಗೆ ಬನ್ನಿ, ಸವಿಸ್ತಾರವಾಗಿ, ಚರ್ಚಿಸೋಣ, ಮುಂದೆ ತೀರ್ಮಾನ ಕೈಗೊಳ್ಳೋಣ, ಇಂದು ಯಾವುದೇ ನಿರ್ಧಾರ ಕೈಗೊಳ್ಳಬೇಡಿ ಎಂದು ಆದೇಶ ಮಾಡಿದರು. ವರಿಷ್ಠರ ಆದೇಶದಂತೆ ಇಂದು ಸಂಪುಟ ಸಭೆಯಲ್ಲಿ ವಿಷ ಯವನ್ನು ಮುಂದೂಡುವ ತೀರ್ಮಾನ ಕೈಗೊಳ್ಳಲಾಯಿತು.

## ಎಸ್ಸೆಸ್ ಚಾಲನೆ

(3ನೇ ಪುಟದಿಂದ) ಎ.ನಾಗರಾಜ್, ಸದಸ್ಯರುಗಳಾದ ಜಿ.ಎಸ್.ಮಂಜುನಾಥ್ ಗಡಿಗುಡಾಳ್, ಕೆ.ಚಮನ್ ಸಾಬ್, ಉದಯಕುಮಾರ್, ಮುಖಂಡರುಗಳಾದ ಬಸ್ ಉಮೇಶ್, ಘನಿ ತಾಹೇರ್, ರಹಮತ್, ಖಾದರ್, ಖಲೀಲ್, ಸಮೀವುಲ್ಲಾ, ಅನಿಲ್ ಕುಮಾರ್, ಹಬೀಬ್, ಡಿಶ್ ಮಂಜುನಾಥ್, ಬಾಷಾ ಸಾಬ್, ಸತೀಶ್, ವೆಂಕಟೇಶ್, ರಾಜು, ಗಣೇಶ್, ಕುಮಾರ್ ಮತ್ತಿತರರಿದ್ದರು.

# ಕನ್ನಡ ಸಾಹಿತ್ಯಕ್ಕೆ ಮಹಿಳೆಯರಿಂದ ವಿಶಿಷ್ಟ ಕೊಡುಗೆ



**ಹಿರಿಯ ಲೇಖಕಿ ಜಿ.ಎಸ್. ಸುಶೀಲಾದೇವಿ ಮೆಚ್ಚುಗೆ**

ದಾವಣಗೆರೆ, ನ.27 - ಕನ್ನಡ ಸಾಹಿತ್ಯಕ್ಕೆ ಮಹಿಳೆಯರು ತಮ್ಮದೇ ಆದ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಹೆಣ್ಣಲ್ಲವೇ ನಮ್ಮನ್ನೆಲ್ಲ ಪೆತ್ತ ತಾಯಿ, ಪೊರೆದ ಮಾತೆ, ಪೆಣ್ಣುಪೆಣ್ಣೆಂದೇಕೆ ಹೀಗಳೆಯುವರು, ಕಣ್ಣು ಕಾಣದ ಗಾವಿಲರು ಎಂದು ಹದಿಬದೆಯ ಧರ್ಮದ ಕೃತಿಕಾರ್ತಿ ಸಂಚಿ ಹೊನ್ನಮ್ಮ ಸ್ತ್ರೀಯ ಮಹತ್ವ ಕುರಿತು ಪುರುಷ ಪ್ರಧಾನ ಸಮಾಜವನ್ನು ಧೈರ್ಯವಾಗಿ ಪ್ರಶ್ನಿಸಿದ್ದಾಳೆ ಎಂದು ಹಿರಿಯ ಲೇಖಕರಾದ ಶ್ರೀಮತಿ ಜಿ. ಎಸ್. ಸುಶೀಲಾದೇವಿ ಆರ್. ರಾವ್ ತಿಳಿಸಿದರು.

ಗ್ರಂಥಸರಸ್ವತಿ ಪ್ರತಿಭಾರಂಗವು ನ.1 ರಿಂದ ನ.30 ರವರೆಗೆ ಹಮ್ಮಿಕೊಂಡಿರುವ ಕನ್ನಡಕಬ್ಬ ಉಗಾದಿಹಬ್ಬ ಕವಿಕಾವ್ಯ ಚಿಂತನಾ ಗೋಷ್ಠಿಯ 21ನೇಯ ದಿನದ ಅತಿಥಿಗಳಾಗಿ ಆಗಮಿಸಿದ್ದ ಸುಶೀಲಾದೇವಿ ಅವರು ಕನ್ನಡ ಮಹಿಳಾ ಸಾಹಿತಿಗಳ ಕುರಿತು ವಿವರಿಸಿದರು. ಇಮ್ಮಡಿ ಪುಲಕೇಶಿಯ ಮಗನ ಹೆಂಡತಿ ವಿಜಯಾಂಬಿಕೆ ವಿಜಯನಗರದ ಗಂಗಾಬಿಕೆಯ ಗಂಡ ಮಧುರೆಯಲ್ಲಿ ವಿಜಯವನ್ನು ಸಾಧಿಸಿದಾಗ ಮಧುರಾ ವಿಜಯ ಎಂದು ಸಂಸ್ಕೃತದಲ್ಲಿ ಬರೆದಿದ್ದಾಳೆ.

ರನ್ನ ಪಂಪರ ಕಾಲವಾದ ಹನ್ನೊಂದನೆಯ ಶತಮಾನದಲ್ಲಿ, ನಾಗಚಂದ್ರನ ಕಾಲದಲ್ಲಿ ಆತನ ಸಮಕಾಲೀನಳಾದ ಕವಯತ್ರಿ ಕಂತಿಯು ಎದುರಾಗುತ್ತಾಳೆ. ಆಕೆ ಆಸ್ಥಾನದಲ್ಲಿ ಪರಸ್ಪರ ಸವಾಲುಗಳನ್ನು ಹಾಕುತ್ತಾಳೆ. ಆಸ್ಥಾನಕವಿ ನಾಗಚಂದ್ರನು 'ಸತ್ತವಳಂತೆ ಪೊಗುತ್ತಿರುವಳ್' ಎಂದು ಹೇಳಿದ್ದಕ್ಕೆ ಕಂತಿಯು 'ಅತ್ತೆ ಮಾವ ನಾದಿನಿಯರ ಕಾಟಕೆ ಬೇಸತ್ತು ತವರೂರಿಗೆ ಹೋಗುತ್ತಿರುವಳು' ಎಂದು ಹೇಳಿ ಆಸ್ಥಾನದಲ್ಲಿದ್ದವರ ಮನ ಗೆಲ್ಲುತ್ತಾಳೆ ಎಂದು ಅವರು ತಿಳಿಸಿದರು.


ಹನ್ನೆರಡನೆಯ ಶತಮಾನದ ಮೊದಲ ವಚನಕಾರ್ತಿ ಅಕ್ಕಮಹಾದೇವಿಯು ಮಹಿಳಾ ಸಾಹಿತ್ಯದಲ್ಲಿ ವಜ್ರದಂತೆ ಪ್ರಜ್ವಲಿಸುತ್ತಾಳೆ. ಅಕ್ಕ ನೂರಾರು ವಚನಗಳನ್ನು ಹಾಗೂ 'ಯೋಗಾಂಗ ತ್ರಿವಿಧಿ' ಎಂಬ ಅದ್ಭುತ ತ್ರಿಪದಿಕಾವ್ಯ ಬರೆದಿದ್ದಾಳೆ. ಅಕ್ಕನ ಜೊತೆ ಮುಕ್ತಾಯಕ್ಕ, ಕಾಳವ್ವೆ, ಆಯ್ದಕ್ಕಿ ಲಕ್ಕಮ್ಮ, ಬಿಜ್ಜಳದೇವಿ ಮುಂತಾದವರು ವಚನಗಳನ್ನು ರಚಿಸಿದ್ದಾರೆ.

ಹದಿನೈದನೆಯ ಶತಮಾನದವರೆಗೆ ಯಾರನ್ನೂ ಕಾಣದ ಕನ್ನಡ ಸಾಹಿತ್ಯ ಸಂಚಿಯ ಹೊನ್ನಮ್ಮನ 'ಹದಿಬದಿಯ ಧರ್ಮ' ಕೃತಿಯನ್ನು ರಚಿಸಿರುವುದನ್ನು ಕಾಣಬಹುದು. ನಂತರದ ದಿನಮಾನಗಳಲ್ಲಿ ಬಂದ ಹೆಳವನಕಟ್ಟೆ ಗಿರಿಯಮ್ಮ ಚಂದ್ರಹಾಸ ಚರಿತೆ, ಸೀತಾಕಲ್ಯಾಣ, ಬ್ರಹ್ಮಕೊರವಂಜಿ ಎಂಬ ಭಕ್ತಿ ಕೃತಿಗಳನ್ನು ರಚಿಸಿದ್ದಾಳೆ. ಇನ್ನೋರ್ವ ಕವಯತ್ರಿ ಹೆಳವನಕಟ್ಟೆ ಗಿರಿಯಮ್ಮ ಅವಿದ್ಯಾವಂತೆಯಾದರೂ ಆಕೆ ಭಕ್ತಿ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಅಮೂಲ್ಯವಾದುದು.

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ನೂರಾರು ಲೇಖಕಿಯರು ಕನ್ನಡ ಸಾಹಿತ್ಯ ಲೋಕದ ಮಡಿಲಿಗೆ ತಮ್ಮ ಅಪೂರ್ವ ಕಾಣಿಕೆ ನೀಡಿ ಶ್ರೀಮಂತಗೊಳಿಸಿದ್ದಾರೆ. ಹೆಣ್ಣು ಅಬಲೆ ಎನ್ನುತ್ತಿದ್ದ ಸಮಾಜಕ್ಕೆ ಹೆಣ್ಣಿನ ಸಬಲತೆಯ ಶಕ್ತಿಯ ರುಚಿಯನ್ನು ತೋರಿಸಿ ಕೊಟ್ಟಿದ್ದಾರೆ ಎಂದು ಜಿ.ಎಸ್.ಸುಶೀಲಾದೇವಿ ಆರ್. ರಾವ್ ಅವರು ಕೂಲಂಕುಶವಾಗಿ ವಿವರಿಸಿದರು.

ವಾಲ್ಮೀಕಿ, ಪಂಪ, ಬಸವಣ್ಣ, ರವೀಂದ್ರನಾಥ ಠಾಕೂರ್, ಕುವೆಂಪು, ಡಾ. ಎಸ್. ಬಾಲಸುಬ್ರಮಣ್ಯಂ, ವಿಶ್ವಸರಳದಿನಾಚರಣೆ, ಪುಸ್ತಕ ದಿನಾಚರಣೆಗಳ ಬಗ್ಗೆ ಅಕ್ಷರ ಮಾಂತ್ರಿಕ ಅಮೊಘಂಚೈತ್ರಕಾರಂಜಿ ರಚಿಸಿದ ಅಕ್ಷರಾಕ್ಷರ ಪದಪುಂಜದ ರಚನೆಗಳನ್ನು ಆರ್.ಶಿವಕುಮಾರ ಸ್ವಾಮಿ ಕುರ್ಕಿ ಭಾವಪೂರ್ಣವಾಗಿ ವಾಚಿಸಿದರು.

## ಬಿಂದು ಮಾಧವ ಶರ್ಮಾ ಅವರಿಗೊಂದು ನಮನ



ಮಾತಾಡೊ ದೈವದಂತಿದ್ದಿರಿ
ನಮ್ಮ ಜೊತೆ
ಸತತ ಸನ್ಮಾರ್ಗವನು ನೀವು
ತೋರಿಸುತೆ
ಚಿತ್ತಕ್ಕೆ ಶಾಂತಿ ನೆಮ್ಮದಿ ನಿಮ್ಮ
ಮಾತುಗಳು
ಸುತ್ತಿದೆ ಶೂನ್ಯತೆಯು ನೀವಿಲ್ಲದೆ

ಬೆಲಗೂರ ಬೆಳೆಸಿದಿರಿ ಗುಡಿಗಳ
ಮಾಡಿದಿರಿ
ಎಲ್ಲರಿಗು ಊಟ ಉಪಚಾರ
ನೀಡಿದಿರಿ
ನಿಲ್ಲದ ಚೈತನ್ಯವಾಗಿ ನೀವ್
ಬಾಳಿದಿರಿ
ನಿಲುಕದ ನಕ್ಷತ್ರ ಈಗಾದಿರಿ

ನಡೆವೆವು ನೀವು ತೋರಿಸಿದ
ದಾರಿಯಲಿ
ಇಡುವೆವು ನಂಬಿಕೆಯ ನಿಮ್ಮ
ಶಕ್ತಿಯಲಿ
ಅಡಿಗೆರಗಿ ಮನದಿಂದ
ನಮಿಸುವೆವು ಭಕ್ತಿಯಲಿ
ಕಡೆತನಕ ಕಾಯಿರಿ ಸಿರಿಹರಿ
ದಯದಲಿ

ಬೆಲಗೂರಿನ ಅವಧೂತರೇ
ಬೆಲೆ ಕಟ್ಟಲಾಗದ ಸದ್ಗುರುಗಳೆ
ಎಲ್ಲರ ನೋವಿಗೂ
ಸ್ಪಂದಿಸುತ್ತಿದ್ದವರೇ
ಎಲ್ಲರ ಮನ ಗೆದ್ದ ಹನುಮನ
ಭಕ್ತರೇ

ನಿಮ್ಮ ಸಲಹೆಯಿಂದ ಪರಿಹಾರ
ಪಡೆದವರು
ನಿಮ್ಮ ಆಶೀರ್ವಾದದಿಂದ
ಬೆಳೆದವರು
ನಿಮ್ಮ ಪ್ರೇರಣೆಯಿಂದ
ಬದುಕಿದವರು
ನಿಮ್ಮ ಅಗಲಿಕೆಯಿಂದ
ಬಳಲಿರುವರು

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

## ಸಮಾನ ಹಕ್ಕು, ಸುರಕ್ಷತೆಯನ್ನು ಸಂವಿಧಾನ ನೀಡಿದೆ




**ಹರಪನಹಳ್ಳಿ ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಉಂಡಿ ಮಂಜುಳಾ ಶಿವಪ್ಪ**

ಹರಪನಹಳ್ಳಿ, ನ.27- ಸಮಾನ ಹಕ್ಕು ಹಾಗೂ ಸುರಕ್ಷತೆಯನ್ನು ನಮ್ಮ ಸಂವಿಧಾನ ನೀಡಿದೆ. ಪ್ರಜೆಗಳು ಪ್ರಶ್ನಿಸುವ ಹಕ್ಕನ್ನು ನೀಡಿರುವುದು ಸಂವಿಧಾನವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಉಂಡಿ ಮಂಜುಳಾ ಶಿವಪ್ಪ ಹೇಳಿದರು.

ಪಟ್ಟಣದ ನ್ಯಾಯಾಲಯ ಆವರಣದಲ್ಲಿರುವ ವಕೀಲರ ಸಂಘದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘದ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಏಕತಾ ಸಪ್ತಾಹ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಸಂವಿಧಾನ ದಿನಾಚರಣೆ ಕುರಿತ ಕಾನೂನು ಅರಿವು-ನೆರವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಅನ್ಯ ದೇಶಗಳಲ್ಲಿ ಬಹುಸಂಖ್ಯಾತರ ಧರ್ಮಗಳೇ ಕಾನೂನಿನ ಗ್ರಂಥಗಳು. ಆದರೆ ಭಾರತ ದೇಶದಲ್ಲಿ ಎಲ್ಲಾ ಧರ್ಮದವರಿಗೂ ಸಂವಿಧಾನವೇ ಪವಿತ್ರವಾಗಿ ರಚಿತವಾಗಿರುವುದು ನಮ್ಮ ಹೆಮ್ಮೆ ಎಂದರು.

ವಕೀಲ ಬಿ. ಕೃಷ್ಣಮೂರ್ತಿ, ಪಿಎಸ್ಐ ಪ್ರಕಾಶ್ ಮಾತನಾಡಿದರು. ಕಿರಿಯ ಸಿವಿಲ್ ನ್ಯಾಯಾಧೀಶರಾದ ಬಿ.ಜಿ. ಶೋಭಾ, ವಕೀಲರ ಸಂಘದ ಅಧ್ಯಕ್ಷ ಕೆ. ಚಂದ್ರಗೌಡ, ಉಪಾಧ್ಯಕ್ಷ ಟಿ. ವೆಂಕಟೇಶ್, ಕಾರ್ಯದರ್ಶಿ ಕೆ. ಬಸವರಾಜ್, ಅಪರ ಸರ್ಕಾರಿ ವಕೀಲರಾದ ಮಂಜುನಾಥ ಕಣಿವಿಹಳ್ಳಿ, ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ಎ.ಎಂ. ಬಸವರಾಜು, ವಕೀಲರಾದ ಮೃತ್ಯುಂಜಯ ಇನ್ನಿತರರಿದ್ದರು.

## ಕನಕ ವಿವಿಧೋದ್ದೇಶ ಸಹಕಾರ ಸಂಘದ ಶಾಖೆ ಪ್ರಾರಂಭ



ದಾವಣಗೆರೆ ನ.27 - ಕನಕ ವಿವಿಧೋದ್ದೇಶ ಸಹಕಾರ ಸಂಘದ ಉಪಘಟಕದ 2ನೇ ಶಾಖೆ ನಗರದ ಎಸ್.ಎಸ್.ಹೈಟೆಕ್ ಆಸ್ಪತ್ರೆ ರಸ್ತೆಯಲ್ಲಿ ಇಂದು ಪ್ರಾರಂಭಗೊಂಡಿತು. ಹದಡಿಯ ಚಂದ್ರಗಿರಿಮಠದ ಶ್ರೀ ಸದ್ಗುರು ಪರಮಹಂಸ ಮಹಾಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದರು. ದಾ - ಹ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ನೂತನ ಶಾಖೆಯನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಪಾಲಿಕೆ ಸದಸ್ಯರಾದ ವೀರೇಶ್, ಉಮಾಪ್ರಕಾಶ್, ಗ್ರಾಮ ಪಂಚಾಯಿತಿ ಸದಸ್ಯ ನಿಂಗಪ್ಪ, ವೃತ್ತ ನಿರೀಕ್ಷಕ ಮಧು, ದೇವನಗರಿ ಗ್ಯಾಸ್ ಏಜೆನ್ಸಿ ಮಾಲೀಕ ರುದ್ರಮುನಿಸ್ವಾಮಿ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಎ.ಹೆಚ್.ನಾಗರಾಜ್ ವಹಿಸಿದ್ದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ಕೆ.ಬಿ.ಹನುಮಂತಪ್ಪ ಮತ್ತಿತರರು ಉಪಸ್ಥಿತರಿದ್ದರು.


ದಾವಣಗೆರೆ ನಗರದ ಕೆಲವೇ ಪ್ರತಿಷ್ಠಿತ ಪತ್ತಿನ ಸಹಕಾರಿ ಸಂಸ್ಥೆಗಳಲ್ಲಿ ಒಂದು

**ಶ್ರೀ ಚೌಡೇಶ್ವರಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ.,**

ನಂ. 175/2, ಶ್ರೀ ವಿನಾಯಕ ಕಾಂಪ್ಲೆಕ್ಸ್, ವಸಂತ ರಸ್ತೆ, ದಾವಣಗೆರೆ. ದೂರವಾಣಿ : 08192-233622

**9ನೇ ವಾರ್ಷಿಕ ಮಹಾಸಭೆಯ ನೋಟಿಸ್**

ಶ್ರೀ ಚೌಡೇಶ್ವರಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ ದಾವಣಗೆರೆ ಇದರ 2019-20ನೇ ಸಾಲಿನ 9ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ : 28.11.2020ನೇ ಶನಿವಾರ ಬೆಳಿಗ್ಗೆ 11.30 ಗಂಟೆಗೆ ಶ್ರೀ ಚೌಡೇಶ್ವರಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ, ಆಡಳಿತ ಕಛೇರಿ, ಶ್ರೀ ವಿನಾಯಕ ಕಾಂಪ್ಲೆಕ್ಸ್, ವಸಂತ ರಸ್ತೆ, ದಾವಣಗೆರೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯಲ್ಲಿ ಭಾಗವಹಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

**ಸಂಸ್ಥೆಯ ಪ್ರಗತಿಯ ಪಕ್ಷಿನೋಟ**

(ರೂ. ಲಕ್ಷಗಳಲ್ಲಿ)

| ವಿವರಗಳು | 31.3.2014 | 31.3.2015 | 31.3.2016 | 31.3.2017 | 31.3.2018 | 31.3.2019 | 31.3.2020 |
|---|---|---|---|---|---|---|---|
| ಸದಸ್ಯರು | 1,314 | 1,442 | 1,512 | 1,551 | 1,587 | 1,655 | 1,743 |
| ಷೇರು ಬಂಡವಾಳ | 24.93 | 32.01 | 36.98 | 42.25 | 47.03 | 51,48,300-00 | 56,27,300-00 |
| ಕಾಯ್ದಿರಿಸಿದ ನಿಧಿ | 2.74 | 12.26 | 30.77 | 49.64 | 70.64 | 94,26,129-52 | 1,19,82,239-00 |
| ಠೇವಣಿಗಳು | 148.78 | 254.19 | 353.52 | 387.79 | 453.61 | 5,62,07,990-39 | 6,22,41,660-00 |
| ಸಾಲಗಳು | 164.09 | 258.17 | 332.41 | 409.80 | 468.00 | 5,46,95,819-00 | 7,61,77,192-00 |
| ದುಡಿಯುವ ಬಂಡವಾಳ | 186.72 | 319.78 | 457.63 | 510.23 | 607.13 | 7,50,78,200-61 | 8,71,97,476-00 |
| ಲಾಭ-ನಷ್ಟ | 8.71(ಲಾಭ) | 17.49(ಲಾಭ) | 20.00(ಲಾಭ) | 23.65(ಲಾಭ) | 25.94(ಲಾಭ) | 28,52,137-80 | 29,87,710-38 |
| ಆಡಿಟ್ ವರ್ಗೀಕರಣ | 'ಬಿ' ಗ್ರೇಡ್ | 'ಬಿ' ಗ್ರೇಡ್ | 'ಎ' ಗ್ರೇಡ್ | 'ಎ' ಗ್ರೇಡ್ | 'ಎ' ಗ್ರೇಡ್ | 'ಎ' ಗ್ರೇಡ್ | 'ಎ' ಗ್ರೇಡ್ |
| ಡಿವಿಡೆಂಡ್ | - | - | ಶೇ. 8 | ಶೇ. 8(ಉದ್ದೇಶಿತ) | ಶೇ. 8(ಉದ್ದೇಶಿತ) | ಶೇ. 8 (ಉದ್ದೇಶಿತ) | ಶೇ. 8 (ಉದ್ದೇಶಿತ) |

**ನಿರ್ದೇಶಕರ ಮಂಡಲಿ**



ಶ್ರೀ ಡಿ. ಬಸವರಾಜಪ್ಪ ಅಧ್ಯಕ್ಷರು; ಶ್ರೀ ಎನ್. ಗೋದೆಪ್ಪ ಉಪಾಧ್ಯಕ್ಷರು; ಶ್ರೀ ಎಸ್. ರುದ್ರಪ್ಪ ನಿರ್ದೇಶಕರು; ಶ್ರೀ ಆರ್. ಶಂಕರ್ ನಿರ್ದೇಶಕರು; ಶ್ರೀ ಎನ್. ಪ್ರಕಾಶ್ ನಿರ್ದೇಶಕರು; ಶ್ರೀ ಎಲ್. ನಾಗರಾಜ್ ನಿರ್ದೇಶಕರು; ಶ್ರೀ ಆರ್. ವೆಂಕಟಾಚಲಮೂರ್ತಿ ನಿರ್ದೇಶಕರು



ಶ್ರೀ ಟಿ. ಸುರೇಶ್ ನಿರ್ದೇಶಕರು; ಶ್ರೀ ಬಿ.ಪಿ. ಮಂಜುನಾಥ ನಿರ್ದೇಶಕರು; ಶ್ರೀ ಎಲ್.ಎಸ್. ಸುಧಾಕರ್ ನಿರ್ದೇಶಕರು; ಶ್ರೀಮತಿ ಅನಂತಮ್ಮ ನಿರ್ದೇಶಕರು; ಶ್ರೀ ಎಸ್.ಎಂ. ನಾಗರಾಜನ್ ವಿಶೇಷ ಆಹ್ವಾನಿತರು; ಶ್ರೀ ಡಿ. ಪಾವನಮೂರ್ತಿ ಕಾರ್ಯದರ್ಶಿ

ವಿ.ಸೂ. : ಮಾನ್ಯ ಸದಸ್ಯರಿಗೆ ಈಗಾಗಲೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಅಂಚೆಯ ಮೂಲಕ/ಮುದ್ದಾಂ ಕಳುಹಿಸಲಾಗಿದ್ದು, ಸಕಾಲಕ್ಕೆ ತಲುಪದೇ ಇದ್ದವರು, ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ. ಮಾಸ್ಕ್ ಧರಿಸುವುದು ಕಡ್ಡಾಯವಾಗಿರುತ್ತದೆ.



**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**

ದಾವಣಗೆರೆ ವಿಭಾಗ, ದಾವಣಗೆರೆ

ಸಂಖ್ಯೆ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/1460/2020-21 ದಿನಾಂಕ: 26.11.2020

**ಇ-ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ: 03/2020-21**

(ಇ-ಪ್ರೊಕ್ಯೂರ್‌ಮೆಂಟ್ / ಮಾತುಕತೆಯ ಮೂಲಕ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ, **ಹರಿಹರ** ಬಸ್ ನಿಲ್ದಾಣದ ಜನರಲ್ ಸ್ಟಾಲ್-05 ಮತ್ತು **ಮಲೇಬೆನ್ನೂರು** ಬಸ್ ನಿಲ್ದಾಣದ ಉಪಹಾರ ಗೃಹಕ್ಕೆ **ಇ-ಟೆಂಡರ್ ಮೂಲಕ ಆಹ್ವಾನಿಸಲಾಗಿದೆ.**

**ಜಗಳೂರು** ಬಸ್ ನಿಲ್ದಾಣದ ಜನರಲ್ ಸ್ಟಾಲ್ ಮಳಿಗೆ ಸಂಖ್ಯೆ-02, **ಜಗಳೂರು** ಜನರಲ್ ಸ್ಟಾಲ್ ಮಳಿಗೆ ಸಂಖ್ಯೆ-03 ಮತ್ತು ಜಗಳೂರು ಬಸ್ ನಿಲ್ದಾಣದ ಉಪಹಾರ ಗೃಹ, ಇವುಗಳನ್ನು **ಸಂಧಾನ (ಮಾತುಕತೆ)ದ ಮೂಲಕ ಆಹ್ವಾನಿಸಲಾಗಿದೆ.**

ಮೇಲ್ಕಂಡ ಖಾಲಿಯಿರುವ / ಖಾಲಿಯಾಗಲಿರುವ ಶಾಶ್ವತ / ತೆರೆದ ವಾಣಿಜ್ಯ ಮಳಿಗೆಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಇ-ಟೆಂಡರ್ / ಸಂಧಾನ ಆಹ್ವಾನಿಸಲಾಗಿದೆ.

ಸದರಿ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://eproc.karnataka.gov.in** ನಿಂದ ಹಾಗೂ ನಿಗಮದ ವೆಬ್‌ಸೈಟ್: **www.ksrtc.in** ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ-577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗೀಯ ಸಂಚಾರ ಅಧಿಕಾರಿ: 7760990452, ಸಹಾಯಕ ಸಂಚಾರ ವ್ಯವಸ್ಥಾಪಕರು: 7760990461.

ವಾಸಾಸಂಇ/ಉನಿನ/ಎಲ್‌ಸಿ/1878/2020-21

ಸಹಿ/-, ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ. ಸಾರಿಗೆ ನಿಗಮ, ದಾವಣಗೆರೆ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,**

ಪ್ರಧಾನ ಕಚೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ.ರಸ್ತೆ, ದಾವಣಗೆರೆ - 577002.

**ಬ್ಯಾಂಕಿನ ಷೇರುದಾರರ ಗಮನಕ್ಕೆ**

ಮಾನ್ಯ ಸದಸ್ಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಕೋವಿಡ್-19 ಸಾಂಕ್ರಾಮಿಕ ರೋಗದ ಪ್ರಯುಕ್ತ ಸಹಕಾರ ಬ್ಯಾಂಕುಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ವಿಡಿಯೋ ಕಾನ್ಫರೆನ್ಸ್/ವರ್ಚುವಲ್ ಮೀಟಿಂಗ್ ಮುಖಾಂತರ ಜರುಗಿಸುವಂತೆ ಸರ್ಕಾರವು ಮಾರ್ಗಸೂಚಿಯನ್ನು ನೀಡಿರುತ್ತದೆ. ಈ ಮಾರ್ಗಸೂಚಿಯನ್ವಯ **ಬ್ಯಾಂಕಿನ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ : 12.12.2020 ರಂದು ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸಲು ತೀರ್ಮಾನಿಸಲಾಗಿದೆ.** ಆದ್ದರಿಂದ ಮಾನ್ಯ ಸದಸ್ಯರು ವಾರ್ಷಿಕ ಮಹಾಸಭೆಯ ವರ್ಚುವಲ್ ಮೀಟಿಂಗನ್ನು ವಿಡಿಯೋ ಕಾನ್ಫರೆನ್ಸ್/ವೆಬ್‌ಕಾಸ್ಟ್ ಮೂಲಕ ಪಾಲ್ಗೊಳ್ಳುವುದು ಸಾಮಾನ್ಯ ಸಭೆಯ ಹಾಜರಾತಿಯೆಂದು ಪರಿಗಣಿಸಲ್ಪಡುವುದರಿಂದ **ತಮ್ಮ ಷೇರು ಖಾತೆ ನಂಬರ್ ಹಾಗೂ ಮೊಬೈಲ್ ಸಂಖ್ಯೆಯನ್ನು ಕೂಡಲೇ ನಮ್ಮ ಬ್ಯಾಂಕಿನ ಶಾಖೆಗಳಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು ಅಥವಾ ಸದಸ್ಯರುಗಳು ತಮ್ಮ ಸದಸ್ಯತ್ವ ಸಂಖ್ಯೆ, ಹೆಸರು ಹಾಗೂ ಮೊಬೈಲ್ ನಂಬರನ್ನು ಬ್ಯಾಂಕಿನ ಈ ಮೊಬೈಲ್ ನಂ. 98800 18279 ಗೆ ಎಸ್.ಎಂ.ಎಸ್./ವಾಟ್ಸಾಪ್ ಮೂಲಕವೂ ಕೂಡ ನೋಂದಾಯಿಸಿಕೊಳ್ಳಲು ಅವಕಾಶವಿರುತ್ತದೆ.**

ಕೋಗುಂಡಿ ಬಕ್ಕೇಶಪ್ಪ, ಅಧ್ಯಕ್ಷರು | ಅಂದನೂರು ಮುಪ್ಪಣ್ಣ, ಉಪಾಧ್ಯಕ್ಷರು | ಡಿ.ವಿ. ಆರಾಧ್ಯಮಠ್, ಪ್ರಧಾನ ವ್ಯವಸ್ಥಾಪಕರು

# ಸೋಮೇಶ್ವರ ವಿದ್ಯಾಲಯದಲ್ಲಿ ಎಸ್.ಎ.ಆರ್ ಅಮೃತ ಮಹೋತ್ಸವದ ಮಕ್ಕಳ ಕ್ರೀಡಾಂಗಣ

ದಾವಣಗೆರೆ, ನ.27- ನಗರದ ಶ್ರೀ ಸೋಮೇಶ್ವರ ವಿದ್ಯಾಲಯದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಎಸ್.ಎ. ರವೀಂದ್ರನಾಥ್ ಅಮೃತ ಮಹೋತ್ಸವ ಮಕ್ಕಳ ಕ್ರೀಡಾಂಗಣದ ಉದ್ಘಾಟನೆ ಹಾಗೂ ಎಸ್.ಎ. ರವೀಂದ್ರನಾಥ್ ಅವರ ಅಮೃತ ಮಹೋತ್ಸವದ ಅಭಿನಂದನಾ ಸಮಾರಂಭವು ಇಂದು ನಡೆಯಿತು.


ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಂಸದ ಜಿ.ಎಂ. ಸಿದ್ಧೇಶ್ವರ ಅವರು, ರವೀಂದ್ರನಾಥ್ ರಾಜಕೀಯವಾಗಿ ಅಧಿಕಾರದ ಉತ್ತುಂಗಕ್ಕೆ ಏರಿದ್ದರೂ ಸಹ ಜನರೊಂದಿಗೆ ಎಷ್ಟು ನಿಕಟವಾಗಿ ಸಂಬಂಧವನ್ನು ಹೊಂದಿದ್ದರು ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬಹುದಾಗಿದೆ ಎಂದರು.

ಗ್ರಾಮ ಪಂಚಾಯ್ತಿ ಸದಸ್ಯರಾಗಿ, ಡಿ.ಸಿ.ಸಿ. ಬ್ಯಾಂಕ್ ನಿರ್ದೇಶಕರಾಗಿ, 5 ಬಾರಿ ಶಾಸಕರಾಗಿ, 7 ವರ್ಷ ಸಚಿವರಾಗಿ ಕಾರ್ಯನಿರ್ವಹಿಸಿದ್ದರೂ, ಸಹ ಇಂದಿಗೂ ಎಸ್.ಎ. ರವೀಂದ್ರನಾಥ್ ಅವರು ತಮ್ಮ ಗ್ರಾಮೀಣ ಸೊಗಡಿನ ವ್ಯಕ್ತಿತ್ವವನ್ನು ಬಿಟ್ಟಿಲ್ಲ ಎಂದು ಹೇಳಿದರು.

ಕ್ರೀಡಾಂಗಣದ ಆವರಣದಲ್ಲಿ ನಿರ್ಮಿಸಲಾಗಿರುವ ಧ್ಯಾನಸ್ಥ ಶಿವನ ಪುತ್ಥಳಿಯನ್ನು ಉದ್ಘಾಟಿಸಿ ಮಾತನಾಡಿದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದಕ್ಷಿಣ ಪ್ರಾಂತ್ಯದ ಸಹಕಾರ್ಯವಾಹಕ ಪಟ್ಟಾಭಿರಾಮ್ ಅವರು, ಒಂದು ಪ್ರದೇಶದ ಬದುಕು ಸುಸಂಸ್ಕೃತ ಎನ್ನಿಸಿಕೊಳ್ಳಬೇಕಾದರೆ ಅಲ್ಲಿನ ಪ್ರಜ್ಞಾವಂತ ಪ್ರಜೆಗಳು ವಿವಿಧ ಕ್ಷೇತ್ರಗಳಲ್ಲಿ ಸಮಾಜದ ಒಳಿತಿಗಾಗಿ ದುಡಿಯಬೇಕಾಗುತ್ತದೆ ಎಂದರು.

ರಾಜಕೀಯ ಕ್ಷೇತ್ರವಿರಲಿ, ಸಮಾಜಸೇವಾ ಕ್ಷೇತ್ರವಿರಲಿ, ಶಿಕ್ಷಣ ಕ್ಷೇತ್ರವಿರಲಿ ಪ್ರತಿಯೊಬ್ಬರೂ ತಮ್ಮ ಸೇವೆಯನ್ನು ಸಮಾಜಕ್ಕಾಗಿ ಅರ್ಪಿಸಬೇಕಾಗುತ್ತದೆ. ದೀರ್ಘಕಾಲ ನೆನಪಲ್ಲಿ ಉಳಿಯುವ, ಸಮಾಜ ಹೆಮ್ಮೆ ಪಡುವಂತಹ ಸತ್ಕಾರ್ಯಗಳು ವಿದ್ಯಾಸಂಸ್ಥೆಗಳಿಂದ ಆಗಬೇಕು ಎಂದು ಆಶಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ರಾಜಕಾರಣದಲ್ಲಿ 3 ದಶಕಗಳ ಕಾಲ ಶಾಸಕರಾಗಿ, ಸಚಿವನಾಗಿ ಅಧಿಕಾರವನ್ನು ಅನುಭವಿಸಿದ್ದೇನೆ. ಆದರೆ ಅಧಿಕಾರವನ್ನು ಯಾವತ್ತೂ ಸ್ವಾರ್ಥಕ್ಕಾಗಿ, ಲಾಭದ ಉದ್ದೇಶಕ್ಕಾಗಿ ಬಳಕೆ ಮಾಡಿಕೊಂಡಿಲ್ಲ.



ಎಷ್ಟೇ ಆಮಿಷಗಳು ಬಂದಿದ್ದರೂ ಪಕ್ಷ ನಿಷ್ಠೆಯಿಂದ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದ್ದೇನೆ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶ್ರೀ ಸೋಮೇಶ್ವರ ವಿದ್ಯಾಲಯದ ಕಾರ್ಯದರ್ಶಿ ಕೆ.ಎಂ. ಸುರೇಶ್, ನಮ್ಮ ಮತ್ತು ಎಸ್.ಎ. ರವೀಂದ್ರನಾಥ್‌ರವರ ಸಂಬಂಧ ಸುಮಾರು 40 ವರ್ಷಗಳದ್ದು. ಅವರು ರಾಜಕೀಯವಾಗಿ, ಸಾಮಾಜಿಕವಾಗಿ ಸಲ್ಲಿಸಿರುವ ಸೇವೆಗಾಗಿ ನಾವು ಹೊಸದಾಗಿ ನಿರ್ಮಿಸಿರುವ ಮಕ್ಕಳ ಕ್ರೀಡಾಂಗಣಕ್ಕೆ ಅವರ ಹೆಸರನ್ನಿಡುವ ಮೂಲಕ ಗೌರವವನ್ನು ಸಲ್ಲಿಸಿದ್ದೇವೆ ಎಂದರು. ಕ್ರೀಡಾಂಗಣದ ಆವರಣದಲ್ಲಿರುವ ಭಾರತ ಮಾತೆಯ ಭಾವಚಿತ್ರವನ್ನು ವಿಧಾನ ಪರಿಷತ್ ಸದಸ್ಯ ಮಾಜಿ ಎ.ಎಚ್. ಶಿವಯೋಗಿಸ್ವಾಮಿ ನೆರವೇರಿಸಿದರು.

**ಹಳ್ಳಿಯ ಸೊಗಡಿನ ವ್ಯಕ್ತಿ ಎಸ್.ಎ. ರವೀಂದ್ರನಾಥ್ - ಜಿ.ಎಂ.ಸಿದ್ದೇಶ್ವರ**

ಎಸ್.ಎ. ರವೀಂದ್ರನಾಥ್ ಅವರ ಜೀವನದ ಪ್ರಮುಖ ಘಟನೆಗಳನ್ನು ದಾಖಲಿಸಿರುವ ಪುಸ್ತಕದ ಮುಖಪುಟವನ್ನು ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ಬಿಡುಗಡೆ ಮಾಡಿದರು.

ಮುಂಬರುವ ಫೆಬ್ರವರಿ ತಿಂಗಳಲ್ಲಿ ಪುಸ್ತಕ ಬಿಡುಗಡೆಗೆ ಸಿದ್ಧವಾಗಲಿದ್ದು, ಪುಸ್ತಕವನ್ನು ಪತ್ರಕರ್ತ ಯಳನಾಡು ಮಂಜು ಮತ್ತು ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ ಸಿದ್ಧಪಡಿಸುತ್ತಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಸೋಮೇಶ್ವರ ವಿದ್ಯಾಲಯದ ಆಡಳಿತ ಮಂಡಳಿಯ ಅಧ್ಯಕ್ಷ ಹೆಚ್.ಆರ್. ಅಶೋಕರೆಡ್ಡಿ ವಹಿಸಿದ್ದರು.

ಕು|| ರಮ್ಯಾ ಕೆ.ಎಸ್., ಬಾಲಪ್ರತಿಭೆ ಅವರು ಎಸ್.ಎ. ರವೀಂದ್ರನಾಥ್‌ರವರ ಕುರಿತಾಗಿ ಅಭಿನಂದನಾ ನುಡಿಗಳ ಮೂಲಕ ಗೌರವ ಸಮರ್ಪಿಸಿದರು.

ಶಿವಸ್ತುತಿಯ ಮೂಲಕ ವಿದ್ಯಾಲಯದ ಶಿಕ್ಷಕಿಯರಾದ ಹೇಮಾ ಬಿ. ಮತ್ತು ರೇಖಾ ಎಂ. ಪ್ರಾರ್ಥನೆ ನೆರವೇರಿಸಿದರು.

ಮುಖ್ಯ ಅತಿಥಿಗಳಾಗಿ ಮಹಾಪೌರ ಬಿ.ಜೆ. ಅಜಯ್‌ಕುಮಾರ್, ಮಾಜಿ ಶಾಸಕ ಎಂ. ಬಸವರಾಜ ನಾಯ್ಕ, ಮಹಾನಗರ ಪಾಲಿಕೆ ಸದಸ್ಯರುಗಳಾದ ಕೆ.ಎಂ. ವೀರೇಶ್, ಪ್ರಸನ್ನಕುಮಾರ್, ಬಿಜೆಪಿ ಜಿಲ್ಲಾ ಪರಿಶಿಷ್ಟ ಜಾತಿ ಮೋರ್ಚಾ ಅಧ್ಯಕ್ಷ ಎನ್.ಹನುಮಂತನಾಯ್ಕ, ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಹರೀಶ್ ಬಾಬು, ಮುಖ್ಯ ಶಿಕ್ಷಕಿಯರಾದ ಎನ್. ಪ್ರಭಾವತಿ, ಪಿ.ಹೆಚ್. ವೀಣಾ, ಡಿಡಿಪಿಐ ಪರಮೇಶ್ವರಪ್ಪ, ಬಿಇಓ ಸಿದ್ದಪ್ಪ, ಯಲ್ಲಮ್ಮ, ರಕ್ಷಣಾ ವೇದಿಕೆಯ ಶಿವಕುಮಾರ್, ಶಿಕ್ಷಕಿಯರಾದ ಗಾಯತ್ರಿ, ಪಿ. ಮಾಲಾ, ಶಿಕ್ಷಕ ಶಿವಾನಂದ ಮತ್ತಿತರರು ಉಪಸ್ಥಿತರಿದ್ದರು.

## ಕೃಷಿ ಟಾರ್ಪಾಲಿನ್ಸ್ ಮಾರಾಟ ಮಳಿಗೆ ಆರಂಭ



ದಾವಣಗೆರೆ, ನ.27- ಹರಿಹರ ತಾಲ್ಲೂಕು ಹನಗವಾಡಿಯ ಕೃಷಿ ಆಗ್ರೋ ಟೆಕ್ಸ್ ನ ಕೃಷಿ ಟಾರ್ಪಾಲಿನ್ಸ್ ನೂತನ ತಯಾರಕರ ಮಾರಾಟ ಮಳಿಗೆಯು ನಗರದಲ್ಲಿ ಇಂದಿನಿಂದ ಶುಭಾರಂಭಗೊಂಡಿತು.

ಜಡೆ ಸಂಸ್ಥಾನ ಮಠದ ಶ್ರೀ ಮಹಾಂತ ಸ್ವಾಮೀಜಿ, ಮೂಡಿಯ ಶಿವಲಿಂಗೇಶ್ವರ ವಿರಕ್ತಮಠದ ಶ್ರೀ ಸದಾಶಿವ ಸ್ವಾಮೀಜಿ ಪಾಲ್ಗೊಂಡು ಮಳಿಗೆಗೆ ಪೂಜೆ ನೆರವೇರಿಸಿ ಶುಭಾಶೀರ್ವಾದ ಮಾಡಿ ಹಾರೈಸಿದರು.

ಹರಿಹರದ ಹನಗವಾಡಿಯಲ್ಲಿ 6 ವರ್ಷಗಳ ಹಿಂದೆ ಕೃಷಿ ಆಗ್ರೋ ಟೆಕ್ಸ್ ಹೆಸರಿನಲ್ಲಿ ಎಂ.ಪಿ. ವೀರಭದ್ರ ಹಾಗೂ ನಾಗರತ್ನ ಅವರ ಪಾಲುದಾರಿಕೆಯಲ್ಲಿ ಕೃಷಿ ಪರಿಕರಗಳ ತಯಾರಿಕಾ ಘಟಕ ಆರಂಭಿಸಿದ್ದು, ದಾವಣಗೆರೆಯಲ್ಲಿ ಅದರ ಮಾರಾಟ ಮಳಿಗೆ ಪ್ರಾರಂಭಿಸಲಾಗಿದೆ.

ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಉದ್ಯಮಿ ಬಿ.ಸಿ. ಉಮಾಪತಿ, ಮೇಯರ್ ಬಿ.ಜಿ. ಅಜಯ್‌ಕುಮಾರ್ ಮಳಿಗೆಗೆ ಭೇಟಿ ನೀಡಿ, ಶುಭ ಹಾರೈಸಿದ್ದಾರೆ. ಈ ಸಂದರ್ಭದಲ್ಲಿ ಮಳಿಗೆಯ ಮಾಲೀಕರ ಕುಟುಂಬದ ಸದಸ್ಯರಾದ ಎಂ.ಪಿ. ಗುರುಮೂರ್ತಿ, ಎಂ.ಪಿ. ಶಿವಮೂರ್ತಿ, ಧರ್ಮರಾಜ್, ಶಿವಕುಮಾರ್, ಲಿಂಗರಾಜ್ ಇದ್ದರು.

## ನಿವೃತ್ತರ ಮನೆಗೆ ಜೀವಿತ ಪ್ರಮಾಣ ಪತ್ರ







ದಾವಣಗೆರೆ, ಜ. 27 – ನಿವೃತ್ತ ನೌಕರರಿಗೆ ಜೀವಿತ ಪ್ರಮಾಣ ಪತ್ರವನ್ನು ಅವರ ಮನೆ ಬಾಗಿಲಿಗೆ ತಲುಪಿಸುವ ಕಾರ್ಯವನ್ನು ಅಂಚೆ ಇಲಾಖೆ ಆರಂಭಿಸಿದೆ.

ಅಂಚೆ ಇಲಾಖೆಯ ಪೋಸ್ಟಲ್ ಪೇಮೆಂಟ್ ಬ್ಯಾಂಕ್ ಮೂಲಕ ಅಂಚೆ ಸಿಬ್ಬಂದಿ ಮನೆ ಬಾಗಿಲಿಗೆ ಜೀವಿತ ಪ್ರಮಾಣ ಪತ್ರವನ್ನು ಮೈಕ್ರೋ ಎ.ಟಿ.ಎಂ. ಮೂಲಕ ವಿತರಿಸುತ್ತಿದ್ದಾರೆ. ಇದರಿಂದಾಗಿ ಪಿಂಚಣಿದಾರರು ಬ್ಯಾಂಕ್ ಎದುರು ಸರದಿಯಲ್ಲಿ ನಿಂತು ಫಾರಂ ಭರ್ತಿ ಮಾಡಿ ಜೀವಿತ ಪ್ರಮಾಣ ಪತ್ರ ಪಡೆಯಲು ಪಡುತ್ತಿದ್ದ ಕಷ್ಟ ತಪ್ಪುತ್ತದೆ ಎಂದು ಚಿತ್ರದುರ್ಗ ಅಂಚೆ ಅಧೀಕ್ಷಕ ವಿರುಪಾಕ್ಷಪ್ಪ ತಿಳಿಸಿದ್ದಾರೆ.

ಅಂಚೆ ಇಲಾಖೆಯ ವಿಶಾಲವಾದ ಜಾಲ ವ್ಯವಸ್ಥೆ ಮತ್ತು ಎಲ್ಲೆಡೆ ತಲುಪುವ ಪೋಸ್ಟ್‌ಮೆನ್‌ಗಳು ಬಯೋಮೆಟ್ರಿಕ್ ಮೂಲಕ ಹೆಬ್ಬೆಟ್ಟಿನ ಮಾದರಿ ಸಂಗ್ರಹಿಸಿ ಖಾತೆ ಲಿಂಕ್ ಮಾಡುತ್ತಾರೆ. ನಂತರ ಡಿಜಿಟಲ್ ಪ್ರಮಾಣ ಪತ್ರವನ್ನು ಬ್ಯಾಂಕಿಗೆ ಕಳಿಸಲಾಗುತ್ತದೆ. ಈ ಪ್ರಕ್ರಿಯೆಗೆ 70 ರೂ.ಗಳ ಶುಲ್ಕ ವಿಧಿಸಲಾಗುತ್ತದೆ. ಹೆಚ್ಚಿನ ಮಾಹಿತಿಯನ್ನು ಪ್ರದೇಶದ ಪೋಸ್ಟ್‌ಮೆನ್‌ಗಳ ಮೂಲಕ ಪಡೆಯಬಹುದಾಗಿದೆ ಎಂದು ವಿರೂಪಾಕ್ಷಪ್ಪ ತಿಳಿಸಿದ್ದಾರೆ.

## ಮುಂಬೈ ದಾಳಿಯ ಹುತಾತ್ಮ ಯೋಧರಿಗೆ ನಮನ



ದಾವಣಗೆರೆ, ನ.27- ನಗರದ ಹೊಂಡದ ವೃತ್ತದಲ್ಲಿಂದು ಸಂಜೆ ಜಿಲ್ಲಾ ಬಿಜೆಪಿ ದಕ್ಷಿಣ ಯುವ ಮೋರ್ಚಾ ವತಿಯಿಂದ ಮುಂಬೈ ದಾಳಿಯಲ್ಲಿ ವೀರ ಮರಣವನ್ನಪ್ಪಿದ ಭಾರತೀಯ ಯೋಧರಿಗೆ ಭಾವಪೂರ್ಣ ಶ್ರದ್ಧಾಂಜಲಿ ಹಾಗೂ ನಮನ ಸಲ್ಲಿಸಿ ತ್ಯಾಗ-ಬಲಿದಾನವನ್ನು ಸ್ಮರಿಸಲಾಯಿತು.

ಈ ಸಂದರ್ಭದಲ್ಲಿ ದಕ್ಷಿಣ ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಭಜರಂಗಿ, ಮಂಡಲ ಪ್ರಧಾನ ಕಾರ್ಯದರ್ಶಿ ರಾಜು ನೀಲಗುಂದ, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕಿರಣ್, ಗಣೇಶ್, ಕಾರ್ಯದರ್ಶಿ ಪ್ರದೀಪ್, ಉಪಾಧ್ಯಕ್ಷ ಅನಿಲ್, ಅಭಿಷೇಕ್, ಸದಸ್ಯರಾದ ಸಂತೋಷ್, ಚೇತನ್, ಯುವ ಮುಖಂಡರಾದ ಪ್ರವೀಣ್ ಜಾಧವ್, ಮಂಜು, ಗುರು ಸೋಗಿ, ನವೀನ್ ಕುಮಾರ್, ಮಹಾಂತೇಶ, ವಿರುಪಣ್ಣ, ಮಂಡಲ ಉಪಾಧ್ಯಕ್ಷ ಕಿಶೋರ್, ಕಾರ್ಯದರ್ಶಿ ಬಾಲರಾಜ್, ಟಿಂಕರ್ ಮಂಜಣ್ಣ ಮತ್ತು ದೇಶ ಪ್ರೇಮಿಗಳು ಭಾಗವಹಿಸಿದ್ದರು.

## ಸಿಮೆಂಟ್ ವ್ಯಾಪಾರಿ ಮಾದೇವ್ ಹಲ್ಲೆ ಪ್ರಕರಣ ಸಿಬಿಐಗೆ ವಹಿಸಲು ಆಗ್ರಹ

ದಾವಣಗೆರೆ, ನ.27- ನಗರದಲ್ಲಿ 2019ರ ಡಿಸೆಂಬರ್ 24 ರಂದು ಮಾರಣಾಂತಿಕವಾಗಿ ಹಲ್ಲೆಗೊಳಗಾಗಿ ನಿಧನರಾದ ಸಿಮೆಂಟ್ ವ್ಯಾಪಾರಿ ಮಾದೇವ್ ಪ್ರಕರಣವನ್ನು ಸಿಬಿಐ ತನಿಖೆಗೆ ಒಳಪಡಿಸುವಂತೆ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ಆಗ್ರಹಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪೊಲೀಸರು ರಾಜಕೀಯ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆಂಬ ಅನುಮಾನ ಮೂಡುತ್ತಿದೆ. ಹಲ್ಲೆ ಆರೋಪಿಗಳ ಮೇಲೆ ಕ್ರಮ ಕೈಗೊಳ್ಳಲು ಸಾಧ್ಯವಾಗದೇ ಇದ್ದರೆ. ಪ್ರಕರಣವನ್ನು ಕೂಡಲೇ ಸಿಬಿಐ ತನಿಗೆಗೆ ಒಪ್ಪಿಸಲಿ ಎಂದು ಹೇಳಿದರು.

**ಕೈ ಒತ್ತುವರಿ ದಾಖಲೆ ಸಹಿತ ಶೀಘ್ರ ಬಹಿರಂಗ:** ಕಾಂಗ್ರೆಸ್ ಅವಧಿಯಲ್ಲಿ ಸರ್ಕಾರಿ ಜಾಗ ಒತ್ತುವರಿ ನಡೆದಿಲ್ಲ ಎಂದು ಕಾಂಗ್ರೆಸ್ ನಾಯಕರು ಹೇಳಿಕೆ ನೀಡಿದ್ದಾರೆ. ದೂಡಾದಲ್ಲಿ ಕಾಂಗ್ರೆಸ್ ಅಧ್ಯಕ್ಷರಾದಾಗ ಎಲ್ಲಿ, ಎಷ್ಟು ಜಾಗ ಒತ್ತುವರಿಯಾಗಿದೆ ಎಂಬುದನ್ನು ಶೀಘ್ರವೇ ದಾಖಲೆ ಸಹಿತ ಬಹಿರಂಗ ಪಡಿಸುವುದಾಗಿ ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಟಿ. ವೀರೇಶ್, ಸದಸ್ಯ ಎಲ್.ಡಿ. ಗೋಣೆಪ್ಪ, ಮುಖಂಡರಾದ ಗೋಪಾಲರಾವ್ ಮಾನೆ, ಸೋಗಿ ಶಾಂತಕುಮಾರ್, ಆನಂದರಾವ್ ಶಿಂಧೆ, ನರೇಂದ್ರ ಕುಮಾರ್, ಟಿಂಕರ್ ಮಂಜಣ್ಣ, ಎಸ್.ಸಿ. ರಾಘವೇಂದ್ರ, ಪ್ರವೀಣ್ ಇತರರಿದ್ದರು.

## ನಿರ್ಧಾರ ಮುಂದೂಡಿದ್ದೇವೆ

**(3ನೇ ಪುಟದಿಂದ)** ಹೇರುತ್ತಿದ್ದವು. ಇದಕ್ಕೆ ಸ್ಪಂದಿಸಿದ ಮುಖ್ಯಮಂತ್ರಿಗಳು, ವೀರಶೈವ-ಲಿಂಗಾಯತ ಸಮುದಾಯವನ್ನು ಹಿಂದುಳಿದ ವರ್ಗಕ್ಕೆ ಸೇರಿಸಲು ತೀರ್ಮಾನ ಕೈಗೊಂಡಿದ್ದರು.

ಕಾನೂನು ತಜ್ಞರು ಮತ್ತು ನಮ್ಮ ಸಹೋದ್ಯೋಗಿಗಳು, ಇದು ತರಾತುರಿಯಲ್ಲಿ ಆಗದ ಕೆಲಸ ಎಂದು ಸಲಹೆ ಮಾಡಿದ ನಂತರ ವಿಷಯವನ್ನು ಮುಂದಕ್ಕೆ ಹಾಕಲಾಯಿತು ಎಂದರು.

ರಾಜ್ಯದಲ್ಲಿನ ಹಿಂದುಳಿದ ವರ್ಗದ ಮೀಸಲಾತಿ ಪಟ್ಟಿಗೆ ಈ ಸಮುದಾಯವನ್ನು ಸೇರಿಸುತ್ತಿಲ್ಲ ಎಂದು ಸ್ಪಷ್ಟಪಡಿಸಿದ ಅವರು, ಕೇಂದ್ರ ಸರ್ಕಾರದ ಮೀಸಲಾತಿ ಪಟ್ಟಿಯಲ್ಲಿ ಈ ದೊಡ್ಡ ಸಮಾಜಕ್ಕೂ ಅವಕಾಶ ಕಲ್ಪಿಸಿ ಎಂದು ಶಿಫಾರಸ್ಸು ಮಾಡಲು ಮುಂದಾಗಿದ್ದೆವು ಎಂದು ಮಾಧುಸ್ವಾಮಿ ಹೇಳಿದ್ದಾರೆ.

ವೀರಶೈವ-ಲಿಂಗಾಯತ ಸಮುದಾಯದ ಜೊತೆಗೆ ಒಕ್ಕಲಿಗೆ ಸಮುದಾಯದ ಕುಂಚಿಟಿಗ, ಸರ್ಪ ಒಕ್ಕಲಿಗ ಅಲ್ಲದೆ, ಇನ್ನೂ ಕೆಲವು ಉಪಪಂಗಡಗಳು, ನಮ್ಮನ್ನೂ ಹಿಂದುಳಿದ ವರ್ಗಕ್ಕೆ ಸೇರಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಿದ್ದವು. ಇದನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಪಂಗಡಗಳನ್ನು ಸೇರಿಸಿ ಮತ್ತೊಮ್ಮೆ ಸುದೀರ್ಘವಾಗಿ ಚರ್ಚಿಸಿ, ಕೇಂದ್ರಕ್ಕೆ ಶಿಫಾರಸ್ಸು ಕಳುಹಿಸಲು ಸಭೆ ತೀರ್ಮಾನಿಸಿ ವಿಷಯವನ್ನು ಮುಂದೂಡಲಾಯಿತು ಎಂದು ಹೇಳಿದರು.

## ಕೊಟ್ಟೂರಿನಲ್ಲಿ ಅಭಿವೃದ್ಧಿ ಯೋಜನೆ



**(3ನೇ ಪುಟದಿಂದ)** ಅವರಿಗೆ ನಿಜವಾದ ಜನತೆಯ ಕಾಳಜಿ ಇದ್ದರೆ ಅನುದಾನವನ್ನು ಸರ್ಕಾರದ ಮೇಲೆ ಒತ್ತಡ ಹೇರಿ ತರಲಿ ಎಂದು ಅವರು ಸವಾಲು ಹಾಕಿದರು.

ಮುಂಬರುವ ದಿನಗಳಲ್ಲಿ ಕೊಟ್ಟೂರು ಪಟ್ಟಣಕ್ಕೆ ಸರ್ಕಾರಿ ಪದವಿ ಕಾಲೇಜು ಮಂಜೂರು ಮಾಡಲು ಸರ್ಕಾರದ ಮೇಲೆ ಒತ್ತಡ ಹೇರಿ ತರುತ್ತೇನೆ. ಒಳ ಚರಂಡಿ ಯೋಜನೆಗೆ ಅನುಮೋದನೆ ದೊರಕಿಸುವುದು, ಪಟ್ಟಣವನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಮತ್ತಷ್ಟು ಒತ್ತಡ ಹೇರುತ್ತೇನೆ ಎಂದು ಭರವಸೆ ನೀಡಿದರು.

## ವಿಶೇಷ ಮೀಸಲು ಕಾನ್ಸ್‌ಟೇಬಲ್ ಪರೀಕ್ಷೆ

ದಾವಣಗೆರೆ, ನ. 27- ವಿಶೇಷ ಮೀಸಲು ಪೊಲೀಸ್ ಕಾನ್ಸ್‌ಟೇಬಲ್(ಬ್ಯಾಂಡ್ಸ್‌ಮೆನ್-ಪುರುಷ) ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವ 4480 ಅಭ್ಯರ್ಥಿಗಳಿಗೆ ನಾಡಿದ್ದು ದಿನಾಂಕ 29 ರ ಭಾನುವಾರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 12.30 ರವರೆಗೆ ಲಿಖಿತ ಪರೀಕ್ಷೆಯನ್ನು ನಗರದ ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗುವುದು.

ರೋಲ್ ಸಂಖ್ಯೆ 3400001 ರಿಂದ 3400480 ರವರೆಗೆ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿಯಲ್ಲಿ ಪರೀಕ್ಷೆ ನಡೆಯಲಿದೆ. ರೋಲ್ ಸಂಖ್ಯೆ 3400501 ರಿಂದ 3401000 ರವರೆಗೆ ಸೇಂಟ್ ಜಾನ್ಸ್ ಆಂಗ್ಲ ಮಾಧ್ಯಮ ಶಾಲೆ, 3401021 ರಿಂದ 3401460 ರವರೆಗೆ ಸಿದ್ದಗಂಗಾ ಪಿ.ಯು ಕಾಲೇಜು, 3401481 ರಿಂದ 3401940 ರವರೆಗೆ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು, 3401961 ರಿಂದ 3402460 ರವರೆಗೆ ಎ.ವಿ.ಕಮಲಮ್ಮ ಮಹಿಳಾ ಕಾಲೇಜು, 3402481 ರಿಂದ 3402980 ರವರೆಗೆ ಎ.ಆರ್.ಜಿ ಕಲಾ ಮತ್ತು ವಾಣಿಜ್ಯ ಕಾಲೇಜು, 3403001 ರಿಂದ 3403600 ರವರಗೆ ಶ್ರೀ ತರಳಬಾಳು ಜಗದ್ಗುರು ಸಂಯುಕ್ತ ಪದವಿಪೂರ್ವ ಕಾಲೇಜು, 3403621 ರಿಂದ 3404620 ರವರೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ.

ಅಭ್ಯರ್ಥಿಗಳು ಪ್ರವೇಶ ಪತ್ರಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದ್ದು, ಅಭ್ಯರ್ಥಿಗಳು ಪ್ರವೇಶ ಪತ್ರದಲ್ಲಿ ಸೂಚಿಸಿರುವ ಅಗತ್ಯ ದಾಖಲಾತಿಗಳೊಂದಿಗೆ ಲಿಖಿತ ಪರೀಕ್ಷಾ ಕೇಂದ್ರಕ್ಕೆ ನಿಗದಿತ ಸಮಯಕ್ಕಿಂತ 60 ನಿಮಿಷ ಮುಂಚಿತವಾಗಿ ಹಾಜರಾಗಬೇಕೆಂದು ಜಿಲ್ಲಾ ಪೊಲೀಸ್ ಅಧೀಕ್ಷಕ ಹನುಮಂತರಾಯ ತಿಳಿಸಿದ್ದಾರೆ.

## ನ್ಯಾ|| ಜಿನರಾಳಕರ್ ಅವರಿಗೆ ಬೀಳ್ಕೊಡುಗೆ



ದಾವಣಗೆರೆ, ನ.27 - ಜಿಲ್ಲಾ ಕೌಟುಂಬಿಕ ನ್ಯಾಯಾಲಯದ ನ್ಯಾಯಮೂರ್ತಿ ಜಿನರಾಳಕರ್ ಅವರು ಬಡ್ತಿ ಹೊಂದಿದ್ದು, ಮಡಿಕೇರಿ ಜಿಲ್ಲಾ ಪ್ರಧಾನ ನ್ಯಾಯಾಧೀಶರಾಗಿ ವರ್ಗಾವಣೆಗೊಂಡಿದ್ದು, ಜಿಲ್ಲಾ ವಕೀಲರ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಬೀಳ್ಕೊಡಲಾಯಿತು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಜಿನರಾಳಕರ್, ನನ್ನ ನ್ಯಾಯಾಂಗ ವೃತ್ತಿ ಜೀವನದಲ್ಲಿ ದಾವಣಗೆರೆಯನ್ನು ಎಂದಿಗೂ ಮರೆಯುವಂತಿಲ್ಲ. ಇಲ್ಲಿ ಮೂರೂವರೆ ವರ್ಷಗಳ ಕಾಲ ಸಂತೋಷದಿಂದ ನ್ಯಾಯಾಂಗ ಸೇವೆ ಸಲ್ಲಿಸಲು ವಕೀಲರ ಸಹಕಾರವೇ ಕಾರಣ ಎಂದರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಕೆ.ಬಿ. ಗೀತಾ ಅವರು ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದರು. ವಕೀಲರ ಸಂಘದ ಅಧ್ಯಕ್ಷ ಎನ್.ಟಿ. ಮಂಜುನಾಥ್ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಕಾನೂನು ಸೇವಾ ಪ್ರಾಧಿಕಾರದ ಕಾರ್ಯದರ್ಶಿ ಸಾಬಪ್ಪ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಚಂದ್ರಕಲಾ ಉಪಸ್ಥಿತರಿದ್ದರು.

ಸಭೆಯಲ್ಲಿ 1ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾದ ಕೆಂಗಬಾಲಯ್ಯ, 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ನಾಗಶ್ರೀ, ಜಿಲ್ಲಾ ಸರ್ಕಾರಿ ವಕೀಲರಾದ ವೈ.ಮಂಜಪ್ಪ ಕಾಕನೂರು ಭಾಗವಹಿಸಿದ್ದರು. ವಕೀಲರಾದ ಎಂ.ಎಂ.ಕಿಲ್ಲೇದಾರ್, ಆನಂದ್, ವಿನಯ್ ಕುಮಾರ್ ಸಾಹುಕಾರ್, ವಿಜಯೇಂದ್ರ, ಶ್ರೀಮತಿ ಮಂಜುಳಾ ಮಾತನಾಡಿದರು.

ವಕೀಲರ ಸಂಘದ ಉಪಾಧ್ಯಕ್ಷ ದಿವಾಕರ್ ಸ್ವಾಗತಿಸಿದರು, ಕಾರ್ಯದರ್ಶಿ ಬಿ.ಎಸ್.ಲಿಂಗರಾಜ್ ನಿರೂಪಿಸಿದರು. ಸಹ ಕಾರ್ಯದರ್ಶಿ ಬಸವರಾಜ್ ವಂದಿಸಿದರು.

## ಡಿ. 1 ರಿಂದ ಕ್ಷಯರೋಗ ಪತ್ತೆ ಆಂದೋಲನ

ದಾವಣಗೆರೆ, ನ.27- 2025 ರ ವೇಳೆಗೆ ದೇಶದಲ್ಲಿ ಕ್ಷಯರೋಗವನ್ನು ಕೊನೆಗಾಣಿಸಿ ಕ್ಷಯ ಮುಕ್ತ ಭಾರತ ಎಂದು ಘೋಷಿಸುವ ಗುರಿ ಹೊಂದಿದ್ದು, ಕ್ಷಯ ರೋಗಿಗಳ ಸಂಖ್ಯೆ ತಗ್ಗಿಸುವ ನಿಟ್ಟಿನಲ್ಲಿ ಸಕ್ರಿಯ ಕ್ಷಯರೋಗ ಪತ್ತೆ ಆಂದೋಲನ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ಡಿಸೆಂಬರ್ 1 ರಿಂದ 31 ರವರೆಗೆ ಹಮ್ಮಿಕೊಳ್ಳಲಾಗಿದೆ.

ಪ್ರಸ್ತುತ ಒಂದು ಲಕ್ಷ ಜನಸಂಖ್ಯೆಗೆ ಒಂದು ವರ್ಷಕ್ಕೆ ಅಂದಾಜು 194 ಕ್ಷಯರೋಗಿಗಳು ಚಿಕಿತ್ಸೆಗಾಗಿ ದಾಖಲಾಗುತ್ತಿದ್ದಾರೆ. ಈ ಸಂಖ್ಯೆಯನ್ನು 44 ಕ್ಕಿಂತ ಕಡಿಮೆಗೆ ಇಳಿಸಬೇಕಾಗಿದೆ.

ಜಿಲ್ಲೆಯಲ್ಲಿ ಡಿಸೆಂಬರ್ ತಿಂಗಳಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಕ್ಕೆ ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ.30 ರಷ್ಟು ಅಂದರೆ 4,94,203 ಜನಸಂಖ್ಯೆಯನ್ನು ಕ್ಷಯರೋಗದ ಅಪಾಯದ ಅಂಚಿನಲ್ಲಿರುವವರು ಎಂದು ಗುರ್ತಿಸಲಾಗಿದೆ. ಈ ಜನಸಂಖ್ಯೆಯನ್ನು ಸಮೀಕ್ಷೆಗೆ ಒಳಪಡಿಸಲಾಗುವುದು.

ಸಮೀಕ್ಷೆಗೆ ಒಳಪಡಿಸಿದಾಗ ರೋಗ ಲಕ್ಷಣಗಳುಳ್ಳ ವ್ಯಕ್ತಿಗಳನ್ನು ಶಂಕಿತ ಕ್ಷಯರೋಗಿಗಳೆಂದು ಪರಿಗಣಿಸಿ ಕಫ ಪರೀಕ್ಷೆಗೆ ಒಳಪಡಿಸಲಾಗುವುದು. ಕಾರ್ಯಕ್ರಮಕ್ಕೆ ಪಲ್ಸ್ ಪೋಲಿಯೋ ಮಾದರಿಯಲ್ಲಿ ತಂಡಗಳನ್ನು ರಚಿಸಲಾಗಿದ್ದು, ಜಿಲ್ಲೆಯಾದ್ಯಂತ ಒಟ್ಟು 888 ತಂಡಗಳು ಕಾರ್ಯನಿರ್ವಹಿಸಲಿವೆ.

ಪ್ರತಿ ತಂಡದಲ್ಲಿ ಒಬ್ಬರು ಆಶಾ ಅಥವಾ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಒಬ್ಬರು ಆರೋಗ್ಯ ಕಾರ್ಯಕರ್ತರು ಇರುತ್ತಾರೆ. ಪ್ರತಿ ನಾಲ್ಕು ತಂಡಗಳಿಗೆ ಒಬ್ಬರಂತೆ ಒಟ್ಟು 95 ಮೇಲ್ವಿಚಾರಕರು ಕರ್ತವ್ಯ ನಿರ್ವಹಿಸಲಿದ್ದಾರೆ.

ಕಫದ ಮಾದರಿಯಲ್ಲಿ ಕ್ಷಯರೋಗದ ಸೂಕ್ಷ್ಮಾಣು ಕಂಡುಬಂದರೆ 2 ದಿನಗಳಲ್ಲಿ ಚಿಕಿತ್ಸೆಯನ್ನು ಪ್ರಾರಂಭಿಸಲಾಗುವುದು. ತಂಡದ ಸದಸ್ಯರು ಮನೆ-ಮನೆಗಳಿಗೆ ನೀಡಿದ ಸಂದರ್ಭದಲ್ಲಿ ಸಾರ್ವಜನಿಕರು ಸೂಕ್ತ ಸಹಕಾರ ನೀಡಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಹಾಗೂ ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳು ತಿಳಿಸಿದ್ದಾರೆ.


# ಕನ್ನಡ ಅಭಿಮಾನ ಅರಿವಿನ ಮೂಲಕ ಹುಟ್ಟಬೇಕು

ದಾವಣಗೆರೆ, ನ.27- ಕನ್ನಡದ ಅಭಿಮಾನ ಅರಿವಿನ ಮೂಲಕ ಹುಟ್ಟಬೇಕು. ಅದು ಕೇವಲ ವಸ್ತುವಾಗಬಾರದು. ಹಾಡುವುದರಿಂದಾಗಲೀ ಅಥವಾ ಕನ್ನಡದ ಬಾವುಟ ಹಾರಿಸುವುದರಿಂದಾಗಲೀ ಅಥವಾ ಕನ್ನಡ ವಿರೋಧಿಗಳಿಗೆ ಮಸಿ ಬಳಿಯುವುದರಿಂದಾಗಲೀ ನಾವು ಕನ್ನಡವನ್ನು ಕಾಪಾಡುತ್ತೇವೆ ಎನ್ನುವುದು ಅರ್ಧ ಸತ್ಯ ಮಾತ್ರ ಎಂದು ಡಾ. ದಾದಾಪೀರ್ ನವಿಲೇಹಾಳ್ ತಿಳಿಸಿದರು.

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಹಮ್ಮಿಕೊಂಡಿರುವ ಅಂತರ್ಜಾಲದ ಮೂಲಕ ಕನ್ನಡ ನುಡಿಹಬ್ಬ ಕಾರ್ಯಕ್ರಮದ 25ನೇ ದಿನದ ಉಪನ್ಯಾಸದಲ್ಲಿ 'ನನ್ನ ಅರಿವಿನ ಭಾಷೆಯಾಗಿ ಕನ್ನಡ' ಎಂಬ ವಿಷಯ ಕುರಿತಾಗಿ ಮಾತನಾಡಿದರು.

ಕನ್ನಡದ ರಕ್ಷಣೆ ವಾಸ್ತವವಾಗಿ ಕನ್ನಡವನ್ನು ಸೃಜನಶೀಲವಾಗಿ ಬಳಸುವುದರ ಮೂಲಕ ಕನ್ನಡವನ್ನು ನಾವು ಕಟ್ಟಬೇಕಾಗಿದೆ. ಸೃಜನಶೀಲತೆ ಅಂತಿಮವಾಗಿ ಒಂದು ತಾತ್ವಿಕ ಅರಿವನ್ನು ರೂಪಿಸಬೇಕಾದಂತಹ ಮತ್ತು ಈಗಾಗಲೇ ಇರುವ ಅರಿವನ್ನು ಹೆಚ್ಚು ಹೆಚ್ಚು ಹರಡುವ ಮೂಲಕ ಅದು ಸಾಧ್ಯವಾಗಬೇಕು ಎಂದು ತಿಳಿಸಿದರು.

ಕನ್ನಡ ಸಾಹಿತ್ಯವನ್ನು, ಕನ್ನಡ ಪರಂಪರೆಯನ್ನು ಮತ್ತೆ ಮತ್ತೆ ನಾವು ಪರಿಭಾವಿಸಬೇಕು, ಪರಿಶೀಲನೆ ಮಾಡಬೇಕು, ಅನುಸಂಧಾನಗೊಳಿಸಬೇಕು. ಅಂದರೆ ನಾವು ಈ ಸಾಹಿತ್ಯವನ್ನು ಮತ್ತು ಕಲೆಯ ಚರಿತ್ರೆ ಮತ್ತು ವಾಸ್ತುಶಿಲ್ಪದ ಎಲ್ಲ ಬಗೆಯ ಅರಿವನ್ನು ಇಟ್ಟುಕೊಂಡು ಮುಂದುವರೆಯಬೇಕಾಗಿದೆ ಎಂದರು.



> ಭಾಷೆ ತನ್ನಷ್ಟಕ್ಕೆ ತಾನು ಸಮರ್ಥ ಮತ್ತು ಸಮೃದ್ಧವಾಗಿದೆ. ಆದರೆ ಅದರಿಂದ ಕಲಿಯಬೇಕಾಗಿರುವುದು ನಾವು. ಭಾಷೆಯ ಬಗೆಗಿನ ಅರಿವು ಒಂದು ಸಂಸ್ಕೃತಿಯ ಅರಿವಿನ ಪ್ರಶ್ನೆಯಾಗಿದೆ. ನಮ್ಮ ದೇಶ, ನಮ್ಮ ನಾಡು ಬಹು ಸಂಸ್ಕೃತಿಯ ನೆಲೆವೀಡಾಗಿದೆ. ಅದಕ್ಕೆ ಕುವೆಂಪುರವರು ಹೇಳಿರುವುದು 'ಜೈ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ'. ಇಲ್ಲಿ ಎಲ್ಲ ಭಾಷಿಕರು ಭಾರತದ ಮಕ್ಕಳು. ಆ ಮಕ್ಕಳಲ್ಲಿ ಕರ್ನಾಟಕವು ಕೂಡ ಒಂದು. ಕರ್ನಾಟಕವನ್ನು ಅರಿವಿನ ಮೂಲಕವೇ ನಮ್ಮಲ್ಲಿ ಅಳವಡಿಸಿಕೊಳ್ಳಬೇಕಾದಂತಹ ಅವಶ್ಯಕತೆ ಇದೆ
>
> **- ಡಾ. ದಾದಾಪೀರ್ ನವಿಲೇಹಾಳ್**

ನಮ್ಮ ಬಹುಮುಖ್ಯ ಸಂಪತ್ತು ಯಾವುದೆಂದರೆ ಅದು ವಿವೇಕ. ಅದು ನನ್ನೊಳಗಿನ ಅರಿವನ್ನು ಎಚ್ಚರಗೊಳಿಸುವಂತಹ ಭಾಷೆಯ ಮೂಲಕವೇ ಹುಟ್ಟಬಹುದಾದಂತಹ ಅಸ್ಮಿತೆ ಅದು ಎಂದು ತಿಳಿಸಿದರು.

ಕನ್ನಡವನ್ನು ಉಳಿಸಬೇಕಾದಂತಹ ಮತ್ತು ಗಟ್ಟಿಗೊಳಿಸಬೇಕಾದಂತಹ ಹೊಣೆಯನ್ನು ಹೊತ್ತು ಕೊಳ್ಳುವವರು ಕೃಷಿಯ ಮೂಲದ ಜಾನಪದಕ್ಕೆ ಹೋಗದ ಹೊರತು, ಕನ್ನಡವನ್ನು ಮತ್ತೆ ಮತ್ತೆ ಕಟ್ಟಿ ಕೊಡಲಿಕ್ಕೆ ಸಾಧ್ಯವಿಲ್ಲ ಎಂದು ತಿಳಿಸಿದರು.

ಜಗತ್ತಿನ ಯಾವ ಭಾಷೆಯಾದರೂ ಜ್ಞಾನವನ್ನು ಕೊಡುತ್ತದೆ. ಯಾವ ಭಾಷೆಯಾದರೂ ಮಾಹಿತಿಯನ್ನು ಕೊಡುತ್ತದೆ. ಆದರೆ ಅರಿವನ್ನು ಕೊಡುವುದು ಮಾತ್ರ ನಮ್ಮ ಮಾತೃಭಾಷೆ ಎಂದು ತಿಳಿಸುತ್ತಾ, ಅರಿವಿನ ಭಾಷೆಯಾಗಿ ಕನ್ನಡ ಎನ್ನುವ ವಿಷಯವನ್ನು ಕುರಿತಂತೆ ಅವರು ಮಾತನಾಡಿದರು.

ಅಧ್ಯಕ್ಷೀಯ ನುಡಿಗಳನ್ನಾಡಿದ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಇಂದು ಉಪನ್ಯಾಸ ನೀಡಿದ ಡಾ. ದಾದಾಪೀರ್ ನವಿಲೇಹಾಳ್ ಅವರ ಮಾತುಗಳ ಕುರಿತು ಮಾತನಾಡುತ್ತಾ, ಅವರ ಪ್ರತಿಯೊಂದು ಮಾತುಗಳು ಕನ್ನಡ ಭಾಷೆಯ ನುಡಿಮುತ್ತುಗಳಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಭರತ-ಬಾಹುಬಲಿ ಅವರ ತ್ಯಾಗದ ಸಂಕೇತವನ್ನಲ್ಲದೇ, ಡಿ.ಎಸ್. ಕರ್ಕಿಯವರ ಕವನ 'ಹಚ್ಚೇವು ಕನ್ನಡದ ದೀಪದ' ಅರ್ಥೈಸುವಿಕೆ ಹಾಗೂ ಕುವೆಂಪು ಅವರ 'ಬಾರಿಸು ಕನ್ನಡ ಡಿಂಡಿಮ' ಕವನದ ಸಾಲುಗಳ ಅರ್ಥವನ್ನು ಮತ್ತು ಅವುಗಳ ಒಳಹರಿವನ್ನು ಅತ್ಯಂತ ಮನೋಜ್ಞವಾಗಿ ಕನ್ನಡ ಮನಸ್ಸುಗಳ ಹೃದಯವನ್ನು ತಟ್ಟುವ ಮಾತುಗಳನ್ನಾಡಿ ಕನ್ನಡಿಗರ ಮನ ಸೂರೆಗೊಂಡಿರುವುದನ್ನು ಕೊಂಡಾಡಿದರು.

ಸಿ.ಜಿ. ಜಗದೀಶ್ ಕೂಲಂಬಿ ಸ್ವಾಗತಿಸಿದರು. ದಾವಣಗೆರೆಯ ಬೆಳಕು ಜಾನಪದ ಕಲಾ ತಂಡದ ಶ್ರೀಮತಿ ರುದ್ರಾಕ್ಷಿ ಬಾಯಿ ಸಿ.ಕೆ. ಪುಟ್ಯಾ ನಾಯ್ಕ್ ನಾಡಗೀತೆ ಹಾಗೂ ಜಾನ ಪದ ಗೀತೆಗಳನ್ನು ಹಾಡುವ ಮೂಲಕ ಈ ಕಾರ್ಯಕ್ರಮಕ್ಕೆ ಮೆರಗನ್ನು ತಂದು ಕೊಟ್ಟರು.

## ಅನಿಲ ಸಂಪರ್ಕ ಕಾಮಗಾರಿಗೆ ಚಾಲನೆ

**(3ನೇ ಪುಟದಿಂದ)** ಇತರೆ ಡ್ಯಾಮೇಜ್ ಚಾರ್ಜ್‌ಗಳ ಡಿಮ್ಯಾಂಡ್ ನೋಟ್ ಪಾಲಿಕೆಯವರು ನೀಡಿದ ನಂತರ ಪೈಪ್ ಲೈನ್ ಕಾಮಗಾರಿ ಪ್ರಾರಂಭಿಸುವುದಾಗಿ ಸಭೆಯಲ್ಲಿ ಉಪಸ್ಥಿತರಿದ್ದ ಯೂನಿಸಾನ್ ಕಂಪನಿಯ ಅಡಿಷನಲ್ ಜನರಲ್ ಮ್ಯಾನೇಜರ್ ಸಂದೀಪ್ ಕುಮಾರ್ ಶರ್ಮಾ ಸಂಸದರಿಗೆ ತಿಳಿಸಿದರು.

ಗೇಲ್ ಕಂಪನಿಯ ನ್ಯಾಚುರಲ್ ಗ್ಯಾಸ್ ಪೈಪ್ ಲೈನ್‌ನ ಪ್ಲಾಂಟ್ ಚಿತ್ರದುರ್ಗದಲ್ಲಿದ್ದು, ಚಿತ್ರದುರ್ಗದಿಂದ ಸುಮಾರು 60 ಕಿ.ಮೀ ಉದ್ದದ ಪೈಪ್ ಲೈನ್ ಮಾಡಿ ದಾವಣಗೆರೆ ನಗರದ ಸಮೀಪ 1 ಎಕರೆ ಜಾಗದಲ್ಲಿ ಗ್ಯಾಸ್ ರಿಸೀವಿಂಗ್ ಸ್ಟೇಷನ್ ನಿರ್ಮಾಣ ಮಾಡಲಾಗುವುದು ಎಂದರು.

ಗ್ಯಾಸ್ ರಿಸಿವಿಂಗ್ ಸ್ಟೇಷನ್ ನಿರ್ಮಾಣ ಮಾಡಲು ಒಂದು ಎಕರೆ ಜಮೀನಿನ ಹುಡುಕಾಟದಲ್ಲಿರುವುದಾಗಿ ಸಂಸದರ ಗಮನ ಸೆಳೆದರು. ತಕ್ಷಣ ಜಿಲ್ಲಾಧಿಕಾರಿಯವರೊಂದಿಗೆ ದೂರವಾಣಿ ಮುಖಾಂತರ ಮಾತನಾಡಿದ ಸಂಸದರು, ಯೂನಿಸಾನ್ ಕಂಪನಿಯವರ ಜೊತೆ ಮಾತನಾಡಿ, ನಗರದ ಸಮೀಪ ಕಂಪನಿಯ ಬೇಡಿಕೆಗೆ ಅನುಸಾರ ಜಮೀನು ಒದಗಿಸುವ ಬಗ್ಗೆ ಕ್ರಮ ಕೈಗೊಳ್ಳಿ ಎಂದು ಸೂಚನೆ ನೀಡಿದರು. ಜಮೀನು ಲಭ್ಯತೆ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಹೆದ್ದಾರಿ ಪಕ್ಕದಲ್ಲಿ ಪೈಪ್ ಲೈನ್ ಅಳವಡಿಸಲು ಅನುಮತಿ ನೀಡಿದ ತಕ್ಷಣ ಚಿತ್ರದುರ್ಗದಿಂದ ದಾವಣಗೆರೆ ನಗರಕ್ಕೆ ಪೈಪ್ ಲೈನ್ ಕಾಮಗಾರಿ ಪ್ರಾರಂಭಿಸುವುದಾಗಿ ಶರ್ಮಾ ತಿಳಿಸಿದರು.

ಒಟ್ಟಾರೆಯಾಗಿ ಜನವರಿಯಲ್ಲಿ ಕಾಮಗಾರಿಯನ್ನು ಪ್ರಾರಂಭಿಸಿ ಈ ಎರಡೂ ಬಡಾವಣೆಗಳಲ್ಲಿ ಕೆಲಸ ಪ್ರಾರಂಭವಾದ ತಕ್ಷಣ ಉಳಿದ ವಾರ್ಡುಗಳಿಗೆ ಅನುಮತಿ ಕೋರಿ ಮಹಾನಗರ ಪಾಲಿಕೆಗೆ ಮನವಿ ಸಲ್ಲಿಸಿದರೆ ಅನುಮತಿ ನೀಡುವುದಾಗಿ ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ತಿಳಿಸಿದರು.

ಸಭೆಯಲ್ಲಿ ಸಂಪರ್ಕಾಧಿಕಾರಿ ಸುನಿಲ್ ಪೂಜಾರಿ, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ ಉಪಸ್ಥಿತರಿದ್ದರು.

## ಕೂಡ್ಲಿಗಿ ವಿಜಯನಗರ ಜಿಲ್ಲೆಗೆ : ಸಂಭ್ರಮಾಚರಣೆ

**(3ನೇ ಪುಟದಿಂದ)** ಸ್ಪಂದಿಸಿದ್ದರ ಫಲವಾಗಿ ಇಂದು ಕೂಡ್ಲಿಗಿ ವಿಜಯನಗರ ಜಿಲ್ಲೆಗೆ ಸೇರಿದೆ ಎಂದರು.

ಕೂಡ್ಲಿಗಿ ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪಿ.ಶಿವರಾಜ ಮಾತ ನಾಡಿ, ಕೂಡ್ಲಿಗಿ ತಾಲ್ಲೂಕು ವಿಜಯನಗರ ಜಿಲ್ಲೆಗೆ ಸೇರಿ ಸುವ ಮೂಲಕ ರಾಜ್ಯ ಸಚಿವ ಸಂಪುಟ ಉತ್ತಮ ನಿರ್ಧಾರ ಕೈಗೊಂಡಿದೆ ಎಂದರು. ಬಿಜೆಪಿ ಹಿರಿಯ ಕೆ.ಎಚ್. ವೀರನಗೌಡ, ಮುಖಂಡ ಸೂರ್ಯಪಾಪಣ್ಣ, ಮಂಜುನಾಥ ನಾಯಕ, ರಾಘ ವೇಂದ್ರ, ಸೊಲ್ಲೇಶ್, ಸುರೇಶ್ ಕುಮಾರ್, ಪಿ.ಚಂದ್ರು, ಎಲ್.ಪವಿತ್ರಾ, ವಿವೇಕಾನಂದಸ್ವಾಮಿ, ಪ್ರಾಂಶುಪಾಲರಾದ ಕುಲ ಕರ್ಣಿ, ಮೈದಾನ ಗೆಳೆಯರ ಬಳಗದ ನಾಗರಾಜ, ಪ್ರಾಂಶುಪಾಲ ಅರವಿಂದ ಕುಲಕರ್ಣಿ, ಬಿಜೆಪಿ ತಾಲ್ಲೂಕು ಅಧ್ಯಕ್ಷ ಚನ್ನಪ್ಪ ಮತ್ತಿತರರು ಸಂಭ್ರ ಮಾಚರಣೆಯಲ್ಲಿದ್ದರು.

# ವಿಶ್ವವಿದ್ಯಾನಿಲಯಗಳು ಜ್ಞಾನ ಸಂಪನ್ನ ಕೇಂದ್ರಗಳು : ಡಾ|| ಈಶ್ವರಪ್ಪ ವಿಶ್ಲೇಷಣೆ

## ದಾವಣಗೆರೆ ವಿವಿಯಲ್ಲಿ ಕನ್ನಡ ವಿಭಾಗಕ್ಕೆ ಡಾ|| ಚಿಮೂ ಅವರ ಹೆಸರಿಡುವ ಕಾರ್ಯಕ್ರಮ



ದಾವಣಗೆರೆ,ನ.27- 'ವಿಶ್ವವಿದ್ಯಾಲಯಗಳು ಜ್ಞಾನ ಸಂಪನ್ನ ಕೇಂದ್ರಗಳಾಗಿದ್ದು, ಇಲ್ಲಿನ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ನಡೆದಾಡುವ ವಿಶ್ವಕೋಶಗಳಾಗಿದ್ದಾರೆ ಎಂದು ಬಾಪೂಜಿ ವಿದ್ಯಾಸಂಸ್ಥೆ ಶೈಕ್ಷಣಿಕ ಸಲಹೆಗಾರರಾದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪ್ರೊ. ಎಂ.ಜಿ. ಈಶ್ವರಪ್ಪ ಬಣ್ಣಿಸಿದರು.

ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಇಂದು ನಡೆದ 65ನೇ ಕನ್ನಡ ರಾಜ್ಯೋತ್ಸವ ಹಾಗೂ ಕನ್ನಡ ಅಧ್ಯಯನ ವಿಭಾಗಕ್ಕೆ ಡಾ.ಎಂ.ಚಿದಾನಂದ ಮೂರ್ತಿಯವರ ಹೆಸರಿಡುವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಶೇಷ ಉಪನ್ಯಾಸಕರಾಗಿದ್ದ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಜೆ.ಎಂ ನಾಗಯ್ಯ ಅವರು ಮಾತನಾಡಿ, ಡಾ. ಎಂ.ಚಿದಾನಂದ ಮೂರ್ತಿ ಅವರು ಕನ್ನಡ ಸಾಹಿತ್ಯ, ಶಾಸನ ಸಂಶೋಧನಾ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಿದರು.

ಚಿ.ಮೂ ಅವರು ವಿಜ್ಞಾನದ ಮೂಲ ವಿದ್ಯಾರ್ಥಿಯಾಗಿದ್ದರೂ ತೀ.ನಂಶ್ರೀ, ಕುವೆಂಪು, ಜಿ.ಎಸ್ ಶಿವರುದ್ರಪ್ಪನವರಿಂದ ಪ್ರಭಾವಕ್ಕೊಳಗಾಗಿ ಕನ್ನಡ ಸಾಹಿತ್ಯದ ಕಡೆಗೆ ಒಲವು ತೋರಿದರು.

ಇವರು ಕನ್ನಡ ನಾಡು, ನುಡಿಯ ಹೋರಾಟಕ್ಕಾಗಿ ಜೀವನವನ್ನೇ ಮುಡಿಪಾಗಿಟ್ಟರು. 'ಮೂರ್ತಿ ಚಿಕ್ಕದಾದರೂ, ಕೀರ್ತಿ ದೊಡ್ಡದು ಎಂಬ ನಾಣ್ಣುಡಿ ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ಅವರು ಮಾತನಾಡಿ, 'ನಾವೆಲ್ಲರೂ ಕನ್ನಡ ನಾಡು ನುಡಿಗೆ ಸೇವೆಗೆ ಕಂಕಣಬದ್ಧರಾಗಬೇಕು. ಪ್ರಾಧ್ಯಾಪಕರಿಗೆ ಅಧ್ಯಯನ, ಅಧ್ಯಾಪನ, ಸಂಶೋಧನೆ ಮತ್ತು ಪ್ರಕಟಣೆಗಳು ಜೀವನದ ಧ್ಯೇಯವಾಗಬೇಕೆಂದು ತಿಳಿಸಿದರು.

ಇದೇ ಸಂದರ್ಭದಲ್ಲಿ 2020ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ. ಎಂ.ಜಿ ಈಶ್ವರಪ್ಪ, ಆರ್. ತಿಪ್ಪೇಸ್ವಾಮಿ, ಎಚ್. ಷಡಾಕ್ಷರಪ್ಪ ಅವರನ್ನು ಸನ್ಮಾನಿಸಲಾಯಿತು.

ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಬಸವರಾಜ ಬಣಕಾರ ಸ್ವಾಗತಿಸಿದರು. ಕನ್ನಡ ಅಧ್ಯಯನ ವಿಭಾಗದ ಅಧ್ಯಕ್ಷ ಡಾ. ಕೆ. ಮಲ್ಲಿಕಾರ್ಜುನ ಪ್ರಾಸ್ತಾವಿಕವಾಗಿ ಮಾತನಾಡಿದರು. ಸನ್ಮಾನ ಕಾರ್ಯಕ್ರಮವನ್ನು ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ ಸಂಯೋಜನಾಧಿಕಾರಿ ಡಾ.ಹೆಚ್. ವಿಶ್ವನಾಥ ನಡೆಸಿಕೊಟ್ಟರು.

ಡಾ.ಭೀಮಾಶಂಕರ ಜೋಷಿ ನಿರೂಪಿಸಿದರು. ಡಾ.ಮಹಾಂತೇಶ ಪಾಟೀಲ ವಂದಿಸಿದರು. ಡಾ.ಬಸವರಾಜ ಬಿ. ಪರಿಚಯಿಸಿದರು.

ಪ್ರೊ.ಗೋಪಾಲ ಎಂ. ಅಡವಿರಾವ್ ಡಾ.ಜೆ.ಕೆ ರಾಜು, ಡಾ.ಗಾಯತ್ರಿ ದೇವರಾಜ್, ಡಾ. ವೆಂಕಟೇಶ, ಡಾ.ಎನ್.ಎಸ್ ಗುಂಡೂರ, ಡಾ. ಶಿವಕುಮಾರ ಕಣಸೋಗಿ, ಡಾ.ಜೋಗಿನಕಟ್ಟೆ ಮಂಜುನಾಥ, ಡಾ.ಜಯರಾಮಯ್ಯ, ಡಾ. ವಿಜಯಕುಮಾರ, ರೂಪೇಶ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಸಂವಿಧಾನದ ಆಶಯಗಳನ್ನು ಉಳಿಸಿ, ಗೌರವ ತರುವ ಹೊಣೆಗಾರಿಕೆ ನಮ್ಮದು

## ಜಗಳೂರು : ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ನ್ಯಾಯಾಧೀಶರಾದ ಜಿ. ತಿಮ್ಮಯ್ಯ



ಜಗಳೂರು, ನ.27- ಸಂವಿಧಾನದ ಆಶಯಗಳನ್ನು ಉಳಿಸಿ, ಗೌರವ ತರುವ ಹೊಣೆಗಾರಿಕೆ ನಮ್ಮದಾಗಬೇಕು ಎಂದು ಜೆಎಂಎಫ್ ಸಿ ಹಾಗೂ ಸಿವಿಲ್ ನ್ಯಾಯಾಧೀಶ ಜಿ. ತಿಮ್ಮಯ್ಯ ಸಲಹೆ ನೀಡಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹಾಗೂ ತಾಲ್ಲೂಕು ಆಡಳಿತ ಮತ್ತು ತಾಲ್ಲೂಕು ಪಂಚಾಯಿತಿ ಇವರುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿವಿಧ ದೇಶಗಳ ಸಂವಿಧಾನ ಅಧ್ಯಯನದೊಂದಿಗೆ ಸ್ವತಃ ನೋವುಂಡು ಅಭಿಮಾನದಿಂದ ರಚಿಸಿದ ಶ್ರೇಷ್ಠ ಗ್ರಂಥ ಸಂವಿಧಾನದ ಬಗ್ಗೆ ತಾತ್ಸಾರ ಬೇಡ. ಒಂದು ಕುಟುಂಬದಲ್ಲಿ ಭಿನ್ನಾಭಿಪ್ರಾಯಗಳು ಸಹಜವಾಗಿ ಬರುತ್ತವೆ. ಅಂತಹದರಲ್ಲಿ ದೇಶವೇ ಒಪ್ಪಿಕೊಂಡ ಸಂವಿಧಾನ ಗ್ರಂಥ ಎಲ್ಲರ ಒಗ್ಗಟ್ಟನ್ನು ಸಾಕ್ಷಿಕರಿಸುತ್ತದೆ ಎಂದು ತಿಳಿಸಿದರು.

ಸಂವಿಧಾನ ಅನುಷ್ಠಾನ ಮತ್ತು ಜಾರಿಗೊಳಿಸುವವರ ಮೇಲೆ ಅವಲಂಬಿತವಾಗಿದೆ, ರಚಿಸಿದವರ ಮೇಲಲ್ಲ. ಅಂದಿನ ಸಮಾಜದಲ್ಲಿ ಅವಮಾನ ಗಳನ್ನು ಅನುಭವಿಸಿ ಛಲದಿಂದ ಸಾಧನೆಗೈದ ಮಹಾತ್ಮ ಗಾಂಧಿ ಹಾಗೂ ಅಂಬೇಡ್ಕರ್ ಅವರು ಶ್ರೇಷ್ಠ ವ್ಯಕ್ತಿಗಳು ಎನಿಸಿಕೊಂಡಿದ್ದಾರೆ.

> **ಸಂವಿಧಾನಬದ್ಧ ಹಕ್ಕುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ದೇಶದ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡಬೇಕು.**
> **- ಡಾ.ನಾಗವೇಣಿ, ತಹಶೀಲ್ದಾರ್**

ಮನುಷ್ಯ ನಿಗೆ ಜ್ಞಾನದ ವಿದ್ವತ್ತುನಿಂದ ಗುರುತಿಸಿಕೊಳ್ಳುವ ಮನೋಭಾವನೆ ಮೈಗೂಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಎಲ್ಲಾ ಕಾನೂನುಗಳಿಗೆ ತಾಯಿ ಸಂವಿಧಾನ ವಾಗಿದ್ದು ಧರ್ಮಗಳ ಆಧಾರ, ಸಮಾಜವಾದ, ವ್ಯವಹಾರ, ಮನುಷ್ಯತ್ವ, ಸ್ಥಾನಮನ ಎಲ್ಲವನ್ನೂ ಒಳಗೊಂಡಿದ್ದು, ಏಕತೆ ಸಾರುವ ವೈಶಿಷ್ಟತೆ ನಮ್ಮ ಸಂವಿಧಾನ ಹೊಂದಿದೆ ಎಂದರು.

ತಹಶೀಲ್ದಾರ್ ಡಾ.ನಾಗವೇಣಿ ಮಾತನಾಡಿ, ಸಂವಿಧಾನ ಪ್ರಪಂಚಕ್ಕೆ ಮಾದರಿಯಾಗಿದೆ. ಸಂವಿಧಾನಬದ್ಧ ಹಕ್ಕುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ದೇಶದ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡಬೇಕು ಎಂದರು.

ಸಮಾರಂಭದಲ್ಲಿ ತಾಪಂ ಇಒ ಮಲ್ಲಾನಾಯ್ಕ, ಪಪಂ ಮುಖ್ಯಾಧಿಕಾರಿ ರಾಜು ಡಿ. ಬಣಕಾರ್, ವಕೀಲರ ಸಂಘದ ಹನುಮಂತಪ್ಪ ಪರಮೇಶ್ವರಪ್ಪ, ಬಸವರಾಜ್, ಕೆ.ಎಂ ಕರಿಬಸಯ್ಯ, ತಿಪ್ಪೇಸ್ವಾಮಿ ಟಿ, ಬಸವರಾಜ್, ಆರ್. ಓಬಳೇಶ್, ಡಿ. ಶ್ರೀನಿವಾಸ ಸೇರಿದಂತೆ ವಕೀಲರು ವಿವಿಧ ಇಲಾಖೆಗಳ ಸಿಬ್ಬಂದಿಗಳು ಭಾಗವಹಿಸಿದ್ದರು.

# ಪಾಕ್ : ಅತ್ಯಾಚಾರಿಗಳನ್ನು ನಪುಂಸಕಗೊಳಿಸಲು ಒಪ್ಪಿಗೆ

ಇಸ್ಲಾಮಾಬಾದ್, ನ. 27 – ಅತ್ಯಾಚಾರಿಗಳನ್ನು ರಸಾಯನಿಕಗಳ ಮೂಲಕ ನಪುಂಸಕಗೊಳಿಸುವ ಹಾಗೂ ಅತ್ಯಾಚಾರ ಪ್ರಕರಣಗಳ ತನಿಖೆಗೆ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವ ಸುಗ್ರೀವಾಜ್ಞೆಗಳಿಗೆ ಪಾಕಿಸ್ತಾನದ ಸಂಪುಟ ಒಪ್ಪಿಗೆ ನೀಡಿದೆ.

ಕೇಂದ್ರ ಕಾನೂನು ಸಚಿವ ಫರೋಗ್ ನಸೀಮ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಮಿತಿಯ ಸಭೆಯಲ್ಲಿ ಈ ಕ್ರಮಗಳಿಗೆ ಒಪ್ಪಿಗೆ ನೀಡಲಾಗಿದೆ ಎಂದು ಡಾನ್ ನ್ಯೂಸ್ ವರದಿ ಮಾಡಿದೆ.


ಅತ್ಯಾಚಾರ ಪ್ರಕರಣಗಳಲ್ಲಿ ದೋಷಿಗಳ ಒಪ್ಪಿಗೆ ಪಡೆದ ನಂತರ ಒಂದು ಬಾರಿ ಇಲ್ಲವೇ ಹಲವು ಬಾರಿ ತಪ್ಪು ಮಾಡಿದವರನ್ನು ರಾಸಾಯನಿಕಗಳ ಮೂಲಕ ನಪುಂಸಕಗೊಳಿಸಲು ನಿರ್ಧರಿಸಲಾಗಿದೆ.

ಅಂತರರಾಷ್ಟ್ರೀಯ ಕಾನೂನುಗಳ ಅನ್ವಯ ನಪುಂಸಕಗೊಳಿಸುವ ಮುಂಚೆ ದೋಷಿಗಳ ಒಪ್ಪಿಗೆ ಪಡೆಯುವ ಅಗತ್ಯವಿದೆ. ಒಪ್ಪಿಗೆ ಪಡೆಯದೇ ನಪುಂಸಕತೆಗೆ ಮುಂದಾದರೆ ಅದನ್ನು ದೋಷಿ ಉನ್ನತ ನ್ಯಾಯಾಲಯದಲ್ಲಿ ಪ್ರಶ್ನಿಸಬಹುದಾಗಿದೆ ಎಂದು ಕಾನೂನು ಸಚಿವ ನಸೀಮ್ ಹೇಳಿದ್ದಾರೆ.

ನಪುಂಸಕತೆಗೆ ಒಳಗಾಗಲು ದೋಷಿ ಒಪ್ಪದೇ ಹೋದರೆ ಆತನನ್ನು ಪಾಕಿಸ್ತಾನ ದಂಡ ಸಂಹಿತೆಯಡಿ ವಿಚಾರಣೆಗೆ ಒಳಪಡಿಸಲಾಗುವುದು. ಇದರ ಅನ್ವಯ ದೋಷಿಗೆ ಮರಣ ದಂಡನೆಯವರೆಗೂ ಶಿಕ್ಷೆಗೆ ಅವಕಾಶವಿದೆ ಎಂದವರು ತಿಳಿಸಿದ್ದಾರೆ.

ಆದರೂ, ನ್ಯಾಯಾಲಯಗಳು ನಪುಂಸಕತೆ ಇಲ್ಲವೇ ಶಿಕ್ಷೆ ನೀಡುವ ಬಗ್ಗೆ ನಿರ್ಧಾರ ತೆಗೆದುಕೊಳ್ಳಬಹುದು. ಸೀಮಿತ ಅವಧಿ ಇಲ್ಲವೇ ಜೀವಾವಧಿ ನಪುಂಸಕತೆಗೆ ನ್ಯಾಯಾಲಯ ನಿರ್ಧಾರ ತೆಗೆದುಕೊಳ್ಳಬಹುದು ಎಂದು ನಸೀಮ್ ಹೇಳಿದ್ದಾರೆ.

# ಪೊಲೀಸ್ ಇಲಾಖೆಗೆ 100 ಕೋಟಿ ಅನುದಾನ: ಸಿಎಂ ಭರವಸೆ



ಬೆಂಗಳೂರು, ನ. 27 - ಪೊಲೀಸ್ ಇಲಾಖೆ ಆಧುನೀಕರಣಕ್ಕೆ ಮುಂದಿನ ಬಜೆಟ್‌ನಲ್ಲಿ 100 ಕೋಟಿ ರೂ. ಅನುದಾನ ನೀಡುವುದಾಗಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಭರವಸೆ ನೀಡಿದ್ದಾರೆ.

ಮಡಿವಾಳದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಪೊಲೀಸ್ ಸಮುದಾಯ ಭವನ ಹಾಗೂ ನ್ಯಾಯ ವಿಜ್ಞಾನ ಪ್ರಯೋಗಾಲಯದ ನಿರ್ದೇಶನಾಲಯ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದ ಪೊಲೀಸ್ ವ್ಯವಸ್ಥೆ ಅತ್ಯುತ್ತಮವಾಗಿದೆ. ಇದನ್ನು ಇನ್ನಷ್ಟು ಸಶಕ್ತಗೊಳಿಸಲು ಸರ್ಕಾರ ಬದ್ಧವಾಗಿದೆ ಎಂದರು.

ಗೃಹ ಸಚಿವ ಬಸವರಾಜ ಬೊಮ್ಮಾಯಿ ಮಾತನಾಡಿ, ಸೈಬರ್ ಅಪರಾಧಗಳಲ್ಲಿ ಹಣ ಕಳೆದುಕೊಂಡವರು ದೂರವಾಣಿ ಕರೆ ಮಾಡಿದರೆ ಸಾಕು. ತಕ್ಷಣವೇ ಕೇಸು ದಾಖಲಿಸಿಕೊಂಡು ಅಪರಾಧ ಮಾಡಿದವರ ಖಾತೆಗಳನ್ನು ಜಪ್ತಿ ಮಾಡುವ ವಿನೂತನ ಪ್ರಯತ್ನವನ್ನು ರಾಜ್ಯ ಪೊಲೀಸರು ಕೈಗೆತ್ತಿಕೊಂಡಿದ್ದಾರೆ ಎಂದು ಹೇಳಿದರು.

ಮಾದಕ ವಸ್ತುಗಳ ವಿರುದ್ಧ ರಾಜ್ಯ ಸರ್ಕಾರ ಸಮರ ಸಾರಿದೆ, ಇದನ್ನು ಬೇರು ಸಮೇತ ಕಿತ್ತುಹಾಕುವ ಪ್ರಯತ್ನ ನಡೆದಿದೆ ಎಂದರು.

# ಪರಿಸರದ ಸ್ಥಿರತೆಗೆ ಮರ ಗಿಡಗಳೇ ಸಹಕಾರಿ



> **38ನೇ ವಾರ್ಡಿನ ಕಾಸಲ್ ಶ್ರೇಷ್ಠಿ ಉದ್ಯಾನವನದಲ್ಲಿನ ವನ ಮಹೋತ್ಸವದಲ್ಲಿ ನಗರ ಪಾಲಿಕೆ ಸದಸ್ಯ ಮಂಜುನಾಥ್ ಗಡಿಗುಡಾಳ್**

ದಾವಣಗೆರೆ, ನ.27- ನಗರದ ಎಂ.ಸಿ.ಸಿ. 'ಬಿ' ಬ್ಲಾಕ್ - 38ನೇ ವಾರ್ಡ್‌ನ ಕಾಸಲ್ ಶ್ರೇಷ್ಠಿ ಉದ್ಯಾನವನದಲ್ಲಿ (ಟ್ಯಾಂಕ್ ಪಾರ್ಕ್) ಆರ್. ಟಿ.ಇ. ಸಪ್ತಾಹದ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮಕ್ಕೆ ಮಹಾನಗರ ಪಾಲಿಕೆ ಸದಸ್ಯ ಜಿ.ಎಸ್. ಮಂಜುನಾಥ ಗಡಿಗುಡಾಳ್ ಅವರು ಇಂದು ಚಾಲನೆ ನೀಡಿದರು.

ನಂದ ವೆಂಕಟೇಶ್ ಆನೆಗುಂದಿ, ವೆಂಕಟೇಶ್ ಆನೆಗುಂದಿ, ಚೇತನ್ ಪಲ್ಲಾಗಟ್ಟೆ, ನಟರಾಜ್ ಬೆಳ್ಳೂಡಿ, ಡಿ. ಸುಹಾಶ್, ಸುಧೀರ್, ಅಭಿಷೇಕ್ ಶೇಟ್, ಮಧು ರೆಡ್ಡಿ, ಸುಹಾಸ್ ಎನ್, ಅವಿನಾಶ್ ಪಾಟೀಲ್, ಎಸ್. ಶ್ರೀನಿವಾಸ್, ಮಂಜುನಾಥ್ ಗಡಿಗುಡಾಳ್, ಸಂಧ್ಯಾ ಕಾರ್ತಿಕ್, ಮರಿಯಾ, ರಜನಿ, ವಿದ್ಯಾ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಸಿಗಳನ್ನು ನೆಟ್ಟರು.

ಈ ಸಂದರ್ಭದಲ್ಲಿ ಮಾತನಾಡಿದ ಮಂಜುನಾಥ್ ಗಡಿಗುಡಾಳ್, ಮುಂದಿನ ಪೀಳಿಗೆಗೆ ಪರಿಸರ ಉಳಿಸಿ, ಬೆಳೆಸಿಕೊಡಬೇಕಾದದ್ದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಪರಿಸರದ ಸ್ಥಿರತೆಗೆ ಮರಗಿಡಗಳೇ ಸಹಕಾರಿ. ಮಾನವ ಸೇರಿ ಅನೇಕ ಪ್ರಾಣಿ, ಪಕ್ಷಿ ಮುಂತಾದ ಜೀವಿಗಳು ಪರಿಸರವನ್ನು ಅವಲಂಬಿಸಿ ಜೀವಿಸುತ್ತವೆ. ಪರಿಸರದ ಯಾವುದೇ ಒಂದು ಕೊಂಡಿ ಕಳಚಿದರೆ ಮಾನವನ ಬದುಕು ದುಸ್ತರವಾಗುತ್ತದೆ. ಕೆಲವು ಅತಿ ಅನಿವಾರ್ಯ ಪರಿಸ್ಥಿತಿಯಲ್ಲಿ ಸಾರ್ವಜನಿಕ ಅನುಕೂಲತೆಗಾಗಿ ಮರ ಕಡಿಸುವ ಸಂದರ್ಭ ಎದುರಾಗುತ್ತದೆ. ಇದಕ್ಕೆ ಪರಿಸರವಾದಿಗಳು ವಿರೋಧಿಸಿದಾಗ ಅಲ್ಲಿ ಜರುಗಬೇಕಾದ ಅಭಿವೃದ್ಧಿ ಕುಂಠಿತವಾಗುತ್ತದೆ. ಒಂದು ಮರ ಕಡಿದರೂ ಹತ್ತು ಹಲವು ಸಸಿಗಳನ್ನು ನೆಟ್ಟು, ಪೋಷಿಸಿ, ಬೆಳೆಸಿ ವಾರ್ಡನ್ನು ಹಸಿರೀಕರಣ ಮಾಡಲಾಗಿದೆ.

ಈಗಾಗಲೇ ಹಿಂದೆ ನೆಟ್ಟಂತಹ ಸಸಿಗಳು ಬೆಳೆದು ನಿಂತಿವೆ ಹಾಗೂ ಹೊಸ ಸಸಿಗಳನ್ನು ನೆಟ್ಟು ಹಸಿರು ಪರಿಸರವನ್ನು ಬೆಳೆಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ವಾರ್ಡ್ ಸಂಪೂರ್ಣ ಹಸಿರಿನಿಂದ ಕೂಡಿರುವುದರಲ್ಲಿ ಸಂಶಯವಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.

# ಜೆಎಸ್‌ಡಬ್ಲ್ಯೂ ಕಂಪನಿಗೆ 2 ಸಾವಿರ ಎಕರೆ ಜಮೀನು ಮಾರುವ ಪ್ರಸ್ತಾವನೆ

> **ಸಂಪುಟ ಉಪ ಸಮಿತಿ ರಚನೆ**

ಬೆಂಗಳೂರು, ನ. 27 – ಬಳ್ಳಾರಿ ಜಿಲ್ಲೆಯಲ್ಲಿ ಜೆ.ಎಸ್.ಡಬ್ಲ್ಯೂ. ಕಂಪನಿಗೆ 2 ಸಾವಿರ ಎಕರೆ ಜಮೀನು ಮಾರುವ ಪ್ರಸ್ತಾವನೆ ಪರಿಶೀಲಿಸಲು ಹಾಗೂ ಸೂಕ್ತ ಶಿಫಾರಸ್ಸು ಮಾಡಲು ರಾಜ್ಯ ಸಂಪುಟದ ಉಪ ಸಮಿತಿ ರಚಿಸಲಾಗಿದೆ.

ಜೆ.ಎಸ್.ಡಬ್ಲ್ಯೂ. ಕಂಪನಿಗೆ 2,000.58 ಎಕರೆ ಜಮೀನನ್ನು ಬಳ್ಳಾರಿಯ ಸಂಡೂರು ತಾಲ್ಲೂಕಿನ ತೋರಣಗಲ್ಲಿನ ಕುರೆಕುಪ್ಪವಿನಲ್ಲಿ ನೀಡಲು 2005ರಲ್ಲಿ ನಿರ್ಧರಿಸಲಾಗಿತ್ತು. ಈ ಬಗ್ಗೆ ಪರಿಶೀಲಿಸಲು ಸಂಪುಟದ ಉಪ ಸಮಿತಿ ರಚಿಸಲಾಗಿದೆ ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದ್ದಾರೆ.

ಸಂಪುಟ ಸಭೆಯ ನಂತರ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಉಪ ಸಮಿತಿ ರಚಿಸುವ ಅಧಿಕಾರ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಹಿಂದಿನ ಕಾಂಗ್ರೆಸ್ - ಜೆಡಿಎಸ್ ಮೈತ್ರಿ ಸರ್ಕಾರವೂ ಆಗಿನ ಗೃಹ ಸಚಿವ ಎಂ.ಬಿ. ಪಾಟೀಲ್ ಅವರ ನೇತೃತ್ವದಲ್ಲಿ ನಾಲ್ಕು ಸದಸ್ಯರ ಸಂಪುಟ ಉಪ ಸಮಿತಿ ರಚಿಸಿತ್ತು. ಜೆ.ಎಸ್.ಡಬ್ಲ್ಯೂ. ಸ್ಟೀಲ್‌ಗೆ ಗುತ್ತಿಗೆ ಮೇಲೆ ನೀಡಲಾಗಿದ್ದ 3,667 ಎಕರೆ ಜಮೀನನ್ನು ಆರಂಭಿಕ ಗುತ್ತಿಗೆಯಂತೆ ಮಾರಾಟವಾಗಿ ಪರಿವರ್ತಿಸಲು ಸಮಿತಿ ನಿರ್ಧರಿಸಿತ್ತು. ರಾಜ್ಯ ಸರ್ಕಾರ ಕಂಪನಿಗೆ ಜಮೀನನ್ನು ಚಿಲ್ಲರೆ ಬೆಲೆಗೆ ಮಾರುತ್ತಿದೆ ಎಂದು ಆಗ ಪ್ರತಿಪಕ್ಷವಾಗಿದ್ದ ಬಿಜೆಪಿ ಆರೋಪಿಸಿತ್ತಲ್ಲದೇ, ಎರಡು ದಿನಗಳ ಕಾಲ ಧರಣಿಯನ್ನೂ ನಡೆಸಿತ್ತು.

2005ರಲ್ಲಿ ಧರಂ ಸಿಂಗ್ ಸರ್ಕಾರ ಇದ್ದ ಸಮಯದಲ್ಲಿ ಜೆ.ಎಸ್.ಡಬ್ಲ್ಯೂ.ಗೆ 2000.58 ಎಕರೆ ಜಮೀನು ನೀಡಲಾಗಿತ್ತು. ನಂತರ 2007ರಲ್ಲಿ ಮತ್ತೆ 1,666 ಎಕರೆ ಜಮೀನು ನೀಡಲಾಗಿತ್ತು.

# ಎಟಿಎಂ ಕಾರ್ಡ್ ರಿನಿವಲ್ ನೆಪ: ಖಾತೆ ಹಣ ದೋಚಿದ ಅಪರಿಚಿತ

> **ಕಾರ್ಡ್ ನಂಬರ್ ನೀಡಿ ವಂಚನೆಗೊಳಗಾದ ಮಹಿಳೆ**

ದಾವಣಗೆರೆ, ನ.27- ಎಟಿಎಂ ಕಾರ್ಡ್ ರಿನಿವಲ್ ಮಾಡುವುದಾಗಿ ನಂಬಿಸಿ ಬ್ಯಾಂಕ್ ಅಧಿಕಾರಿ ಸೋಗಿನಲ್ಲಿ ಬ್ಯಾಂಕ್ ಖಾತೆಯಲ್ಲಿದ್ದ ಸುಮಾರು 49 ಸಾವಿರ ರೂ. ಹಣವನ್ನು ಆನ್‌ಲೈನ್ ಮುಖೇನ ದೋಚಿರುವ ಬಗ್ಗೆ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ಬಸವನಗರ ವಸಂತ ರಸ್ತೆಯ ಪಿ. ಎಸ್. ಅರ್ಚನ ವಂಚನೆಗೊಳಗಾದವರು. ಗುರುವಾರ ಅರ್ಚನ ಅವರನ್ನು ದೂರವಾಣಿ ಮುಖಾಂತರ ಸಂಪರ್ಕಿಸಿದ ಅಪರಿಚಿತನು, ತಾನು ಬ್ಯಾಂಕ್ ಅಧಿಕಾರಿ ಎಂದು ಪರಿಚಯಿಸಿಕೊಂಡು, ನಿಮ್ಮ ಎಟಿಎಂ ಕಾರ್ಡ್ ಬ್ಲಾಕ್ ಆಗುತ್ತಿದೆ.

ಕಾರ್ಡ್ ಅಪ್‌ಡೇಟ್ ರಿನಿವಲ್ ಮಾಡಲು ಎಟಿಎಂ ಕಾರ್ಡ್ ನಂಬರ್ ತಿಳಿಸಲು ಹೇಳಿದ್ದು, ಇದನ್ನು ನಂಬಿ ಈಕೆ ತನ್ನ ತಾಯಿಯ ಖಾತೆಯುಳ್ಳ ಬ್ಯಾಂಕ್ ನ ಡೆಬಿಟ್ ಕಾರ್ಡ್ ನಂಬರ್ ನ ಎಲ್ಲಾ ಮಾಹಿತಿ ನೀಡಿದ್ದು, ನಂತರ ಈಕೆಯ ಮೊಬೈಲ್ ನಂಬರ್ ಗೆ 6 ಬಾರಿ ಬಂದ ಓಟಿಪಿ ನಂಬರ್‌ಗಳನ್ನು ಪಡೆದು ಖಾತೆಯಿಂದ ಹಂತ ಹಂತವಾಗಿ ಒಟ್ಟು 49 ಸಾವಿರದ 391 ರೂ. ಹಣವನ್ನು ದೋಚಿದ್ದಾನೆ.

ಖಾತೆಯಿಂದ ಹಣ ಕಡಿತವಾದ ಬಗ್ಗೆ ಮೊಬೈಲ್‌ಗೆ ಮೆಸೇಜ್ ಬಂದಾಗ ಅಪರಿಚಿತನಿಗೆ ಕರೆ ಮಾಡಿದಾಗ ಆತ ಕರೆ ಸ್ವೀಕರಿಸಲಿಲ್ಲ.

ನಂತರ ಅನುಮಾನ ಬಂದು ಬ್ಯಾಂಕ್ ಗೆ ಹೋಗಿ ವಿಚಾರಿಸಿದಾಗ ಆನ್‌ಲೈನ್ ಮೂಲಕ ಹಣ ವಂಚನೆಯಾಗಿರುವುದು ಬೆಳಕಿಗೆ ಬಂದಿದೆ.

# ದಾವಣಗೆರೆ ತಾಲ್ಲೂಕು ಗ್ರಾಮೀಣ ಭಾಗದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಅತ್ತಿಗೆರೆ, ಆನಗೋಡು, ಮಾಯಕೊಂಡ, ಸಾಸಲುಹಳ್ಳ, ಚಿಕ್ಕಜಾಜೂರು ಹಾಗೂ ಕುಟ್ಟಿಗೇಹಳ್ಳಿ ವಾಟರ್ ವರ್ಕ್ಸ್ ವಿದ್ಯುತ್ ವಿತರಣಾ ಕೇಂದ್ರಗಳಿಂದ ಸರಬರಾಜಾಗುವ ಎಲ್ಲಾ ಮಾರ್ಗಗಳಲ್ಲಿ ಬರುವ ದಾವಣಗೆರೆ ತಾಲ್ಲೂಕಿನ ಅತ್ತಿಗೆರೆ, ಆನಗೋಡು, ಮಾಯಕೊಂಡ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ಸರಬರಾಜಾಗುವ ಎಲ್ಲಾ ಗ್ರಾಮಗಳಲ್ಲಿ ಹಾಗೂ ಹೊಳಲ್ಕೆರೆ ತಾಲ್ಲೂಕಿನ ಸಾಸಲುಹಳ್ಳ, ಚಿಕ್ಕಜಾಜೂರು ಸುತ್ತಮುತ್ತಲಿನ ಗ್ರಾಮಗಳಲ್ಲಿ ಮತ್ತು ಕುಟ್ಟಿಗೇಹಳ್ಳಿ ವಾಟರ್ ವರ್ಕ್ಸ್ ಕೇಂದ್ರಗಳಲ್ಲಿ ಇಂದು ಬೆಳಿಗ್ಗೆ 7.30 ರಿಂದ 11 ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

# ಗುಜರಾತ್ ಆಸ್ಪತ್ರೆಯಲ್ಲಿ ಬೆಂಕಿ, ಕೊರೊನಾ ಸೋಂಕಿತರ ಸಾವು

ಅಹಮದಾಬಾದ್, ನ. 27 – ಗುಜರಾತ್‌ನ ರಾಜಕೋಟ್‌ನ ಕೊರೊನಾ ನಿಯೋಜಿತ ಆಸ್ಪತ್ರೆಯಲ್ಲಿ ಬೆಂಕಿ ಕಾಣಿಸಿಕೊಂಡು, ಐವರು ಕೊರೊನಾ ಸೋಂಕಿತರು ಸಾವನ್ನಪ್ಪಿದ್ದಾರೆ.

ಬೆಂಕಿ ನಂತರ 26 ರೋಗಿಗಳನ್ನು ರಕ್ಷಿಸಲಾಗಿದ್ದು, ಅವರನ್ನು ಬೇರೆ ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಗುಜರಾತ್ ಉಪ ಮುಖ್ಯಮಂತ್ರಿ ನಿತಿನ್ ಪಟೇಲ್ ಹೇಳಿದ್ದಾರೆ. ಬೆಳಗಿನ ಜಾವ 12.30ರ ಸಮಯದಲ್ಲಿ ಆನಂದ್ ಬಂಗಲೋ ಚೌಕ್‌ನಲ್ಲಿರುವ ಉದಯ್ ಶಿವಾನಂದ ಆಸ್ಪತ್ರೆ ಐ.ಸಿ.ಯು. ವಾರ್ಡ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ.

ನಾಲ್ಕು ಮಹಡಿಗಳ ಆಸ್ಪತ್ರೆಯ ಮೊದಲ ಮಹಡಿಯಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಆಗ ಐ.ಸಿ.ಯು. ವಾರ್ಡ್‌ನಲ್ಲಿದ್ದ 11 ರೋಗಿಗಳ ಪೈಕಿ ಐವರು ಸಾವನ್ನಪ್ಪಿದ್ದಾರೆ. ಬೆಂಕಿ ಇತರೆ ಮಹಡಿಗಳಿಗೆ ಹರಡದಂತೆ ತ್ವರಿತ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ರಾಜಕೋಟ್ ಪೊಲೀಸ್ ಆಯುಕ್ತ ಮನೋಜ್ ಅಗರ್‌ವಾಲ್ ತಿಳಿಸಿದ್ದಾರೆ.

# 30ರಂದು ಸಕಾಲ ಸಪ್ತಾಹ ಆಚರಣೆ

ದಾವಣಗೆರೆ, ನ.27 - ತಾಲ್ಲೂಕು ಕಚೇರಿಯಲ್ಲಿ ಸಾರ್ವಜನಿಕರಿಗೆ ಸಕಾಲ ಕುರಿತು ಅರಿವು/ಜಾಗೃತಿ ಮೂಡಿಸುವ ಸಲುವಾಗಿ ಹೆಲ್ಪ್‌ಡೆಸ್ಕ್ ಸ್ಥಾಪಿಸಲಾಗಿದೆ.

ಸಕಾಲ ಕಾರ್ಯನಿರ್ವಹಣೆಯ ಕುರಿತು ಪ್ರಶ್ನಾವಯಳಿನ್ನು ಸಾರ್ವಜನಿಕರಿಗೆ ವಿತರಿಸಲಾಗುವುದು. ಸಾರ್ವಜನಿಕರು ಹೆಲ್ಪ್ ಡೆಸ್ಕ್ ಸಹಾಯದೊಂದಿಗೆ ಪ್ರಶ್ನಾವಳಿಯನ್ನು ಭರ್ತಿ ಮಾಡಿ ಸಕಾಲ ಕುರಿತು ತಮ್ಮ ಅಭಿಪ್ರಾಯದೊಂದಿಗೆ ಸಲಹೆಗಳನ್ನು ನೀಡಲು ಅವಕಾಶವಿರುತ್ತದೆ.

ನ.30 ರಿಂದ ಡಿ.5 ರವರೆಗೆ ಸಕಾಲ ಸಪ್ತಾಹ ಆಚರಿಸುವಂತೆ ಸರ್ಕಾರ ನಿರ್ದೇಶನ ನೀಡಿದ್ದು, ಸಾರ್ವಜನಿಕರು ಸಕಾಲ ಸಪ್ತಾಹ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ತಹಶೀಲ್ದಾರ್ ಗ್ರೇಡ್-2 ಕೆ.ಆರ್ ದೇವರಾಜ್ ತಿಳಿಸಿದ್ದಾರೆ.


14ನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀ ಬಿ.ಜಿ. ರಂಗಪ್ಪ ಬಂಡೇಬೊಮ್ಮನಹಳ್ಳಿ
ಮಾಲೀಕರು
ದಶರಥ ಗ್ಲಾಸ್, ಪ್ಲೈವುಡ್ಸ್ ಅಂಡ್ ಹಾರ್ಡ್‌ವೇರ್ಸ್
ಆರ್.ಎಂ.ಸಿ. ಲಿಂಕ್ ರೋಡ್, ದಾವಣಗೆರೆ.
ನೀವು ನಮ್ಮನ್ನಗಲಿ ಇಂದಿಗೆ ಹದಿನಾಲ್ಕು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ,
ಪತ್ನಿ ಮತ್ತು ಮಕ್ಕಳು ಹಾಗೂ
ಬಂಡೇಬೊಮ್ಮನಹಳ್ಳಿ ಮತ್ತು ಸಿದ್ರಾಮಜ್ಜರ ವಂಶಸ್ಥರು.












JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte